
# ಅಪರಂಜಿ

ತಿಳಿನಗೆಯ ಕಾರಂಜಿ

ಮಾರ್ಚ್–2024




ಬಿಡಿ ಪ್ರತಿ: ರೂ. 10/–

Ravi Graphics
OFFSET PRINTERS

Bringing colours alive

*What we specialize into :*

- Books
- Brochures
- Catelogues
- Boxes
- Mono Cartons



53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com

bag factory
bagfactory.co.in

Bag is everything

Our Promise

- 100% recyclable paper bags & pouches
- Pan-India delivery
- Premium customisation for high-street brands




Reach us for your paper bag requirements

+91 89719 95599 | sales@bagfactory.co.in | bagfactory.co.in

ಮಾರಿಯೋ ಮಿರಾಂಡಾ ಚಿತ್ರಣ

" ಬೀದಿಯ ತಿರುವಿನಲ್ಲಿ"



Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**







MALLIGE HOSPITAL
PERSONALISED COMPLETE HEALTHCARE
MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages : 40+4 APARANJI KANNADA MONTHLY.

**ಸಂಪಾದಕ ಮಂಡಳಿ**

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

ಚಂದಾ ವಿವರ :

ಬಿಡಿ ಪ್ರತಿ : ರೂ. 10/-

ವಾರ್ಷಿಕ ಚಂದಾ : ರೂ. 100/-

ಹತ್ತು ವರ್ಷದ ಚಂದಾ: ರೂ. 1000/-

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 41

ಸಂಚಿಕೆ – 06

ಮಾರ್ಚ್ – 2024

*ಈ ಸಂಚಿಕೆಯಲ್ಲಿ...*


| | | |
|---|---|---|
| ಕಿಡಿ | ಪ್ರಕಾಶ್ | 1 |
| ಪಂಚ್‌ಗನಿ ಪಾಕಪಂಡಿತ ಪ್ರಸಂಗ | ವತ್ಸನ | 3 |
| ಲಿಫ್ಟ್ ಚಲಿಸುತ್ತಿಲ್ಲ | ಶೈಲಸುತೆ ರಂಜಿತಾ | 9 |
| ಲೆಸ್ ಆದರೆ ಲಾಸ್ ಏನಿಲ್ಲ | ಕೆ.ಎಸ್. ಸೋಮೇಶ್ವರ | 11 |
| ನಗೋದಲ್ವಾ? | ಸುಚಿತ್ರಾ ಹೆಗಡೆ | 13 |
| ಕರ್ಮಾ ರಿಟರ್ನ್ಸ್ | ಮಿಥುನ ಧಾರವಾಡ | 17 |
| ಅಣ್ಣನ ಅವಾಂತರ | ಪುಷ್ಪಲತಾ. ಟಿ.ಜಿ | 20 |
| ತುಂತುರು | ದಂನಅ | 24 |
| ಪವಮಾನ ಪಂಡಿತರ ಪ್ರಣಯ....... | ಪಾಲಹಳ್ಳಿ ವಿಶ್ವನಾಥ್ | 25 |
| ದೈವೀಕವೂ, ಅರಸೊತ್ತಿಗೆಯೂ....... | ಎಸ್. ನರೇಂದ್ರ | 29 |
| ಪುಟ್ಟೂರಾಯನ ಪಥ್ಯ | ಬೀರಣ್ಣ | 31 |


**ವ್ಯಂಗ್ಯ ಚಿತ್ರಗಳು :**

**ಹೊರಪುಟ : ಇಂಟರ್‌ನೆಟ್ ಕೃಪೆ**

**ಒಳಪುಟಗಳು : ರಾಂಕಿ, ಆದರ್ಶ ಪೈ, ರಘುಪತಿ ಶೃಂಗೇರಿ**

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003.*

email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು-560 068. ದೂರವಾಣಿ: 080-26688488. email:belururamamurthy@gmail.com

**For Online payment of Subscription:** Name : KORAVANJI APARANJI TRUST

Current Account No.: 109804180000056, IFS Code : SVCB0000098

SVC Co-operative Bank Ltd., Branch: Malleshwaram

Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*



# ಅಪರಂಜಿ ಕಿಡಿ

● ಪ್ರಕಾಶ್

ಕಬ್ಬನ್ ಪಾರ್ಕಿನಲ್ಲಿ ಬಹು ಮಹಡಿ ಕಟ್ಟಡದ ಆಲೋಚನೆ

ದಿನಪತ್ರಿಕೆ

ಸಧ್ಯ, ಅಗಾಧವಾದ ಪ್ರತಿಭಟನೆ : ಫಲಶ್ರುತಿಗೆ ಮಣಿದ ಸರ್ಕಾರ

ಪಾರ್ಕಿನ ಮರಗಳೆಲ್ಲ ನಲಿದವಂತೆ !

* * *

" ಗ್ಯಾರಂಟಿ " ಎಂಬ ಪದವನ್ನು ಕೇಳಿದರೆ ಭಯ ಆಗುತ್ತೆ !!

* * *

ರೆನೆ ದಕರ್ತೆ ಈಗ ಇದ್ದಿದ್ದರೆ, "ಐ ಕ್ಲಿಕ್, ಅದರಿಂದ ನಾನು ಇದ್ದೇನೆ"

ಎಂದು ಹೇಳುತ್ತಿದ್ದನೇನೋ !?

* * *

"ನಾನು ರೋಬೋಟ್ ಅಲ್ಲ" ಅಂತ ಬಟನ್ ಒತ್ತೋದರಲ್ಲಿ ಅನಿರ್ವಚನೀಯ ಆನಂದ ಆಗುತ್ತೆ !!

* * *

ದೇವರ ಹೆಸರಿನಲ್ಲಿ ಲೂಟಿ ಮಾಡಿದವರಿಗೆ ಶಿಕ್ಷೆ

ಪತ್ರಿಕೆ

ಭಗವಂತ ಬೆಚ್ಚಿದನಂತೆ !!

* * *

ಕ್ರಿಕೆಟ್ ಬೆಟ್ಟಿಂಗ್ ಹಗರಣ;

ಪತ್ರಿಕೆ

ಆಟಕ್ಕಿಂತ ಹಣದ ಲೆಕ್ಕ ಮುಖ್ಯ ಹಲವರಿಗೆ !!

* * *

ಕೇಂದ್ರದ ನಡೆ; ರಾಜ್ಯ ಪಾಲರ ಟೀಕೆ

ದಿನಪತ್ರಿಕೆ

ರಾಜ ಭವನದಲ್ಲಿ ಗುಸು ಗುಸು ಶುರುವಾಗಿರಬೇಕು !!!

■

# ಪಂಚ್‌ಗನಿ ಪಾಕಪಂಡಿತ ಪ್ರಸಂಗ

ವತ್ಸನ

ಆ ಸಂಜೆ ನಾನು ವಿಜಯವಾಣಿ ಪದಬಂಧ ಬಿಡಿಸುತ್ತಾ ಕೂತಿದ್ದೆ. ತಾ ಇಂದ ಶುರುವಾಗುವ ನಾಲ್ಕು ಅಕ್ಷರಗಳ ಪದ ಹುಡುಕಬೇಕಾಗಿತ್ತು.. ಕ್ಲೂ ಏನು ಗೊತ್ತೆ? "ಹುಂಜಕ್ಕೊಂದು ಚೆಂದದ ಪದ". ಅರೆ, ಇದ್ಯಾವ ಪದವಪ್ಪಾ ಅಂತ ಚಿಂತಿಸುತ್ತಾ ಕೂತೆ. ತಕ್ಷಣ ನೆನಪಿಗೆ ಬಂತು. ನಾನೊಂದು ಕ್ಲಿಷ್ಟಪದಕೋಶವನ್ನ ಹಲವು ವರ್ಷಗಳಿಂದ ಬರೆದಿಟ್ಟುಕೊಂಡಿದ್ದೇನೆ. ಅದರಲ್ಲಿ ಹಿಂದಿನ ಪದಬಂಧಗಳಲ್ಲಿ ನಾನು ಕಂಡ ಕ್ಲಿಷ್ಟಪದಗಳನ್ನೆಲ್ಲಾ ನಮೂದಿಸಿರುವೆ. ಅದರಲ್ಲಿ ಕೋಳಿ–ಹುಂಜ ಶೀರ್ಷಿಕೆಯ ಕೆಳಗೆ ಹುಡುಕಿದೆ. "ತಾಮ್ರಚೂಡ" ಎಂಬ ಪದ ಕಣ್ಣಿಗೆ ಬಿತ್ತು. "ಭಲೆ" ಎನ್ನುತ್ತ ವಿಜಯೋತ್ಸಾಹದಿಂದ ಮೇಲಿನಿಂದ ಕೆಳಗೆ ಇದ್ದ ನಾಲ್ಕು ಮನೆಗಳಲ್ಲಿ ಗುಂಡಗೆ ತಾಮ್ರಚೂಡ ಎಂದು ಬರೆಯುತ್ತಿದ್ದಾಗ, ಶರಲೇಖ ಬಾಗಿಲು ತೆರೆದು ಒಳಕ್ಕೆ ಆಗಮಿಸಿದ್ದ.

"ತಾಮ್ರಚೂಡ" ತಾನೆ ನೀನು ಬರೆದದ್ದು ?" ಅಂತ ಅವ ಕೇಳಿದಾಗ ನನಗೆ ನನ್ನ ಕಿವಿಗಳನ್ನೇ ನಂಬಲಾಗಲಿಲ್ಲ. "ಯಾವಾಗಿನಿಂದ ನಿನಗೆ ಈ ಟೆಲಿಪತಿ ಶಕ್ತಿ ಬಂತೋ ಮಹರಾಯ ?" ಅಂತ ಅವನನ್ನ ಪ್ರಶ್ನಿಸಿದೆ.

"ಟೆಲಿಪತೀನೂ ಇಲ್ಲ ಏನೂ ಇಲ್ಲ. ಇವತ್ತು ಬೆಳಗ್ಗೆನೇ ನಾನು ಈ ಪದಬಂಧದ ಮೇಲೆ ಕಣ್ಣಾಡಿಸಿದ್ದೆ. ನೀನು ರೆಗ್ಯುಲರಾಗಿ ಇದನ್ನ ಬಿಡಿಸೋದು ನನಗೆ ತಿಳಿದಿದ್ದರಿಂದ ನಾನು ಪದಗಳನ್ನು ಬರೆಯದೇ ಮನಸ್ಸಿನಲ್ಲೇ ಬಿಡಿಸಲು ಶುರು ಮಾಡಿದೆ. ಹುಂಜದ ಪರ್ಯಾಯ ಪದ ಬಿಟ್ಟು ಮಿಕ್ಕವೆಲ್ಲಾ ಸುಲಭವಾಗಿಯೇ ಇತ್ತು. ನಿನ್ನ ಪದಕೋಶ ನೋಡಿದ ಮೇಲೆ ಅದೂ ತಿಳಿಯಿತು. ನೀನೂ ಆ ಪದದಲ್ಲೇ ಎಡವುತ್ತೀಯ ಅಂದುಕೊಂಡಿದ್ದೆ. ನಾನು ಒಳಕ್ಕೆ ಬಂದಾಗ, ಆಗತಾನೆ ನೀನು ಆ ಕ್ಲಿಷ್ಟಪದಕೋಶ ಪಕ್ಕಕ್ಕಿಟ್ಟು ಏನೋ ಬರೆಯಲು ಶುರು ಮಾಡಿದ್ದು ನೋಡಿ, ನಾನು ಹಾಗಂದೆ. ನನ್ನ ಊಹೆ ನಿಜವಾಗಿತ್ತು" ಎಂದ ಶರಲೇಖ.

"ಪದಬಂಧ ಹಾಗಿರಲಿ, ಈಗ ಹೊಸದೊಂದು ಸವಾಲು ನಮ್ಮ ಮುಂದಿದೆ. ಹಿಂದೊಮ್ಮೆ ನಾನು ಪರಿಹರಿಸಿದ ಚೋಳರ ಕಾಲದ ರಾಜದಂಡ ಪ್ರಸಂಗ ನೆನಪಿದೆ ತಾನೆ ?" ಎಂದು ಕೇಳಿದ ಶರಲೇಖ.

"ನೆನಪಿಲ್ಲದೆ ಏನು? ಚಿತ್ರಶಾಲೆಯಲ್ಲಿ, ಅಮೂಲ್ಯ ಚಿತ್ರವೊಂದನ್ನು ಕಳ್ಳನೊಬ್ಬ ಗೋಡೆಯಲ್ಲಿ ಬಚ್ಚಿಟ್ಟಿದ್ದು. ನೀನು ಜಕಣಾಚಾರಿಯ ತರಹ ಗೋಡೆ ಒಡೆದು ಆ ಚಿತ್ರವನ್ನ ಪುನಃ ಚಿತ್ರಶಾಲೆಗೆ ಹಿಂತಿರುಗಿಸಿದ್ದು. ಆ ಪ್ರಸಂಗ ತಾನೆ?"

"ಹೌದು. ಆಗ ಭೇಟಿ ಮಾಡಿದ್ದ ವಿಮಾ ಸಂಸ್ಥೆಯ ನಿರ್ದೇಶಕ ಶ್ಯಾಮಸುಂದರ್, ಇಂದು ಬೆಳಗ್ಗೆ ನನಗೆ ಫೋನ್ ಮಾಡಿದ್ದರು."

"ಏನಂತೆ?"

"ಇವರ ವಿಮಾ ಕಂಪನಿಯ ಪುಣೆ ಶಾಖೆಯಲ್ಲಿ ಒಂದು ದೊಡ್ಡ ಸಮಸ್ಯೆ ತಲೆದೋರಿದೆಯಂತೆ. ಅಲ್ಲಿನ ಮ್ಯಾನೇಜರ್ ಶ್ಯಾಮಸುಂದರ್ ಮೂಲಕ ನಮ್ಮ

ಸಹಾಯ ಕೋರಿದ್ದಾರೆ. "ತೀರ ತುರ್ತಿನ ವಿಷಯ" ಅಂತಲೂ ಹೇಳಿದರು. ನನಗೆ ಇಲ್ಲ ಅನ್ನಲು ಮನಸ್ಸು ಬರಲಿಲ್ಲ. ನಾಳೆ ಬೆಳಗ್ಗೆ ಅವರೊಂದಿಗೆ ನಾವು ಪುಣೆಗೆ ವಿಮಾನ ಹತ್ತಬೇಕಾಗುತ್ತೆ. ಎಂಟು ಗಂಟೆಗೆ ಫ್ಲೈಟು. ಐದೂವರೆಗೆ ನಾವು ಮನೆ ಬಿಡಬೇಕು" ಎಂದ ಶರಲೇಖ. ಅಲ್ಲ, ನೀನು ಬರಕ್ಕಾಗುತ್ತಾ ಅಂತ ಒಂದು ಮಾತು ಕೇಳಿದ್ರೆ ಆಗ್ತಿರಲಿಲ್ಲವಾ. ಟೇಕಿಂಗ್ ಫಾರ್ ಗ್ರಾಂಟೆಡ್ ಅಂದ್ರೆ ಅದೇ ನೋಡಿ. ಆನ್ ದ ಅದರ್ ಹ್ಯಾಂಡ್, ಬಿಟ್ಟಿ ಪುಣೆ ಪ್ರವಾಸ. ಅಲ್ಲದೆ ಶರಲೇಖನ ಜೊತೆ ಹೊರಟಾಗ ಕುತೂಹಲಕಾರಿ ಘಟನೆಗಳ ಸುರಿಮಳೆ ಆಗೋದಂತೂ ಖಂಡಿತ. ಹಾಗಾಗಿ ಉತ್ಸಾಹ, ಉಲ್ಲಾಸ ತುಂಬಿದ ಮನದಿಂದಲೇ ಆ ರಾತ್ರಿ ವಿರಮಿಸಿದೆ.

ಮಾರನೆಯ ಬೆಳಗ್ಗೆ ಬೆಂಗಳೂರಿನಿಂದ ವಿಮಾನದಲ್ಲಿ ಹೊರಟು ಪುಣೆ ಸೇರಿದಾಗ ಘಂಟೆ ಹನ್ನೊಂದಾಗಿತ್ತು. ಪುಣೆ ಶಾಖೆಯ ಮುಖ್ಯಸ್ಥ ಮೋಹನ್ ಗಾವಂಡ್ ನಮ್ಮನ್ನು ಇದಿರುಗೊಂಡು, ಆಫೀಸಿನ ಇನ್ನೋವಾದಲ್ಲಿ ನಾವೆಲ್ಲಾ ಕುಳಿತ ನಂತರ ಕಾರು ಚಲಿಸಿತು. ಮೋಹನ್ ನಗುಮುಖದ, ಸರಸ ಸಂಭಾಷಣೆಯ ವ್ಯಕ್ತಿ. "ಶ್ಯಾಮ್ ನಿಮ್ಮನ್ನು ಇಲ್ಲಿಗೆ ಕರೆತಂದದ್ದು ನನ್ನ ಸುಯೋಗ. ವಿಷಯ ತುರ್ತಿನದ್ದಾದ್ದರಿಂದ ಮೊದಲೇ ವಿವರಗಳನ್ನು ತಿಳಿಸಲು ಆಗಲಿಲ್ಲ. ಅದಕ್ಕೆ ಕ್ಷಮೆ ಇರಲಿ. ಸಂಕ್ಷಿಪ್ತವಾಗಿ ಹೇಳುವುದಾದರೆ, ನಮ್ಮಿಂದ ವಿಮೆ ಇಳಿಸಿರುವ ಒಂದು ಸಂಸ್ಥೆಯಲ್ಲಿ ಒಂದು ಅಮೂಲ್ಯ ವಸ್ತು ಕಾಣೆಯಾಗಿದೆ. ಅದನ್ನು ಪತ್ತೆ ಹಚ್ಚಲು ನೀವೇ ಸಮರ್ಥರು ಅಂತ ನಿರ್ಧರಿಸಿ ನಿಮ್ಮನ್ನು ಇಲ್ಲಿಗೆ ಕರೆಯಬೇಕಾಯಿತು. ಆ ಸಂಸ್ಥೆ ಇರುವುದು ಇಲ್ಲಿಂದ ಸುಮಾರು ನೂರು ಕಿಮೀ ದೂರ ಇರುವ ಪಂಚ್‌ಗನಿ ಎಂಬ ಗಿರಿಧಾಮದಲ್ಲಿ. ಈಗ ನೇರವಾಗಿ ಅಲ್ಲಿಗೇ ಹೊರಟಿದ್ದೇವೆ....... "ಎಂದು ಮೋಹನ್ ಹೇಳುತ್ತಿರುವಾಗ ಶ್ಯಾಮ್ ಮಧ್ಯೆ ಬಾಯಿ ಹಾಕಿ, "ಪುಣೆಯಿಂದ ಪಂಚ್‌ಗನಿಯ ದಾರಿ ಪ್ರಕೃತಿ ಸೌಂದರ್ಯಕ್ಕೆ ಖ್ಯಾತಿ ಪಡೆದಿದೆ. ಹೇಗೂ ಬಯಲು ಸೀಮೆಯಿಂದ ಬಂದಿರೋರು ಇವರು. ಸ್ವಲ್ಪ ಈ ಪರಿಸರವನ್ನು ಸವಿಯಲಿ. ಹೇಗೂ ಪಂಚ್‌ಗನಿ ಸೇರಿದ ನಂತರ ಎಲ್ಲ ವಿವರಗಳನ್ನು ಪ್ರತ್ಯಕ್ಷವಾಗಿಯೇ ತಿಳಿಯಬಹುದು" ಎಂದ ನಂತರ ಮೋಹನ್ ದಾರಿಯಲ್ಲಿ ಕಂಡ ದೃಶ್ಯಗಳನ್ನೆಲ್ಲಾ ಖುಷಿಯಿಂದ ವಿವರಿಸುತ್ತಾ ಬಂದರು. ಸುಮಾರು ಅರ್ಧ ದಾರಿ ಕ್ರಮಿಸಿದ ನಂತರ ಹಾದಿಬದಿಯ ಟೀ ಅಂಗಡಿಯೊಂದರಲ್ಲಿ "ವಡಾಪಾವ್" ತಿಂದದ್ದಾಯಿತು.

ಅಲ್ಲಿಂದ ಸ್ವಲ್ಪ ಮುಂದೆ ಸಾಗಿದ ನಂತರ ಘಾಟ್ ಹಾದಿ ಸುತ್ತಿ ಸುತ್ತಿ ಮೇಲಕ್ಕೇರಲು ತೊಡಗಿತು.

ಮೋಹನ್ ಮತ್ತೆ ಪ್ರಾರಂಭಿಸಿದರು. "ನಾವು ಹೋಗುತ್ತಿರುವ ಜಾಗ "ಅಂತರರಾಷ್ಟ್ರೀಯ ನೈತಿಕ ಪುನರುತ್ಥಾನ ಸಂಸ್ಥೆ" ಎಂಬ ಹೆಸರಿನ ಒಂದು ಸಮಾಜ ಸೇವಾ ಸಂಘಟನೆ. ಈ ಸಂಸ್ಥೆ ಸ್ಥಾಪಿತಗೊಂಡಾಗ ಬರ್ಮಾ ದೇಶದ ರಾಜವಂಶದವರು ಪಂಚ್‌ಗನಿಯಲ್ಲಿ ನಿರ್ಮಿಸಿದ್ದ ತಮ್ಮ ಅರಮನೆಯನ್ನು ಅದರಲ್ಲಿದ್ದ ಎಲ್ಲ ಪರಿಕರಗಳ ಜೊತೆ ಈ ಸಂಘಟನೆಗೆ ಬಳುವಳಿಯಾಗಿ ನೀಡಿದರು. ಅಂದಿನಿಂದ ಎಂದರೆ ಕಳೆದ ಐದು ದಶಕಗಳಿಂದ ಸಂಸ್ಥೆಯ ಕಾರ್ಯಕ್ರಮಗಳೆಲ್ಲಾ ಈ ವಿಶಾಲವಾದ ಅರಮನೆ ಮತ್ತು ಅದರ ಸುತ್ತಣ ಉದ್ಯಾನವನದಲ್ಲೇ ನಡೆಯುತ್ತಾ ಬಂದಿವೆ. ಒಂದು ವಾರದ ಹಿಂದೆ, ಈ ಅರಮನೆಯ ಒಂದು ಉಪ ಕೊಠಡಿಯಲ್ಲಿದ್ದ ಅತಿ ಬೆಲೆ ಬಾಳುವ ನಿಲುವುಗನ್ನಡಿಯೊಂದು ಕಾಣೆಯಾಗಿದೆ..... "ಎನ್ನುತ್ತಿರುವಾಗಲೇ ಹಾದಿಯಲ್ಲಿ ನಮ್ಮ ಮುಂದೆ ಭವ್ಯವಾದ ದ್ವಾರವೊಂದು ಕಂಡುಬಂತು." ಇದೇ ಸಂಸ್ಥೆಯ ಪ್ರವೇಶ

ದ್ವಾರ. ಮುಂದಿನ ವಿವರಗಳೆಲ್ಲವನ್ನು ಸಂಸ್ಥೆಯ ನಿರ್ದೇಶಕರೇ ಹೇಳುವರು." ಎನ್ನುತ್ತಾ ಮೋಹನ್, ಹತ್ತಿರದಲ್ಲಿ ನಿಂತಿದ್ದ ಸೆಕ್ಯೂರಿಟಿ ಗಾರ್ಡ್‌ಗೆ ತಮ್ಮ ಮೊಬೈಲ್‌ನಲ್ಲಿದ್ದ ಪಾಸ್ ತೋರಿಸಿದ ನಂತರ ಇನ್ನೋವಾ ಒಳಕ್ಕೆ ಪ್ರವೇಶಿಸಿತು.

ವಾಹನ ಸಾಗುತ್ತಿದ್ದಂತೆ ಎರಡು ಬದಿಗಳಲ್ಲೂ ಇದ್ದ ಹಸಿರಿನ ರಾಶಿ, ಎಡ ಬದಿಗೆ ಹಸಿರಿನಾಚೆ ಹರಡಿದ್ದ ಬಿಳಿ ಮುಗಿಲು, ದೂರದ ಗುಡ್ಡದ ಮೇಲೆ ಕಾಣುತ್ತಿದ್ದ ಕೆಂಪು ಹೆಂಚಿನ ಪುಟ್ಟ ಮನೆಗಳು, ಇವೆಲ್ಲಾ ನಮ್ಮ ಊಟಿ, ಕೂನೂರುಗಳನ್ನು ನೆನಪಿಸುತ್ತಿದ್ದವು. ಸ್ವಲ್ಪದರಲ್ಲೇ ನಮ್ಮ ಕಾರು ಭವನದ ಮುಂದೆ ಬಂದು ನಿಂತಿತು. ಮೋಹನ್ ನಮ್ಮೆಲ್ಲರನ್ನೂ ಸಂಸ್ಥೆಯ ನಿರ್ದೇಶಕರ ಆಫೀಸಿಗೆ ಕರೆದೊಯ್ದು.

ನಿರ್ದೇಶಕರ ಹೆಸರು ರತನ್ ಥೇಯಮ್. ಮಣಿಪುರದ ಕಡೆಯವರು. ನಮ್ಮನ್ನು ಬಹು ಆತ್ಮೀಯತೆಯಿಂದ ಬರಮಾಡಿಕೊಂಡರು. ಉಭಯ ಕುಶಲೋಪರಿಗಳೆಲ್ಲ ಆದನಂತರ ಅವರು ನೇರವಾಗಿ ವಿಷಯಕ್ಕೆ ಬಂದರು.

"ನೋಡಿ ಸಜ್ಜನರೆ, ನಮ್ಮ ಸಂಸ್ಥೆ ಎಲ್ಲ ದೇಶಗಳ ಎಲ್ಲ ಜನತೆಗಳಲ್ಲಿ ನೈತಿಕ ಜಾಗೃತಿಯನ್ನು ಮೂಡಿಸಲು ಕಂಕಣಬದ್ಧವಾಗಿರುವ ಒಂದು ಸಂಘಟನೆ. ಇಲ್ಲಿ ಪ್ರತಿ ತಿಂಗಳೂ ವಿವಿಧ ದೇಶಗಳಿಂದ ಪ್ರತಿನಿಧಿಗಳು ಬಂದು ನೈತಿಕ ಮೌಲ್ಯಗಳ ಬಗ್ಗೆ ಕಮ್ಮಟಗಳನ್ನು ನಡೆಸುತ್ತಾರೆ. ನಮ್ಮ ಘನ ಉದ್ದೇಶವನ್ನು ಮೆಚ್ಚಿಕೊಂಡ ಬರ್ಮಾ ರಾಜವಂಶಸ್ಥರು ಈ ಭವ್ಯ ಅರಮನೆಯನ್ನೇ ನಮ್ಮ ಬಳಕೆಗಾಗಿ ಬಿಟ್ಟುಕೊಟ್ಟಿದ್ದಾರೆ. ಇಂತಹ ಪವಿತ್ರ ಸನ್ನಿಧಿಯಲ್ಲಿ ಒಂದು ವಾರದ ಹಿಂದೆ ಒಂದು ಬಹು ಬೆಲೆ ಬಾಳುವ ಆ್ಯಂಟೀಕ್ ಎನ್ನಬಹುದಾದ ಒಂದು ನಿಲುವುಗನ್ನಡಿ ಕಾಣೆಯಾಗಿದೆ. ಈಗ ಇಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ಕಮ್ಮಟದಲ್ಲಿ ಹದಿನೈದು ದೇಶಗಳ ವಿವಿಧ ಗಣ್ಯರು ಸೇರಿದ್ದಾರೆ. ಈ ಪ್ರಸಂಗವನ್ನು ಪೊಲೀಸರ ತನಿಖೆಗೆ ಒಪ್ಪಿಸಿದರೆ, ಅವರು ಸಹಜವಾಗಿಯೇ ಇಲ್ಲಿರುವ ಎಲ್ಲ ಅತಿಥಿಗಳನ್ನೂ ವಿಚಾರಣೆಗೆ ಒಳಪಡಿಸುವುದು ನಿಶ್ಚಯ. ಆಗ ಅವರಿಗೆಲ್ಲಾ ನಮ್ಮ ಬಗ್ಗೆ ಏನು ಅನ್ನಿಸುತ್ತದೆ ನೀವೇ ಊಹಿಸಬಹುದು. ಹಾಗಾಗಿ ನಮ್ಮ ಮಿತ್ರ ಮೋಹನ್‌ರವರ ಸಲಹೆ ಕೇಳಿದೆ. ಅವರು ಬೆಂಗಳೂರಿನಿಂದ ನಿಮ್ಮನ್ನು ಕರೆಸುವುದಾಗಿ ಭರವಸೆ ನೀಡಿದರು. ಈಗೇನು ಮಾಡಬೇಕು? ನನಗಂತೂ ಏನೂ ತೋಚದಾಗಿದೆ" ಎಂದರು ರತನ್ ಥೇಯಮ್.

ಶರಲೇಖ ಎಲ್ಲವನ್ನು ಸಾವಧಾನವಾಗಿ ಕೇಳಿಸಿಕೊಳ್ಳುತ್ತಿದ್ದ. ಈಗ ಅವನು ತುಂಬ ಸಹಾನುಭೂತಿಯಿಂದ ಉತ್ತರಿಸಿದ. "ನಿಮ್ಮ ಸಂಸ್ಥೆಯ ಉದಾತ್ತ ಗುರಿ ನಿಜಕ್ಕೂ ಮೆಚ್ಚುವಂತಹದು. ಸದಾ ನೈತಿಕತೆಯ ಧ್ಯಾನ ಮಾಡುತ್ತಿರುವ ನಿಮ್ಮಂತಹವರಿಗೆ ಇಂತಹ ಅನೈತಿಕ ಕಾರ್ಯ ಅರ್ಥವೇ ಆಗದಿರುವುದು ಸಹಜವೇ. ಏನೂ ಯೋಚನೆ ಮಾಡಬೇಡಿ. ನಾನು ಈಗಲೇ ಕಾರ್ಯೋನ್ಮುಖನಾಗಿ ನಿಮ್ಮ ಸಮಸ್ಯೆಯನ್ನು ಪರಿಹರಿಸುವ ಪ್ರಯತ್ನ ನಡೆಸುವೆ" ಎಂದ ಶರಲೇಖ.

ಥೇಯಮ್ ಅವರು ಫೋನ್ ಮಾಡಿ ಆ ಕ್ಯಾಂಪಸ್‌ನ ಮೇಲ್ವಿಚಾರಕ ಷಣ್ಮುಗಮ್ ಅವರನ್ನು ಕರೆಸಿ ನಮ್ಮೆಲ್ಲರನ್ನೂ ಅವರಿಗೆ ಪರಿಚಯಿಸಿದರು.

"ನಿಮಗೆ ಏನೇ ಸಹಾಯ ಬೇಕಾದರೂ ಇವರನ್ನು ಸಂಪರ್ಕಿಸಬಹುದು. ಇವರ ಮೊಬೈಲ್ ವಿನಿಮಯ ಮಾಡಿಕೊಂಡರೆ ಅನುಕೂಲ" ಎಂದ ನಂತರ ಷಣ್ಮುಗಮ್ ನಮ್ಮನ್ನು ಆ ಕ್ಯಾಂಪಸ್‌ನಲ್ಲಿದ್ದ ಅತಿಥಿಗೃಹವೊಂದರಲ್ಲಿದ್ದ ಸುಸಜ್ಜಿತ ಕೊಠಡಿಗಳಲ್ಲಿ ಇಳಿಸಿದರು.

ಆ ಸಂಜೆಯೇ ಶರಲೇಖ ಷಣ್ಮುಗಮ್‌ರವರೊಡನೆ ಹೊರಟು ತನ್ನ ತನಿಖಾ ಕಾರ್ಯ ಪ್ರಾರಂಭಿಸಿದ. ನಾನು ಆ ಸುಂದರ ಪರಿಸರದಲ್ಲಿ ನನ್ನ ಸಂಜೆಯ ವಾಯುವಿಹಾರ ನಡೆಸಿದೆ. ಶ್ಯಾಮ್ ಮತ್ತು ಮೋಹನ್ ಕಾರ್ಯನಿಮಿತ್ತ ಪುಣೆಗೆ ಹಿಂತಿರುಗಿದರು.

ಸಂಜೆ ಆರು ಘಂಟೆಗೆ ನನಗೆ ಥೇಯಮ್‌ರವರಿಂದ ಮೊಬೈಲ್ ಕಾಲ್ ಬಂತು. "ಈ ಸಂಜೆ ನಮ್ಮ ಸಭಾಂಗಣದಲ್ಲಿ ನೈತಿಕತೆಯ ಬಗ್ಗೆ ಒಂದು ವಿಚಾರ ಸಂಕಿರಣವಿದೆ. ನಿಮಗೆ ಆದರದ ಆಹ್ವಾನ. ಬರುವಿರಾ?" ಎಂದು ಕೇಳಿದರು. ಕುತೂಹಲದಿಂದ ನಾನು ಅಲ್ಲಿಗೆ ಹೋದೆ.

ಸಭಾಂಗಣ ವಿಶಾಲವಾಗಿತ್ತು. ಥೇಯಮ್ ನನಗೆ ಹಲವು ಅತಿಥಿಗಳನ್ನ ಪರಿಚಯಿಸಿದರು. ಅಮೆರಿಕೆಯ ಕಪ್ಪು ಜನಾಂಗದ ಡೇವಿಡ್ ಜೋನ್ಸ್, ಆಸ್ಟ್ರೇಲಿಯಾದ ಮಾಲ್ಕಮ್, ದೆಹಲಿಯ ಸೂರ್ಜಿತ್, ಗುಜರಾತಿನ ಆನಂದಿ ಬೆನ್ ಮತ್ತು ಇನ್ನೂ ಅನೇಕರು ನೈತಿಕತೆಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನ ಹಂಚಿಕೊಂಡರು. ಮಾತುಕತೆಗಳೆಲ್ಲಾ ಆಸಕ್ತಿ ಮೂಡಿಸುವಂತಿದ್ದರೂ, ಅವು ಜೀವನದ ಕಟು ಸತ್ಯದಿಂದ ದೂರವೇ ಇರುವ ಆದರ್ಶವಾದದಂತೆ ಕಂಡಿತು.

ಸಂಜೆಯ ಊಟದ ವೇಳೆಯಲ್ಲೂ ಶರಲೇಖ ಕಾಣಲಿಲ್ಲ.

ಮಾರನೆಯ ದಿನವೆಲ್ಲಾ ಶರಲೇಖ ಕಾರ್ಯನಿರತನಾಗಿದ್ದರಿಂದ ನಾನು ಷಣ್ಮುಗಮ್ ವ್ಯವಸ್ಥೆ ಮಾಡಿದ್ದ ವಾಹನದಲ್ಲಿ ಕುಳಿತು ಶೇರ್ ಬಾಗ್, ಪಾರ್ಸಿ ಪಾಯಿಂಟ್ ಎಲ್ಲಾ ಸುತ್ತಿಕೊಂಡು ಬಂದೆ.

ಆ ಸಂಜೆ ಊಟದ ಹೊತ್ತಿಗೆ ಶರಲೇಖ ಸಿಕ್ಕಿದ. "ಊಟದ ನಂತರ ನಮ್ಮ ಕೊಠಡಿಯಲ್ಲೇ ಭೇಟಿ ಮಾಡೋಣ. ಶ್ಯಾಮ್ ಮತ್ತು ಮೋಹನ್ ಕೂಡಾ ನಮ್ಮ ಜೊತೆ ಸೇರುತ್ತಾರೆ" ಎಂದ ಶರಲೇಖ. ಊಟದ ನಂತರ ನಮ್ಮ ಕೊಠಡಿ ಸೇರಿದಾಗ, ಶ್ಯಾಮ್ ಮತ್ತು ಮೋಹನ್ ಅಲ್ಲಿ ಕಾಯುತ್ತಿದ್ದರು.

ಶರಲೇಖ ತನ್ನ ಮಾತನ್ನು ಪ್ರಾರಂಭಿಸಿದ.

"ಈ ಸಮಸ್ಯೆಯ ಬಗ್ಗೆ ಮೊದಲು ಕೇಳಿದಾಗ ಇದು ಯಾರೋ ಒಳಗಿನವರೇ ಮಾಡಿರುವ ಕೃತ್ಯ ಎನ್ನಿಸಿತು. ಹಾಗಾಗಿ ಅಂದೇ ನಾನು ಷಣ್ಮುಗಮ್ ಸಹಾಯದಿಂದ ಈ ಕ್ಯಾಂಪಸ್‌ನಲ್ಲಿ ಕೆಲಸ ಮಾಡುವ ಎಲ್ಲ ಸಿಬ್ಬಂದಿಗಳ ಪಟ್ಟಿಯನ್ನು ಪಡೆದು ಕಳುವಾದ ಮಾರನೆಯ ದಿನ ಯಾವುದಾದರೂ ಸಿಬ್ಬಂದಿಗಳಲ್ಲಿ ಏನಾದರೂ ವಿಚಿತ್ರ ನಡವಳಿಕೆ ಇತ್ತೇ ಎಂಬುದನ್ನು ಪರಿಶೀಲಿಸಿದೆ. ಆಗ ಇಲ್ಲಿನ ಅಡುಗೆ ಕೆಲಸ ಮಾಡುವ ವಿಠಲ ಮೆಹಂದಾಳೆ ಎಂಬಾತ ಆ ದಿನ ರಜೆ ಹಾಕಿದ್ದು ತಿಳಿದುಬಂತು. ಅವನ ರಜೆ ರಿಕಾರ್ಡನ್ನು ಪರಿಶೀಲಿಸಿದಾಗ ಪ್ರತಿ ತಿಂಗಳೂ ಕೆಲವು ನಿರ್ದಿಷ್ಟ ದಿನಗಳು ಅವನ ಗೈರು ಹಾಜರಿ ದಾಖಲಾಗಿತ್ತು. ಸಾಮಾನ್ಯವಾಗಿ ಜೂಜಿನ ವ್ಯಸನದಲ್ಲಿ ಸಿಕ್ಕವರು ಈ ಬಗೆಯ ನಡವಳಿಕೆಗೆ ತುತ್ತಾಗುವುದು ನನ್ನ ಅನುಭವಕ್ಕೆ ಬಂದ ಸಂಗತಿ. ಪುಣೆಯ ರೇಸಿಂಗ್ ಕ್ಯಾಲೆಂಡರ್ ಗಮನಿಸಿದಾಗ ಆ ದಿನಗಳೇ ಈತ ರಜೆ ಹಾಕಿರುವುದು ತಿಳಿದು ಬಂತು. ತಕ್ಷಣ ತಡಮಾಡದೇ ಷಣ್ಮುಗಮ್ ಅವರನ್ನ ಕರೆದುಕೊಂಡು ಆ ರಾತ್ರಿಯೇ ಪಕ್ಕದ ಹಳ್ಳಿಯಲ್ಲಿದ್ದ ಅವನ ಮನೆಗೆ ಧಾಳಿ ಮಾಡಿದೆವು. ಅವ ಮನೆಯಲ್ಲಿದ್ದ." ಎಲ್ಲ ಬಯಲಾಗಿದೆ. ಇನ್ನು ಹತ್ತು ನಿಮಿಷದಲ್ಲಿ ಪೊಲೀಸರು ಬರುತ್ತಾರೆ. ಕನ್ನಡಿ

ಎಲ್ಲಿ" ಅಂತ ಗದರಿಸಿದೆ. ಆತ ನಮ್ಮನ್ನು ಮನೆಯ ಹಿತ್ತಲಿಗೆ ಕರೆದುಕೊಂಡು ಹೇಗಿ ಕೊಟ್ಟಿಗೆಯಲ್ಲಿಟ್ಟಿದ್ದ ಉದ್ದವಾದ ಪ್ಯಾಕೆಟ್ ತೋರಿಸಿದ. ತಕ್ಷಣ ಷಣ್ಮುಗಂ ಟೆಂಪೋ ಮೂಲಕ  ಅದನ್ನು ಕ್ಯಾಂಪಸ್‌ಗೆ ರವಾನಿಸುವ ವ್ಯವಸ್ಥೆ ಮಾಡಿದರು. ವಿಠಲನನ್ನು ನಮ್ಮ ವ್ಯಾನಿನಲ್ಲೇ ಕೂರಿಸಿಕೊಂಡು ರತನ್ ಬಳಿ ಕರೆತಂದೆವು. ಏಕೆಂದರೆ ಅವನನ್ನು ಪೊಲೀಸರಿಗೆ ವಹಿಸಬೇಕೆ ಬೇಡವೇ ಎಂಬ ನಿರ್ಧಾರ ಅವರಿಗೆ ಬಿಟ್ಟಿದ್ದು. ಆಗ ಬೆಳಗಿನ ಜಾವ ಮೂರು ಗಂಟೆ ಆಗಿತ್ತು. ರತನ್ ನಮ್ಮಿಬ್ಬರಿಗೆ ಕೃತಜ್ಞತೆ ಹೇಳಿ ಅವನ ಬಗ್ಗೆ ಎರಡು ದಿನಗಳಲ್ಲಿ ನಿರ್ಧರಿಸುವುದಾಗಿ ಹೇಳಿದರು. ಅಲ್ಲಿನ ವರೆಗೆ ನಮ್ಮ ಮೌನವನ್ನು ಕೋರಿದರು. ಹಾಗಾಗಿ ನಾನು ನಿನ್ನೆ ನಿನ್ನನ್ನು ಭೇಟಿ ಮಾಡಲಿಲ್ಲ.

ಇನ್ನೊಂದು ಅರ್ಧ ಗಂಟೆಯಲ್ಲಿ ಕ್ಯಾಂಪಸ್‌ನ ಸಭಾಂಗಣದಲ್ಲಿ ಒಂದು ಸಭೆ ಕರೆದಿದ್ದಾರೆ. ಅಲ್ಲಿಗೆ ನಿಮ್ಮ ಮೂವರನ್ನೂ ಕರೆತರಲು ಹೇಳಿದ್ದಾರೆ.

ಈಗಿನ್ನೇನು ವೇಳೆ ಆಗುತ್ತಾ ಬಂತು. ಬನ್ನಿ ಸಭಾಂಗಣಕ್ಕೆ ಹೋಗೋಣ ಎಂದು ಹೇಳಿದ ಶರಲೇಖ.

ಸಭಾಂಗಣದಲ್ಲಿ ಕಮ್ಮಟದ ಭಾಗಿಗಳು, ಕ್ಯಾಂಪಸ್‌ನ ಸಿಬ್ಬಂದಿ ಮೊದಲುಗೊಂಡು ಎಲ್ಲರೂ ಸೇರಿದ್ದರು. ವೇದಿಕೆಯ ಮೇಲೆ ಒಂದೇ ಕುರ್ಚಿ. ಅದರಲ್ಲಿ ರತನ್ ಆಸೀನರಾಗಿದ್ದರು. ನಾವುಗಳು ಕುಳಿತ ನಂತರ ರತನ್ ಎದ್ದು ನಿಂತು ತಮ್ಮ ಮಾತು ಪ್ರಾರಂಭಿಸಿದರು.

"ಸಜ್ಜನರೇ, ನೈತಿಕತೆಯ ಪ್ರಾಮುಖ್ಯತೆಯನ್ನು ಜಗತ್ತಿನ  ಮೂಲೆ ಮೂಲೆಗಳಿಗೂ ಸಾರಿ ಹೇಳುವ ಉದ್ದೇಶವನ್ನು ಹೊಂದಿರುವ ಈ ಸಂಘಟನೆಯ ಮೂಲ ಸ್ಥಾನದಲ್ಲೇ ಒಂದು ಘೋರ ಅನೈತಿಕ ಘಟನೆ ನಡೆದು ಹೋಗಿದೆ. ಅಲ್ಲಿ ನೋಡಿ ವೇದಿಕೆಯ ಆ ತುದಿಯಲ್ಲಿರುವ ನಿಲುವುಗನ್ನಡಿ. ಬರ್ಮಾದ ರಾಜ ವಂಶಸ್ಥರು ನಮಗೆ ಪ್ರೀತಿ ವಿಶ್ವಾಸಗಳಿಂದ ಬಳುವಳಿಯಾಗಿ ನೀಡಿರುವ ಅಮೂಲ್ಯ ವಸ್ತು. ಇದನ್ನು ಕಳವು ಮಾಡಿ ನಂತರ ಅದರ ಮಾರಾಟದ ಹಣವನ್ನು ಕುದುರೆ ಜೂಜಿನಲ್ಲಿ ಪೋಲು ಮಾಡುವ ಉದ್ದೇಶ ಹೊಂದಿದ್ದ ವ್ಯಕ್ತಿ ಇನ್ನಾರೂ ಅಲ್ಲ. ಇಷ್ಟು ದಿನ ನಮ್ಮ ನೆಚ್ಚಿನ ಗೆಳೆಯ ಎಂದು ಭಾವಿಸಿದ್ದ ನಮ್ಮ ಬಾಣಸಿಗ ವಿಠಲ ಮೆಹಂದಾಳೆ. ಅಗೋ ವೇದಿಕೆಯ ಬಲ ತುದಿಯಲ್ಲಿ ನಿಂತಿದ್ದಾನೆ."

ಸಭೆಯಲ್ಲಿ ನೀರವತೆ ತುಂಬಿತ್ತು.

ರತನ್ ತಮ್ಮ ಮಾತನ್ನು ಮುಂದುವರಿಸಿದರು.

"ವಿಠಲ ನಮಗೆಲ್ಲಾ ಕಳೆದ ಹತ್ತು ವರ್ಷಗಳಿಂದ ಅನ್ನ ಕಾಣಿಸುತ್ತಿದ್ದಾನೆ. ಯಾವುದೋ ಒಂದು ಕೆಟ್ಟ ಘಳಿಗೆಯಲ್ಲಿ ಅವನು ಈ ಕೆಲಸ ಮಾಡಿರುವುದು ನಿಜ. ಅವನನ್ನು ಸರಿಯಾದ ಮಾರ್ಗಕ್ಕೆ ಪುನಃ ತರಬೇಕಾದರೆ ಶಿಕ್ಷೆಗಿಂತ ಪ್ರೀತಿ ವಿಶ್ವಾಸಗಳೇ ಹೆಚ್ಚು ಪರಿಣಾಮಕಾರಿ ಎಂದು ನನ್ನ ಅನಿಸಿಕೆ. ಹಾಗಾಗಿ ನಿನ್ನೆಯೆಲ್ಲಾ ಅವನಿಗೆ ನೈತಿಕತೆಯ ಮಹತ್ವವನ್ನು ತಿಳಿಸಿ ಅವನ ಕೆಟ್ಟಮಾರ್ಗವನ್ನು ತ್ಯಜಿಸುವಂತೆ ಹೇಳಿದ್ದೇನೆ.

ಈಗ ಒಂದು ಸಿಹಿ ಸುದ್ದಿ. ವಿಠಲ ಮೆಹಂದಾಳೆ ಇನ್ನು ಮುಂದೆ ಆಜೀವ ಪರ್ಯಂತ ನೈತಿಕ ಮಾರ್ಗದಲ್ಲೇ ನಡೆಯುತ್ತೇನೆ ಎಂದು ನನಗೆ ಭಾಷೆ ಕೊಟ್ಟಿದ್ದಾನೆ." ಅವರು ಹಾಗೆಂದ ತಕ್ಷಣ ಇಡೀ ಸಭೆ ಹುರ್ರೇ ಹುರ್ರೇ ಎಂಬ ಜಯಘೋಷ ಮಾಡಿತು. ರತನ್ ಅವರು  ವಿಠಲನ ಬಳಿಗೆ ಬಂದು ಅವನನ್ನು ತಬ್ಬಿಕೊಂಡರು.

ಅವರ ಕಣ್ಣುಗಳಲ್ಲಿ ಆನಂದಬಾಷ್ಪ ತುಂಬಿತ್ತು.

ಮಾರನೆಯ ಬೆಳಗ್ಗೆ ಶರಲೇಖ, ಶ್ಯಾಮ್ ಮತ್ತು ನಾನು, ಮೋಹನ್ ತಂದಿದ್ದ ಇನ್ನೋವಾದಲ್ಲಿ ಪುಣೆಯ ಹಾದಿ ಹಿಡಿದಿದ್ದೆವು.

ಶ್ಯಾಮ್, "ಅದು ಹೇಗೆ ಅವರು ಅವನನ್ನ ಅಷ್ಟು ಸುಲಭವಾಗಿ ಕ್ಷಮಿಸಿದರು ಅಂತೀನಿ. ನಾಯಿ ಬಾಲ ಎಂದಿದ್ದರೂ.... ಎಂದಾಗ ಮೋಹನ್ ಬಾಯಿಹಾಕಿ," ಮುಂದಿನ ತಿಂಗಳು ಆ ಸಂಸ್ಥೆಯ ವಿಮೆ ಒಪ್ಪಂದ ನವೀಕರಣಕ್ಕೆ ಬರುತ್ತದೆ. ನವೀಕರಣವಾಗುವ ಸಂಭವ ಬಹಳ ಕಡಿಮೆ ಅಂತ ನನಗೆ ಅನ್ನಿಸುತ್ತಿದೆ" ಎಂದರು. ಸಾಮೂಹಿಕ ನಗು ವಾಹನವನ್ನು ತುಂಬಿತು.

■

## ಲಕ್ಷ್ಮಣ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.



" ಅವರು ಈವಾಗ ಅಕ್ಕಿ ರೇಷನಿಂಗ್ ಆಫೀಸಿನಲ್ಲಿದ್ದಾರೆ........ಗೊತ್ತಾಯಿತೇ?"

# ಲಿಫ್ಟ್ ಚಲಿಸುತ್ತಿಲ್ಲ

**ಶೈಲಸುತೆ ರಂಜಿತಾ ತೀರ್ಥಹಳ್ಳಿ**

ದಿನನಿತ್ಯ ನಮ್ಮ ಬದುಕೀಲ್ಲಿ ನಡೆಯುವ ಎಷ್ಟೋ ಘಟನೆಗಳ ನಾವು ನೋಡುವ ದೃಶ್ಯಗಳ ನಾವು ಎದುರಿಸುವ ಸಂದಿಗ್ಧ ಪರಿಸ್ಥಿತಿಗಳು ನಮಗೆ ಏನನ್ನೋ ಹೇಳುತ್ತಿರುತ್ತವೆ. ನಮ್ಮನ್ನ ಪ್ರಶ್ನಿಸುತ್ತಿರುತ್ತವೆ ಅಪಹಾಸ್ಯ ಮಾಡುತ್ತಲೂ ಇರುತ್ತವೆ ಆದರೆ ನಾವೇ ಕುರುಡರಾಗಿ, ಕಿವುಡರಾಗಿಬಿಟ್ಟಿದ್ದೇವೆ.

ಒಂದು ಸಂದರ್ಭವನ್ನು ಹೇಳುವುದಾದರೆ, ಇದು ನಿಮಗೂ ಅನುಭವಕ್ಕೆ ಬಂದಿರುತ್ತದೆ. ಇತ್ತೀಚೆಗಂತೂ ಎಲ್ಲಿ ನೋಡಿದರೂ ಬಹುಮಹಡಿಯ ಕಟ್ಟಡಗಳು, ಅಲ್ಲೊಂದು ಲಿಫ್ಟ್. ಮಹಲ್ ಮೆಟ್ರೋಸ್ಟೇಷನ್ ಆಸ್ಪತ್ರೆ ಹೀಗೆ ಸಾರ್ವಜನಿಕರ ಓಡಾಟವಿರುವ ಜಾಗಗಳಲ್ಲಿ ಎಂಟು ಜನರ ಸಾಮರ್ಥ್ಯವಿರುವ ಲಿಫ್ಟ್‌ನ ಮುಂದೆ ಒಮ್ಮೆಲೇ 18 ಮಂದಿ ನಿಂತಿರುತ್ತಾರೆ. ಲಿಫ್ಟ್ ಬಾಗಿಲು ತೆರೆದ ತಕ್ಷಣ ನಾ ಮುಂದೆ ತಾ ಮುಂದೆ ಎನ್ನುವ ಕುರಿ ಮಂದಿಯಂತೆ ನಮ್ಮ ಜನ ತುಂಬಿಬಿಡುತ್ತಾರೆ. ವಯಸ್ಸಾದವರಿಗೆ ಮಾತ್ರ ಅಂಗವಿಕಲರಿಗೆ, ರೋಗಿಗಳಿಗೆ, ಸಿಬ್ಬಂದಿಗಳಿಗೆ ಮಾತ್ರ ಎನ್ನುವ ಯಾವ ಬರಹಗಳು ಯಾವುದೇ ಭಾಷೆಯಲ್ಲಿ ಇದ್ದರೂ, ಅವು ಕಣ್ಣಿಗೆ ಕಾಣುವುದೇ ಇಲ್ಲ. ತಳ್ಳಿಕೊಂಡು, ತೂರಿಕೊಂಡು, ಜಗದ ಅವಸರವೆಲ್ಲ ತಾವೇ ಹೊತ್ತುಕೊಂಡು ಲಿಫ್ಟ್‌ನ ಒಳಸೇರಿ, ತಾವು ಹೋಗಬೇಕಾದ ಮಹಡಿ ಸಂಖ್ಯೆಯಾರಾದರೂ ಒತ್ತಿದ್ದಾರೆಯೇ ಎಂದು ನೋಡಿ ನಿಂತು ಬಿಡುತ್ತಾರೆ. ಲಿಫ್ಟ್ ಕೂಡ ನಿಂತೇ ಇರುತ್ತದೆ. ಕೆಂಪು ಬಣ್ಣದಲ್ಲೊಂದು ಬೆಳಕು, ನನಗೆ ಭಾರವಾಯಿತು ನನ್ನ ಸಾಮರ್ಥ್ಯ 600 ಕೆಜಿ ಅಷ್ಟೇ ಎಂದು ಕುಣಿಯುತ್ತಿರುತ್ತದೆ. ಅದನ್ನು ಕಂಡೂ ಕಾಣದವರಂತೆ ನಿಂತಿರುತ್ತಾರೆ .

ತುಂಬಾ ತಮಾಷೆ ಮತ್ತು ಖೇದದ ಭಾವನೆ ಎನಿಸುವುದು ಇಲ್ಲಿಯೇ. ಯಾರಾದರೂ ಒಬ್ಬರು ಹೊರಗೆ ಹೋದರೆ ಸಮಸ್ಯೆಗೆ ಪರಿಹಾರ, ಸಮಯಕ್ಕೆ ಬೆಲೆ ಆದರೆ ಯಾರಿಗೂ ಹೊರಬರಲು ಇಷ್ಟವಿಲ್ಲ. ಯಾರಾದರೂ ಹೊರ ಹೋಗಬಾರದೇ ಎನ್ನುವುದು ಎಲ್ಲರ ಮನಸ್ಥಿತಿಯ ಅವಸರ. ಯಾರು ಹೊರ ಹೋಗುವವರು? ಯಾರು ಯಾರಿಗೆ ಹೇಳುವುದು? ಅವರವರು ಅವರದೇ ಲೋಕದಲ್ಲಿ ನಿಂತುಬಿಡುತ್ತಾರೆ. ನಾನು ಮೊದಲು ಬಂದವನೆನ್ನುವುದು ಮೊದಲಿಗನ ಭಾವನೆ. ನನ್ನ ಕೈಯಲ್ಲಿ ಲಗೇಜ್ ಇದೆ ಎನ್ನುವುದು ಮತ್ತೊಬ್ಬನದು. ನಾನು ಹಿರಿಯ, ನಡೆಯಲಾಗದು, ಇದು ನಮ್ಮಂತವರಿಗಾಗಿಯೇ ಇರುವುದು ಎನ್ನುವುದು ಕೊನೆಗೆ ಬಂದ ಅಜ್ಜನದು. ಅಯ್ಯೋ ನನಗೆ ಲೇಟ್ ಆಗ್ತಾ ಇದೆ ಇನ್ನು ತುಂಬಾ ಕೆಲಸ ಇದೆ ವಯಸ್ಸಾದವರಿಗೆ ಯಾಕೆ ಇಷ್ಟು ಅರ್ಜೆಂಟು ಅವರು ಹೊರ ಹೋಗಬಾರದೆ ಎನ್ನುವುದು ಮೂವತ್ತರ ಹುಡುಗನ ಅವಸರ ನಾನು ಹೇಗೂ ಸಣ್ಣಗಿದ್ದೇನೆ ನಾನು ಹೊರ ಹೋದರೂ ನನ್ನ ತೂಕ ಲೆಕ್ಕಕ್ಕೆ ಬರಲ್ಲ. ಈ ದುಢುತಿಯೇ ಹೋಗಲಿ ಎನ್ನುತ್ತಾನ ರಪೇತಲ ಅಲ್ಲಿಯೇ ನಿಲ್ಲುವನು. ನಾನು ಭಾರವಾಗಿದ್ದೇನೆ ನನಗೆ ನಡೆಯಲಾಗದು. ನನಗೆ ಲಿಫ್ಟ್ ಬೇಕು ಈ ಸಣಕಲ ಮೆಟ್ಟಿಲನ್ನು ಜಿಗಿದು ಇಳಿಯಬಹುದು ಇವನೇ ಹೊರ ಹೋಗಲಿ ಎಂದು ಡುಮ್ಮನು ಒಳಗೆ ಉಳಿಯುವನು. ಲಿಫ್ಟ್‌ನ ಹತ್ರ ನಿಂತೆ ಇದೆ. ಅದರ ಒಳಗಿದ್ದವರು ಕೂಡ. ಮತ್ತೊಬ್ಬರು ಕಿವಿಯಲ್ಲಿ ಹಾಡು, ಕೈಯಲ್ಲಿ ಫೋನು, ಬಗ್ಗಿಸಿದ ಕತ್ತು, ಈ ಪ್ರಪಂಚದಲ್ಲೇ ಇಲ್ಲದವರಿಗೆ ಏನು ಹೇಳುವುದು.


ಹೀಗೆ ಮೊನ್ನೆಯೂ ನಡೆಯಿತು. ಯಾರಾದರೂ ಹೊರ ಹೋಗಿ ಅಂತ ಯಾವುದೋ ಒಂದು ಧ್ವನಿ ಸಣ್ಣಗೆ ಬಂತು. ನಾನು ಅದೇ ಲಿಫ್ಟಿನ ಮುಂದೆ ಮುಂದಿನ ಸರತಿಗಾಗಿ ಕಾದಿದ್ದೆ. ಆದರೆ ಯಾರು ಹೊರಬರಲು ತಯಾರಿರಲಿಲ್ಲ ಒಬ್ಬರ ಮುಖ ಒಬ್ಬರು ನೋಡಿಕೊಳ್ಳುತ್ತಾ ಇದು ನಮ್ಮಪ್ಪನ ಆಸ್ತಿ ನಾನು ಬಿಟ್ಟು ಕದಲಲ್ಲ ಎನ್ನುವಂತೆ ನಿಂತಿದ್ದರು. ನಾನು ಈ ಲಿಫ್ಟಿಗೆ ಕಾಯುವುದು ತಡವಾಗುತ್ತೆ ಅಂತ ಮೆಟ್ಟಿಲುಗಳನ್ನು ಹತ್ತಿ ನಾಲ್ಕನೇ ಮಹಡಿಗೆ ಬಂದರೂ ಲಿಫ್ಟ್ ಮೇಲೆ ಬಂದಂತೆ ಕಾಣಲಿಲ್ಲ..

ನಮ್ಮ ಜನರ ಮನಸ್ಥಿತಿಯೋ ಪರಿಸ್ಥಿತಿಯೋ ಇದಕ್ಕೆ ಹೊಣೆ ಯಾರು ? ಕಟ್ಟಡಗಳು ಎತ್ತರಕ್ಕೆ ಬೆಳೆಯುತ್ತಿವೆ ಮನುಷ್ಯ ಕುಳ್ಳನಾಗುತ್ತಿದ್ದಾನೆ. ಲಿಫ್ಟ್‌ಗಳನ್ನು ಕಂಡುಹಿಡಿಯಲಾಗಿದೆ ಮನುಷ್ಯ ತಳಕ್ಕೆ ಬೀಳುತ್ತಿದ್ದಾನೆ ಬಾಗಿಲುಗಳನ್ನು ತೆರೆದು ಮುಚ್ಚಬಹುದು ಮನುಷ್ಯನ ಅಂತಃಕರಣದ ಸುತ್ತ ಗೋಡೆ ಕಟ್ಟಿಕೊಳ್ಳುತ್ತಿದ್ದಾನೆ.

ನಾವೇನು ಹಿಮಾಲಯ ಪರ್ವತ ಹತ್ತಬೇಕಿಲ್ಲ ನಡೆಯುವ ದಾರಿಯಲ್ಲಿ ತುಸು ಸರಿದು ಜೊತೆ ಸಾಗುವವರಿಗೆ ದಾರಿ ಅನುವು ಮಾಡಿಕೊಟ್ಟು ಸಾಗಿದರೆ ಅದೇ ಶ್ರೇಷ್ಠವಾದ ಬದುಕು ಅನಿಸುತ್ತದೆ. ಈ ಮಾನವೀಯ ಮೌಲ್ಯಗಳಿಗಾಗಿ ನಮ್ಮ ಹಿಂದಿನ ತಲೆಮಾರಿನವರು ಇಂದಿಗೂ ಪೂಜನೀಯವಾಗಿ ಆದರ್ಶದವರಾಗಿ ನಿಲ್ಲುತ್ತಾರೆ.

ನಡೆಯಲಾರದವರನ್ನು ಎತ್ತಿಕೊಂಡು ಬೆಟ್ಟ ಹತ್ತಿ ದೇವರ ದರ್ಶನ ಮಾಡಿಸುತ್ತಿದ್ದ ನಮ್ಮ ಹಿರಿಯರ ತೋಳ್ಬಲ ನಮ್ಮಲ್ಲಿ ಇಲ್ಲದೆ ಹೋದರೂ ತುಂಬಿದ ಲಿಫ್ಟಿನಿಂದ ಹೊರ ಬಂದು ಅದು ಮೇಲಕ್ಕೆ ಏರಲು ಅವಕಾಶ ಮಾಡಿಕೊಡುವಷ್ಟಾದರೂ ಹೃದಯವಂತಿಕೆ ಇಲ್ಲದಿದ್ದರೆ ಹೇಗೆ ?

■



# ಲೆಸ್ ಆದರೆ ಲಾಸ್ ಏನಿಲ್ಲ

ಕೆ.ಎಸ್. ಸೋಮೇಶ್ವರ

ಲೆಸ್ ಲಗೇಜ್ ಮೋರ್ ಕಂಫರ್ಟ್. ಇದೊಂದು ರೀತಿ ಎಲ್ಲ ಕಾಲಕ್ಕೂ ಅನ್ವಯಿಸಬಹುದಾದ ಒಂದು ಪದ ಗುಚ್ಛ. ಸಂಸಾರದಲ್ಲಿ ಸರಿಗಮ ಸಾಧಿಸಲು, ಪ್ರಯಾಣಿಸುವಾಗ ಹೊರೆ ಹೊರುವ (ಮೈನಸ್ ಕೂಲಿಯಾಳು) ಸುಖಕ್ಕೂ ಅನ್ವಯವಾಗುತ್ತದೆ.

ಇನ್ನು ಈ ಲೇಸಾದ ಲೆಸ್ ಅನ್ನು ನೋಡೋಣವೇ ಈಗೆಲ್ಲಾ ಕಂಪ್ಯೂಟರ್ ಮತ್ತು ಮೊಬೈಲುಗಳು ಬಂದು ಕಣ್ಣಿಗೆ ಕಾಣುವುದೆಲ್ಲಾ ಲೆಸ್ ಆದರೂ ಲಾಂಗಾಗಿ ಕಾಣತೊಡಗುತ್ತವೆ. ಸಿನಿಮಾ ಸಹ ಅಂಗೈಯಲ್ಲೇ ಅರಮನೆ. ಹಣದ ವ್ಯವಹಾರಕ್ಕೆ ಬಂದರೆ ಪೇಟಿಎಮ್ ಕರೋ ಅಂತ ರಾಗ ಎಳೆಯುತ್ತೆ ಅಶರೀರವಾಣಿ. ಅದೂ ದೀರ್ಘವಾಗಿ. ಎಲ್ಲವೂ ತೂಗಾಡದೇ ವಯರ್‌ಲೆಸ್. ಅದೇಕೋ ನಮ್ಮ ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳ ವಯರ್‌ಗಳು ಮಾತ್ರ ಸಲೀಸಾಗಿ ತೂಗಾಡುತ್ತ ಅನಾಹುತಗಳನ್ನು ಮಾಡುತ್ತಿವೆ.

ಅಂದೊಂದು ಕಾಲ. ಈ ಗ್ಯಾಜೆಟುಗಳ ಉದ್ಭವವೇ ಆಗಿರಲಿಲ್ಲ. ಎಲ್ಲ ಕೈ ಬರಹದಲ್ಲೇ ಪುಟ ಪುಟ ಗಟ್ಟಲೆ. ಓಡುತ್ತಿತ್ತು. ಮೊನ್ನೆ ಒಬ್ಬರು ಆ ರೀತಿಯ ಅವರ ತಾತನ ಸುಂದರ ಕೈ ಬರಹದ ಅಕ್ಷರಗಳ ನೆನಪು ಮಾಡಿಕೊಂಡರು. ನಾನೇ ಹಲವು ಕಾಲ ಪತ್ರಿಕೆಗಳಿಗೆ ಬರಹಗಳ ಕಳಿಸಬೇಕಾದರೆ ಆದಷ್ಟು ಗುಂಡಾದ ಅಕ್ಷರಗಳಲ್ಲಿ ಬರೆದು ಕಳಿಸುತ್ತಿದ್ದೆ. ಮುಂದೆ ಬೆರಳಚ್ಚು ಯಂತ್ರದಲ್ಲಿ ಎಲ್ಲ ಹತ್ತು ಬೆರಳುಗಳಿಗೂ ಕೆಲಸ. ಏನಾದರೂ ಇಲ್ಲಿ ಪೇಪರ್ ಲೆಸ್ ಆಗುತ್ತಿರಲಿಲ್ಲ. ಇನ್ನು ಕಂಪ್ಯೂಟರುಗಳು ದಢೂತಿ ಆಕಾರದಿಂದ ಲೆಸ್ ಆಗುತ್ತಾ ಆಗುತ್ತಾ ಕಾಂಪ್ಯಾಕ್ಟ್ ಆಗಿ ಕೈಬಂದಿಯಾಗಿದೆ.

ಹೀಗೆ ಈ ಲೆಸ್‌ಗಳ ಲೇಸಾದ ಅನುಭವ ನಮಗೆ ಆಕ್ಟೊಪಸ್‌ನ ಹಿಡಿತ, ಕಬಂಧ ಬಾಹುವಿನ ಬಿಗಿತವಾಗಿ ನಿಂತಿವೆ. ಅದಿಲ್ಲದಿದ್ದರೆ ಕೈಗಳು ಲೂಸಾಗಿ ಆಡತೊಡಗುತ್ತವೆ. ಆದರೆ, ಅನುಭವಿಗಳು ಹೇಳುವಂತೆ ಇದು ಈಗಿನದಲ್ಲ. ಯಾವುದೋ ತ್ರೇತಾಯುಗವೋ ಅಥವಾ ಇನ್ನೂ ಮೊದಲೋ. ಆಗ ತಾಳೆಗರಿಗಳು ಮತ್ತಿತರ ಬರವಣಿಗೆ ಸಾಧನೆಗಳು ಇಲ್ಲದಿದ್ದಾಗ ಋಷಿಗಳ ಪ್ರವಚನ ವೆಲ್ಲ ಕಂಪ್ಲೀಟ್ ಓರಲ್ ಆಗೇ ಇರುತ್ತಿತು ಅಲ್ಲವೇ? ಅವರೇ ಪೇಪರ್‌ಲೆಸ್ ಯುಗಕ್ಕೆ ಯುಗಪುರುಷರು.

ಇನ್ನು ಈಗಿನ ಲೆಸ್ ಊಟ ನೋಡಿ. ಅದೇನೋ ಡಯಟಿಂಗ್ ಅಂತ ಕಾಳು ಕಡಿ, ಹಣ್ಣು, ಹಂಪಲು ಅಂತೆ. ಮಾಮೂಲಿ ಅನ್ನ ಸಾಂಬಾರ್, ಮಜ್ಜಿಗೆ ಹುಳಿ ಎಲ್ಲ ಮೈನಸ್. ನಮ್ಮಲ್ಲಿ ಅನಾದಿ ಕಾಲದಿಂದಲೂ ತಿಂಗಳಿನ ಎರಡು ಏಕಾದಶಿಗಳಂದು ಮಾಡುವ ಉಪವಾಸದಲ್ಲಿ "ಊಟ ಲೆಸ್ ಬರಿಯ ಲಘು ಫಳಾರ" ಅಲ್ವೇ! ಏಕಾದಶಿ ಎಂದರೆ ಅದರ ಅನ್ವರ್ಥ ನಾಮವೇ ಊಟ ಲೆಸ್. ಇದೇ ರೀತಿ ಬಹಳಷ್ಟು ಮಾಂಸಾಹಾರಿಗಳೂ ಕೆಲವು ದಿನಗಳು ಅದನ್ನು ಲೆಸ್ ಮಾಡಿ ಲಘುವಾಗಿ ಲೇಸಾಗಿರುತ್ತಾರೆ.

ಈಗಂತೂ ಶಾಲೆಗಳಲ್ಲಿ ತಿಂಗಳ ಒಂದು ಶನಿವಾರ ಬ್ಯಾಗ್ ಲೆಸ್ ಡೇ ಅಂತ ನಡೆಯುತ್ತೆ. ಪಾಪ ತಿಂಗಳ ಪೂರ್ತಿ (ಭಾನುವಾರಗಳೂ ಹೊರತಲ್ಲ, ಏಕೆಂದರೆ ಟ್ಯೂಷನ್) ಕೋಣದಂತೆ ಜ್ಞಾನದ ಹೊರೆ ಹೊತ್ತು ಹೋಗುವ ಕಿಲಾಡಿಗಳಿಗೆ ಅದೇನೂ ಲೆಸ್ ಸಂಭ್ರಮವಲ್ಲ.

ಇನ್ನು ಹಣ್ಣುಗಳು. ಮೊದಲೆಲ್ಲಾ ಇವುಗಳಿಗೆ ಬೀಜವೇ ಬೀಜಮಂತ್ರವಾಗಿತ್ತು.

ಈಗ ನೋಡಿ, ದ್ರಾಕ್ಷಿಯಿಂದ ಮೊದಲಾಗಿ ಕಿತ್ತಲೆ, ದಾಳಿಂಬೆ, ಪರಂಗಿ, ಖರ್ಜೂರ ಎಲ್ಲ ಸೀಡ್ ಲೆಸ್ ಆಗಿಬಿಟ್ಟಿವೆ. ಅದೇಕೋ ಮಾವಿನ ಹಣ್ಣು, ಹಲಸಿನ ಹಣ್ಣು, ಸೀತಾಫಲ ಇವುಗಳು ಇನ್ನೂ ಸೀಡ್ ಫಲವತ್ತಾಗಿಯೇ ಇವೆ. ಇವುಗಳ ಮೂಲವೇ ಲೆಸ್ ಆದರೆ ಅವು ಹೇಗೆ ಬೆಳೆಯುತ್ತವೆ! ಇದೇ ರೀತಿ ಸೈಜ್ ಲೆಸ್ ಆಗಿ ಅನೇಕ ತರಕಾರಿಗಳೂ ಬೆಳೆದು ನಿಲ್ಲುತ್ತವೆ,

ನಮ್ಮಲ್ಲಿ ವಿಂಡೋ ಶಾಪಿಂಗ್ ಅಂತ ಅಂತಾರೆ. ಅಚ್ಚ ಕನ್ನಡದಲ್ಲಿ ಹೇಳಬೇಕಾದರೆ ಕಿಟಕಿ (ಕಣ್ಣಿನಿಂದ)ಕೊಳ್ಳುವಿಕೆ ಅನ್ನಬಹುದೇನೋ. ದೊಡ್ಡ ದೊಡ್ಡ ಬಹುಮುಖ ಅಂಗಡಿಗಳು, ಈಗಿನ ಶಾಪಿಂಗ್ ಮಾಲ್‌ಗಳಲ್ಲಿ ಬಹುಪಾಲು ಜನರಿಗೆ ಈ ಅಭ್ಯಾಸ ಚೆನ್ನಾಗಿ ಆಗಿರುತ್ತದೆ. ಇಲ್ಲಿ ಶಾಪ್ ಲೆಸ್ ಅಥವಾ ಲೆಸ್ ಷಾಪಿಂಗ್, ಸೀ ಮೋರ್ ಎನ್ನಬಹುದು.

ನಾವು ಧರಿಸುವ ಬಟ್ಟೆಗಳು ಕಾಲ ಕಾಲಕ್ಕೆ ಡಿಸೈನ್‌ಗಳು ಬದಲಾಗುತ್ತ ಪುನರಾವರ್ತಿತವಾಗುತ್ತ ಆಕಾರಗಳೇ ಲೆಸ್ ಮೈನಸ್ ಆಗುತ್ತಿರುತ್ತವೆ. ದೊಗಲೆ ಪೈಜಾಮ ದೊಗಲೆ ಪ್ಯಾಂಟ್ ಆಗಿ ಧಡೂತಿಗಳಿಗೂ ಸ್ಲಿಮ್ ಫಿಟ್ ಆಗಿ ನಿಂತಿವೆ. ಈ ತರಹೆವಾರಿಯಲ್ಲಿ ಅನೇಕವಿವೆ. ಅದೇನೆಂದು ಕೇಳಬೇಡಿ, ನಾನು ಬರೆಯಲ್ಲ. ಏಕೆಂದರೆ,. ಆಮೇಲೆ ಓದುಗ ಸೆನ್ಸಾರ್ ನವರು ನನ್ನನ್ನು ಸೆನಶ್ಯೂರ್ ಮಾಡಿಬಿಟ್ಟಾರು ಎಲ್ಲಾ ನಿಮ್ಮ ಊಹೆಗೆ ಬಿಟ್ಟದ್ದು.

ಹೀಗೆ ಪೇಪರ್‌ಲೆಸ್ ಎನ್ನುವುದು ವಿವಿಧ ರೀತಿಗಳಲ್ಲಿ ಮೋರ್ ಆಗಿ ಜನಜನಿತವಾಗಿದೆ. ಆದರೇನು, ಅದಕ್ಕೆ ನಮ್ಮಲ್ಲಿ ಅನಾದಿ ಕಾಲದ ಇತಿಹಾಸ ಇದ್ದೇ ಇದೆ ಅದನ್ನು ತಿರುಚಲು ಯಾವ ಚರಿತ್ರೆಯೂ ಸಾಹಸ ಮಾಡಲಾರ. ಈ ಬರಹ ಬರೆಯಲು ನನಗೆ ಸ್ಫೂರ್ತಿಯಾಗಿದ್ದು ಇಬ್ಬರು ಹಾಸ್ಯ ಸಾಹಿತಿಗಳು ಎಂ.ಎಸ್. ನರಸಿಂಹ ಮೂರ್ತಿ ಮತ್ತು ವೈ.ವಿ. ಗುಂಡುರಾವ್‌ರವರು ಟಿವಿಯಲ್ಲಿ ನಡೆಸಿಕೊಡುವ ಲಾಫಿಂಗ್ ಟೈಂ ಕಾರ್ಯಕ್ರಮ. ಅವರದೇ ಕೆಲವು ಲೆಸ್ ಪೂರ್ಣ ನಗೆ ಚಟಾಕಿಗಳನ್ನು ಇಲ್ಲಿ ಹೇಳಿದ್ದೇನೆ.

ಸುಮ್ಮನೇ ಎಗರಾಡುತ್ತಾ ಪೌರುಷ ತೋರಿಸುವ ಪುರುಷ (ಪುರುಷಿಯೂ ಆಗಬಹುದು) ಪೇಪರ್ ಟೈಗರ್. ಆದರೆ, ನಿಜವಾದ ಟೈಗರ್ (ಹುಲಿ) ಪೇಪರ್‌ಲೆಸ್. ಇತ್ತೀಚೆಗೆ ಈ ಹುಲಿಗೂ ಉಗುರು, ಚರ್ಮ ಇತ್ಯಾದಿ ಕಾರಣಗಳಿಂದ ಪೇಪರ್ ಫುಲ್ ಅಗಿಬಿಡುವಂತಾಗಿದೆ.

ಇನ್ನೊಂದು ನಮ್ಮಲ್ಲಿ ವಿವಿಧ ರೀತಿ ದೋಸೆಗಳು ದೊರೆಯುತ್ತವೆ. ಕೆಲವು ರುಚಿಗೆ ನಿರ್ದಿಷ್ಟ ಖಾನಾವಳಿಗಳಲ್ಲಾದರೆ ಇನ್ನು ಹತ್ತು ಹಲವು ವೆರೈಟಿ ಸ್ಟ್ರೀಟ್ ಫುಡ್ ಅಲ್ಲದೇ ಒಳಾಂಗಣದಲ್ಲೂ ನಿಮಗೆ ರುಚಿಸುತ್ತಾರೆ. ಸಾಧಾರಣ ಖಾಲಿ ದೋಸೆಯಿಂದ ಸೆಟ್ ದೋಸೆ, ರವಾ ದೋಸೆ, ಮಸಾಲೆ ದೋಸೆ, ಬೆಣ್ಣೆ ಮಸಾಲೆ, ಸಾಗು ಮಸಾಲೆ, ದಾವಣಗೆರೆ ಬೆಣ್ಣೆ ದೋಸೆ ಇವೆಲ್ಲದರ ಜೊತೆಗೆ ಪೇಪರ್ ದೋಸೆ. ಇದು ಪೇಪರಿನಷ್ಟೇ ತೆಳು. ಇಲ್ಲಿ ಪೇಪರ್‌ಲೆಸ್ ಆಗಿಬಿಟ್ಟರೆ ಈ ಪಾಪದ ಪೇಪರ್ ದೋಸೆ ಎಲ್ಲಿ ಸಿಗುತ್ತದೆ ಎಂಬುದೇ ಜಿಜ್ಞಾಸೆ.

ಮೊದಲೆಲ್ಲಾ ದಿನಸಿ ಸಾಮಾನುಗಳಲ್ಲಿ ಮೈದುಂಬಿಕೊಂಡು ಶಂಖಾಕೃತಿಯ ಪೇಪರ್ ಪೊಟ್ಟಣಗಳು ಬರುತ್ತಿದ್ದವು. ಅದರ ಅಂದವೇ 'ಏನು ಚೆಂದವೋ' ಎನ್ನುವಂತಿರುತ್ತಿತ್ತು. ಕಾಲಾಯ ತಸ್ಮೈ ನಮಃ ಎನ್ನುವಂತೆ ಅವೆಲ್ಲಾ ಲೆಸ್ ಆಗುತ್ತ ಮಿಸ್ ಆಗಿ ಈಗ ಕಾಮನ ಬಿಲ್ಲಿನ ವರ್ಣಮಯ ವಿವಿಧ ಆಕೃತಿಯ ಪೊಟ್ಟಣಗಳು ನಮ್ಮಗಳ ಕಣ್ಮುಂದೆ ನರ್ತಿಸುತ್ತವೆ. ಪೇಪರೇನೋ ಲೆಸ್ ಆಯಿತು ಇವುಗಳು ಉಪಯೋಗಿಸಿದ ನಂತರ ಕಸಕ್ಕೆ ಮಾತ್ರ ಮೋರ್ ಲೇಸು. ■

# ನಗೋದಲ್ವಾ?

✍ ಸುಚಿತ್ರಾ ಹೆಗಡೆ

ನನಗೆ ನಗಲು ಯಾವುದೇ ಬಲವಾದ ಕಾರಣಗಳು ಬೇಕಾಗಿಯೇ ಇಲ್ಲ. ನಾನು ಎಲ್ಲರಲ್ಲೂ, ಎಲ್ಲದರಲ್ಲಿಯೂ ನಗುವನ್ನು ಹುಡುಕಿಕೊಂಡು ನಗುವುದು ಗೊತ್ತಿದ್ದವರು ನನ್ನ ನಗು ಸ್ವಲ್ಪ ಕಡಿಮೆಯಾದರೂ, ಏನು ಹುಷಾರಿಲ್ಲವಾ, ಎಂದು ಕೇಳುತ್ತಾರೆ. ಇನ್ನು ಕೆಲವರಂತೂ ನನ್ನನ್ನು ನಗುವಿನೊಂದಿಗೆ (ವ್ಯಾಖ್ಯಾನಿಸಲಾಗಿಲ್ಲ) ಸಮೀಕರಿಸಿಕೊಂಡಿದ್ದಾರೆ. ನಗುವೇ ನಿನ್ನ ಭೂಷಣವೆನ್ನುವವರು ನನ್ನನ್ನು ನಿಜವಾಗಿ ಅರ್ಥಮಾಡಿಕೊಂಡವರು. ನಾನು ಎಲ್ಲೇ ಇರಲಿ, ಹೇಗೆ (ವ್ಯಾಖ್ಯಾನಿಸಲಾಗಿಲ್ಲ) ಇರಲಿ, ನಗುತ್ತಲೇ ಇರುವುದು ಕೆಲವರಿಗೆ ಕಿರಿಕಿರಿಯುಂಟು ಮಾಡಿರುವುದೂ ಇದೆ. ಕಳೆದ ನಾಲ್ಕೈದು ದಶಕಗಳಿಂದ ಹೀಗೆ ಸದಾ ನಗುತ್ತಿದ್ದ ನಾನು ನಗುವುದನ್ನು ಕಡಿಮೆ ಮಾಡಲು ಅಥವಾ ನಗುವಿನ ತೀವ್ರತೆಯನ್ನು ಕುಗ್ಗಿಸಲು ನಿರ್ಧರಿಸಿದಾಗ ಹೀಗೊಂದು ಲೇಖನ ಓದಲು ಸಿಕ್ಕಿತು.

ನಗುವುದರಿಂದ ನೀವು ನಿಮ್ಮ ಮೆದುಳನ್ನು ಮೋಸಗೊಳಿಸಬಹುದಂತೆ. ಖುಷಿಯಾದಾಗ ಮಾತ್ರ ನಗು ಬರಬೇಕೆಂದಿಲ್ಲ. ನಗುವಿನಿಂದಲೇ ಮೆದುಳು ಹ್ಯಾಪಿ ಹಾರ್ಮೋನುಗಳನ್ನು ಕಳಿಸುವಂತೆ ಮಾಡಿ ನಾವು ನೆಮ್ಮದಿಯಿಂದ ಇರಬಹುದು. ಈ ಯೋಚನೆಯೇ ನನಗೆ ನಗು ಉಕ್ಕಿಸಿತು. ನನ್ನಂತಹವರಿಗೆ ಇನ್ನೇನು ಬೇಕು. ನಾವಂದುಕೊಂಡಂತೆ ನಮ್ಮ ಮೆದುಳೇನೂ ಜೀನಿಯಸ್ ಅಲ್ಲ. ಅದಕ್ಕೆ ನಿಜವಾದ ನಗು ಮತ್ತು ಕೃತಕ ನಗುವಿನ ವ್ಯತ್ಯಾಸ ಗೊತ್ತೇ ಆಗುವುದಿಲ್ಲ. ಒಟ್ಟಿನಲ್ಲಿ ಹೆಚ್ಚೆಚ್ಚು ನಗುತ್ತಿರಬೇಕು. ಮೆದುಳು ನಾವು ನಿಜಕ್ಕೂ ಖುಷಿಯಾಗಿದ್ದೇವೆ ಅಂದುಕೊಂಡು– ಬಿಡುತ್ತದೆಯಂತೆ. ಓಹ್! ಇಲ್ಲಿಯವರೆಗೆ ನಾನು ಕೃತಕ ನಗುವಿನಿಂದ ಬೇರೆ ಜನರನ್ನು ಮಾತ್ರ ಮೆಚ್ಚಿಸಲು ಸಾಧ್ಯ ಅಂದುಕೊಂಡಿದ್ದೆ. ನಮ್ಮದೇ ಮೆದುಳನ್ನು ಕೂಡ ಮೆಚ್ಚಿಸಲು ನಗಬೇಕು ಎನ್ನುವುದಾದರೆ ಇನ್ನು ಮುಂದೆ ನಗು ಕಡಿಮೆ ಮಾಡುವ ಯೋಚನೆ ಬಿಟ್ಟು ಹಾಗೆಯೇ ನಿರಾತಂಕವಾಗಿ ನಗಬಹುದು ಅಂದುಕೊಂಡಿದ್ದೇನೆ. ಮತ್ತೆ ಮೆದುಳಿಗೂ ನನ್ನಂತೆ ನಗಲು ಕಾರಣಗಳು ಬೇಕಾಗಿಲ್ಲವೆನ್ನುವುದು ಎಂಥ ರಿಲೀಫ್ ಅಲ್ವಾ?

**ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ**

**ನಗುವ ಕೇಳುತ ನಗುವುದತಿಶಯದ ಧರ್ಮ**

**ನಗುವ ನಗಿಸುವ ನಗಿಸಿ ನಗುತ ಬಾಳುವ ವರವ**

**ಮಿಗೆ ನೀನು ಬೇಡಿಕೊಳೊ–** ಮಂಕುತಿಮ್ಮ ಎಂಬ ಡಿವಿಜಿಯವರ ಕಗ್ಗವನ್ನು ಈಗ ವಿಜ್ಞಾನವೂ ಪುಷ್ಟೀಕರಿಸುತ್ತಿದೆಯಂತಾಯ್ತು. ನಮಗೆ ನಗುವೆನ್ನುವುದು ಹುಟ್ಟಿನಿಂದಲೇ ಬಂದಿರುವುದಂತೆ. ನಾವೆಲ್ಲ ಅಂದುಕೊಂಡಿರುವಂತೆ ಮಗು ಎರಡು ಮೂರು ತಿಂಗಳಲ್ಲಿ ನಗತೊಡಗುತ್ತದೆ. ಆದರೆ ತಾಯಿಯ ಒಡಲಲ್ಲಿ ಇರುವಾಗಲೇ ಮಗು ನಗೆ ಬೀರುತ್ತದೆಯೆಂಬ ಸತ್ಯವನ್ನು ಸಂಶೋಧನೆಗಳು ಬಿಚ್ಚಿಟ್ಟಿವೆ.

**'ನಗುವೇ ನಾಕ ಅಳುವೇ ನರಕ'** ವೆನ್ನುವ ಹಳೆಯ ಚಲನಚಿತ್ರದ ಹಾಡು ನಗುವಿನ ಮಹತ್ವವನ್ನು ತುಂಬ ಪರಿಣಾಮಕಾರಿಯಾಗಿ ಹೇಳುತ್ತದೆ. ನಗು ಹೊರಗಿನಿಂದ ಕಾಣುವಷ್ಟು ಸಣ್ಣ ಮತ್ತು ನಿರುಪದ್ರವಿ ವಿಷಯವೇನಲ್ಲ. ಬಹಳಷ್ಟು ಜನರ ನಗು

ಅವರ ಮನಸ್ಸಿನ ಕನ್ನಡಿಯಾಗಿರುತ್ತದೆ. ಇನ್ನು ಕೆಲವರು ಅದೆಷ್ಟೇ ತಮ್ಮ ದೇಹ, ಮನಸ್ಸುಗಳ ಮೇಲೆ ತಮ್ಮದೇ ಹಕ್ಕುಸ್ವಾಮ್ಯವಿರುವುದೆಂದು ಅಂದುಕೊಂಡಿದ್ದರೂ, ಈ ಮುಖದ ಕೆಲವು ಸ್ನಾಯುಗಳು ಮಾತ್ರ ಅವರ ಅಧಿಕಾರವನ್ನು ಒಪ್ಪುವುದೇ ಇಲ್ಲ. ನಗಲು ಕೇವಲ ಇಪ್ಪತ್ತಾರು ಸ್ನಾಯುಗಳು ಸಾಕು. ಆದರೂ ಸದಾ ನಗಲು ಅದೆಷ್ಟು ಪ್ರಯತ್ನ ಪಡಬೇಕು!

ಮನೋವೈಜ್ಞಾನಿಕರು ಹೇಳುವಂತೆ ಗಂಡಸರಿಗೆ ಹೆಣ್ಣಿನ ನಗುವೇ ಪ್ರಮುಖವಾದ ಆಕರ್ಷಣೆಯಾದರೆ ಹೆಣ್ಣಿಗೆ ಗಂಡಿನ ನಗುವೊಂದು ಆಕರ್ಷಣೆಯ ವಿಷಯವೇ ಅಲ್ಲವಂತೆ. ನೆನಪಿಡಿ, ಎಲ್ಲ ನಗುವೂ ಖುಷಿಯ ಅಭಿವ್ಯಕ್ತಿಗಳಲ್ಲ. ವಿವಿಧ ಸಂದೇಶಗಳಿರುವ ನಗುವಿನ ಹದಿನೈದರಿಂದ ಹತ್ತೊಂಬತ್ತು ಪ್ರಕಾರಗಳನ್ನು ಗುರುತಿಸಿದ್ದಾರೆ. ಎಲ್ಲ ರೀತಿಯ ಸಂದಿಗ್ಧತೆಯನ್ನು ಸೂಚಿಸಲು ಪ್ರಶಸ್ತವಾದ ಮಾಧ್ಯಮವೆಂದರೆ ನಗುವೇ ಆಗಿದೆ. ಧನಾತ್ಮಕ ಭಾವನೆಗಳನ್ನು ನಗು ಅತಿ ಸುಲಭವಾಗಿ ಹೊರಹಾಕುವಂತೆ ಭಯ, ನಾಚಿಕೆ, ಸಿಟ್ಟು, ದುಃಖ, ಸಂದೇಹ, ವ್ಯಂಗ್ಯ ಮೊದಲಾದ ಋಣಾತ್ಮಕ ಭಾವಗಳನ್ನೂ ನಗುವಿನ ಮೂಲಕ ಪರಿಣಾಮಕಾರಿಯಾಗಿ ಪ್ರದರ್ಶಿಸಬಹುದು. ಅಷ್ಟೇ ಅಲ್ಲ, ಮೋನಾಲೀಸಾಳ ನಿಗೂಢ ನಗುವಿನ ಹಿಂದಿನ ರಹಸ್ಯ ಇಂದಿಗೂ ಬಯಲಾಗಿಲ್ಲ.

ಅಳುವ ಗಂಡನ್ನು, ನಗುವ ಹೆಣ್ಣನ್ನು ನಂಬಬಾರದೆಂದು ಹಳೆಯ ಗಾದೆಯೊಂದು ಹೇಳುತ್ತದೆ. ಅಳು ನಗುಗಳಂತಹ ಸಹಜ ಭಾವನೆಗಳನ್ನು ಹೆಣ್ಣು ಗಂಡುಗಳಿಗಾಗಿ ವಿಭಾಗಿಸುವುದು ಲಿಂಗ ತಾರತಮ್ಯದ ಪರಮಾವಧಿಯೆಂದುಕೊಂಡರೂ, ಕಷ್ಟದಲ್ಲಿ ಅಳಲಾರದ ಗಂಡು, ಖುಷಿಯಲ್ಲಿ ನಗಲಾರದ ಹೆಣ್ಣು ಸಮಾನ ದುಃಖಿಗಳೇ ಸರಿ. ಆಸ್ಕರ್ ವೈಲ್ಡ್ ಕೂಡ 'ಗಂಡಿನ ಮುಖ ಅವನ ಆತ್ಮಚರಿತ್ರೆಯಾದರೆ ಹೆಣ್ಣಿನ ಮುಖ ಅವಳ ಕಲ್ಪನಾ ವಿಲಾಸ' ಎಂದಿದ್ದಾನೆ. ಹೆಣ್ಣಿನ ಮುಖ ನೋಡಿ ಅವಳ ಅಂತರಂಗವನ್ನು ಅರಿಯುವುದು ಅಷ್ಟು ಸುಲಭವಲ್ಲ. ಈ ಸ್ವಯಂಚಾಲಿತ ನಗುವಿನ ವರ ನಮಗೆ ಹುಟ್ಟಿನಿಂದಲೇ ಬಂದಿರಬೇಕು. ಬಹಳಷ್ಟು ಸಲ ಹೆಣ್ಣಿನ ನಗುಮುಖದ ಹಿಂದೆ ಖುಷಿಯನ್ನು ಬಿಟ್ಟು ಬೇರೆ ಎಲ್ಲಾ ಭಾವನೆಗಳಿರುವ ಸಾಧ್ಯತೆಗಳೇ ಹೆಚ್ಚು. ಹೆಣ್ಣುಮಕ್ಕಳು ಗಂಡುಗಳಿಗಿಂತ ಬೇಗ ಪ್ರಬುದ್ಧರಾಗುವುದರಿಂದ ಅವರು ಸಿಟ್ಟಿಗೇಳುವುದು ಕಡಿಮೆಯೆಂದು ಕೂಡ ಸಂಶೋಧನೆಗಳಿಂದ ಸಾಬೀತಾಗಿದೆ. ಹಾಗೆ ಹುಟ್ಟಿದಾಗಿನಿಂದ ಹೆಚ್ಚು ನಗುವ ಹೆಣ್ಣು ಯೌವನಾವಸ್ಥೆಗೆ ಬರುತ್ತಿದ್ದಂತೆ ಆ ಪಟ್ಟವನ್ನು ಮೌನವಾಗಿ ಗಂಡಿಗೆ ಬಿಟ್ಟುಕೊಟ್ಟು ತನ್ನ ಭಾವನೆಗಳನ್ನು ಹೊರಹಾಕದಿರುವ ಕಾರಣವನ್ನೂ ಕಂಡುಹಿಡಿಯಬೇಕಾಗಿದೆ.

ಕೆಲವರು ಸದಾ ಯಾವುದೇ ಪಕ್ಷಪಾತವಿಲ್ಲದೇ ಸಿಟ್ಟಾಗಿರಲಿ, ಕಳವಳಗೊಂಡಿರಲಿ, ಆತಂಕವೇ ಆಗಿರಲಿ, ಮಕ್ಕಳೊಂದಿಗಿರಲಿ, ಫೋಟೋ ತೆಗೆಯುವಾಗ, ಇಂಟರ್‌ವ್ಯೂನೇ ಇರಲಿ, ಹಾಸ್ಯದ ವಿಷಯವಿರಲಿ, ಅಪರಿಚಿತರೊಂದಿಗೆ ಮಾತಾಡುವಾಗ, ಹೀಗೆ ಯಾವುದೇ ಸನ್ನಿವೇಶದಲ್ಲೂ ನಗುತ್ತಾರೆ. ಇದೇನು ಹೀಗಳೆಯುವ ವಿಷಯವಲ್ಲ. ಒಂದು ನಗು ಕ್ಷಣಾರ್ಧದಲ್ಲಿ ಭಾರವನ್ನು ತಗ್ಗಿಸುತ್ತದೆ. ದುಃಖವನ್ನು ಕುಗ್ಗಿಸುತ್ತದೆ. ಅಶಾಂತಿಯನ್ನು ದೂರಮಾಡಿ ಚೈತನ್ಯವನ್ನು ತುಂಬುತ್ತದೆ. ಮಹಿಳಾ ವೈದ್ಯರು ಪುರುಷ ವೈದ್ಯರಿಗಿಂತ ಹೆಚ್ಚು ನಗುವುದಕ್ಕೇ ಇರಬೇಕು ರೋಗಿಗಳು ಹೆಚ್ಚಾಗಿ ಅವರನ್ನೇ ಇಷ್ಟಪಡುವುದು.

ತಪ್ಪಾದರೂ ಒಪ್ಪಾದರೂ ಅದನ್ನು ನಗುವಿನಿಂದಲೇ ಪ್ರಕಟಪಡಿಸುವ ಹೆಣ್ಣಿಗೆ ನಗುವೆನ್ನುವುದು ಸ್ವಾಭಾವಿಕ. ಅಲ್ಲಿಗೆ ಹೆಣ್ಣಿಗೆ ನಗುವಿನ ಶಕ್ತಿಯ ಬಗ್ಗೆ ಇರುವ ನಂಬಿಕೆ ಎಷ್ಟು ಎನ್ನುವುದು ಸಾಬೀತಾಗುತ್ತದೆ. ನಮಗೆ ನಗುವೆಂಬುದು ಬಹುಮುಖವಾದ ರಕ್ಷಣೆಯ ಸಾಧನವೂ ಹೌದು. ಹೆಣ್ಣಿನ ಈ ನಗುವ ಶಕ್ತಿಯೇ ಅವಳನ್ನು ನರ್ಸ್, ರಿಸೆಪ್ಷನಿಸ್ಟ್, ಸೆಕ್ರೆಟರಿ, ಶಿಕ್ಷಕಿ ಮೊದಲಾದ ಕೆಲಸಗಳಿಗೆ ಬ್ರಾಂಡ್ ಮಾಡಿದ್ದಿರಬೇಕು. ಪರಿಣಾಮವೆಂದರೆ ಮನೆಯಲ್ಲಿ ಯುದ್ಧವೇ ನಡೆದಿರಲಿ, ಮಕ್ಕಳು ಹುಷಾರು ತಪ್ಪಿರಲಿ, ಆರೋಗ್ಯ ಸರಿಯಿಲ್ಲದೇ ಇರಲಿ, ರಾತ್ರಿಯಿಡೀ ನಿದ್ದೆ ಇಲ್ಲದಿರಲಿ ಇವರು ನಗುತ್ತಿರುತ್ತಾರೆ. ನಾನು ಓದುತ್ತಿರುವಾಗ ನನ್ನ ಗೆಳತಿಯೊಬ್ಬಳನ್ನು ನಮ್ಮ ಟೀಚರ್ ಬದಿಗೆ ಕರೆದು ಯಾಕೆ ಸಪ್ಪಗಿದ್ದೀಯಾ, ಏನಾಗಿದೆಯೆಂದು ಕೇಳಿದ್ದರು. ಅವಳಿಗೇನೂ ತೊಂದರೆಯಿರಲಿಲ್ಲ. ಆ ಗೆಳತಿ ನಗದೇ ಸಾಮಾನ್ಯವಾಗಿದ್ದದ್ದೇ ಅದಕ್ಕೆ ಕಾರಣವಾಗಿತ್ತೆಂದು ಈಗ ನನಗೆ ಗೊತ್ತಾಗಿದೆ.

ಹಿಂದಿನ ಕಾಲದಲ್ಲಿ ಹೆಣ್ಣು ಜೋರಾಗಿ, ಗಹಗಹಿಸಿ ನಗುವುದು ಸಾಧ್ಯವೇ ಇರಲಿಲ್ಲ. ಅದು ಸಭ್ಯತೆಯ ಲಕ್ಷಣವಾಗಿರಲಿಲ್ಲ. ಮುಗುಳ್ನಗುವಿಗೆ ಮಾತ್ರ ಅವಕಾಶವಿತ್ತು. ಆ ಕಾಲದ ಚಿತ್ರಕಲೆ, ಶಿಲ್ಪಕಲೆಗಳನ್ನು ನೋಡಿದರೆ ಯಾವ ಸ್ತ್ರೀಯೂ ಸ್ವಚ್ಛಂದವಾಗಿ ನಕ್ಕಿಲ್ಲ. ಮುಗ್ಧ ಅಥವಾ ಹೆಚ್ಚೆಂದರೆ ಸ್ನಿಗ್ಧಮುಖಗಳಿಗೆ ಮಾತ್ರ ಅವಕಾಶವಿತ್ತು. ಹತ್ತೊಂಭತ್ತನೇ ಶತಮಾನದಿಂದೀಚೆಗೆ ಸುಂದರ, ಉತ್ಸಾಹೀ ನಾರಿಮಣಿಯರು ಜಾಹೀರಾತುಗಳಲ್ಲಿ ಮಿಂಚತೊಡಗಿದರು. ಗಂಭೀರವಾದ ಹೆಣ್ಣಿನ ಮುಖಚಹರೆಗೆ ಬ್ರೇಕ್ ಬಿದ್ದು ನಗುವ, ಉಲ್ಲಸಿತ ಮಹಿಳೆಯರು ಕಾಣತೊಡಗಿದರು. ಮುಂದಿನ ದಿನಗಳಲ್ಲಿ ಆಕರ್ಷಕವಾಗಿ ನಗುವ ಹೆಣ್ಣುಗಳು ಜನಪ್ರಿಯರಾದರು. ಸಿನೆಮಾಗಳಲ್ಲಂತೂ ಹೆಣ್ಣಿಗೆ ನಗುವ ಮತ್ತು ಅಳುವುದೇ ಕೆಲಸವಾಯಿತು. ಜ್ಯೂಲಿಯಾ ರಾಬರ್ಟ್ಸ್, ಮಾಧುರಿ ದೀಕ್ಷಿತ್ ಮುಂತಾದವರ ನಗು ಮನೆಮಾತಾಯಿತು. ಟೀವಿ ಸೀರಿಯಲ್ಲುಗಳು ನಗುವೇನು, ಅಟ್ಟಹಾಸಗೈಯ್ಯುವ ಹೆಣ್ಣು ಪಾತ್ರಗಳನ್ನೂ ಚಿತ್ರಿಸಿ ಗೆದ್ದರು. ಹೆಣ್ಣಿಗೆ ಮೌನವೇ ಆಭರಣವಿದ್ದದ್ದು ನಗುವೇ ಭೂಷಣವಾಯ್ತು.

ಕಾಲಚಕ್ರ ಮತ್ತೊಮ್ಮೆ ತಿರುಗಿದೆ. ಮತ್ತೆ ಗಂಭೀರವಾಗಿರುವ ಹೆಣ್ಣುಗಳು ಬರತೊಡಗಿದ್ದಾರೆ. ಈಗ ವ್ಯಾಯಾಮ ಮಾಡುವ, ಸಾಹಸದಲ್ಲಿ ಪಾಲ್ಗೊಳ್ಳುವ, ಕ್ರೀಡಾಪಟುವಾಗಿರುವ ಸೂಪರ್ ವುಮನ್ ಜಾಹೀರಾತುಗಳಲ್ಲಿ, ಚಲನಚಿತ್ರಗಳಲ್ಲಿ ಮಿಂಚತೊಡಗಿದ್ದಾಳೆ. ಅಪರಾಧ ಎಸಗುವ ಮತ್ತು ಅಪರಾಧಿಗಳನ್ನು ಸದೆಬಡಿಯುವ ಪಾತ್ರಗಳನ್ನೂ ಸಮರ್ಥವಾಗಿ ನಿಭಾಯಿಸತೊಡಗಿದ್ದಾಳೆ. ಮರ ಸುತ್ತುವ ಮತ್ತು ಕುಣಿಯುವ ಕೆಲಸ ಕಡಿಮೆ ಮಾಡಿ ಕಥೆಯ ಜೀವಾಳವಾಗುತ್ತಿದ್ದಾರೆ. ಬೇಡದ ನಗುವಿನ ಶಿಕ್ಷೆ ನಿಂತಿದೆ. ಇಂದಿನ ಹೆಣ್ಣು ಮಕ್ಕಳ ಕನಸುಗಳು ಬದಲಾಗಿವೆ. ಗಂಡ ಮಕ್ಕಳೊಂದಿಗೆ ನಗುನಗುತ್ತ ಬಾಳುವ ಕನಸು ಕಾಣುತ್ತಿದ್ದವರು ಈಗ ಟ್ರೆಕ್ಕಿಂಗ್, ಪರ್ವತಾರೋಹಣ, ಬೈಕ್ ಸವಾರಿ, ಸೋಲೋ ಪ್ರವಾಸಗಳಂತಹ ಕನಸು ಕಟ್ಟಿಕೊಳ್ಳುತ್ತಿದ್ದಾರೆ. ಆಧುನಿಕ ಹೆಣ್ಣಿನ ನಗು ಕೂಡ ಅವರ ಆತ್ಮಕತೆಯಂತಾಗಿರುವುದು ಅದ್ಭುತ ಬೆಳವಣಿಗೆ.


ಏನೇ ಆದರೂ ನಗುವಿನ ಲಾಭಗಳನ್ನು ಕಡೆಗಣಿಸುವಂತಿಲ್ಲ. ನಗುವಿನಿಂದಲೇ ಆರೋಗ್ಯಭಾಗ್ಯ ಎಂದು ನಂಬಿ ನಗೆ ಕ್ಲಬ್ಬುಗಳನ್ನು ಮಾಡಿಕೊಂಡು ದಿನಬೆಳಗಾದರೆ ಪಾರ್ಕಿನಲ್ಲಿ ದೊಡ್ಡದಾಗಿ ನಗುವವರಿಗೆ ಅದು ಚೆನ್ನಾಗಿ ಗೊತ್ತು. ನಗುವಾಗ ಮೆದುಳು ಕೊಡುವ ಬಹುಮಾನವಾದ ಸೆರಾಟೊನಿನ್, ಡೋಪಾಮೈನುಗಳೆಂಬ ಹ್ಯಾಪಿ

ಹಾರ್ಮೋನುಗಳಿಂದಾಗುವ ಆರೋಗ್ಯ ಸುಧಾರಣೆ ಕೂಡ ಗಮನಾರ್ಹವಾದುದು.

ಇತ್ತೀಚಿನ ಯುವಪೀಳಿಗೆ ನಗುವಿಗೆ ಕೊಡುವಷ್ಟು ಮಹತ್ವವನ್ನು ನಾವ್ಯಾರೂ ಕೊಟ್ಟಿಲ್ಲ. ಸ್ಟ್ಯಾಂಡ್‌ಅಪ್ ಕಾಮಿಡಿ, ರೋಸ್ಟಿಂಗ್, ಡಾರ್ಕ್ ಹ್ಯೂಮರ್ ಎಂದೆಲ್ಲ ನಗುವಿನ ಹೊಸ ಹಾಸ್ಯ ಪ್ರಕಾರಗಳನ್ನು ಜನಪ್ರಿಯಗೊಳಿಸಿದ್ದಾರೆ. ಕೈತುಂಬ ಸಂಬಳದ ಕೆಲಸ ಬಿಟ್ಟು ಪೂರ್ಣಾವಧಿ ಇಂಥ ಉದ್ಯೋಗಗಳನ್ನು ಮಾಡತೊಡಗಿದ್ದಾರೆ. ಬಿಡುವಿಲ್ಲದೇ ದುಡಿಯುವ ನಗರವಾಸಿಗಳು ಅವರ ಕಾರ್ಯಕ್ರಮಗಳನ್ನು ನೋಡಲು, ಅಂದರೆ ನಗುವದಕ್ಕಾಗಿಯೇ, ದುಬಾರಿ ಬೆಲೆಯ ಟಿಕೆಟ್ ಕೊಂಡು ಹೋಗಿ ನಗುತ್ತಾರೆ. ಇದನ್ನು ನೋಡಿದಾಗಲೆಲ್ಲ ನಮ್ಮ ಹಿಂದಿನ ರಾಜ ಮಹಾರಾಜರು ತಮ್ಮ ಆತಂಕವನ್ನು ಕಡಿಮೆ ಮಾಡಿಕೊಳ್ಳಲು ನೇಮಿಸಿಕೊಳ್ಳುತ್ತಿದ್ದ ಆಸ್ಥಾನ ವಿದೂಷಕರ ನೆನಪಾಗುತ್ತದೆ.

ಜನರು ನಗಲೇಬಾರದೆಂಬ ಕಾನೂನು ಬಂದರೆ ಏನಾದೀತು ಊಹಿಸಬಲ್ಲಿರಾ? ಅಂಥದ್ದೊಂದು ಪರಿಸ್ಥಿತಿ ಇಂದಿನ ಯುಗದಲ್ಲೂ ಉತ್ತರ ಕೊರಿಯಾ ದೇಶದಲ್ಲಿದೆ. ಅಲ್ಲಿಯ ಸರ್ವಾಧಿಕಾರಿ ಕಿಮ್ ಯಾಂಗ್–ಉನ್ ಪ್ರತಿವರ್ಷ ತನ್ನ ತಂದೆ ಕಾಲವಾದ ಸಮಯದಲ್ಲಿ ಹತ್ತು ದಿನಗಳ ಶೋಕಾಚರಣೆ ಮಾಡಿ ನಗುವುದಕ್ಕೂ ಪ್ರತಿಬಂಧಕಾಜ್ಞೆ ವಿಧಿಸುತ್ತಾನೆ. ನಗಲೂ ಸ್ವಾತಂತ್ರ್ಯವಿಲ್ಲದ ಅದೆಂಥ ದಾರುಣ ಬದುಕು ಅವರದಾಗಿರಬಹುದೆಂದು ಯೋಚಿಸಿದಾಗ ವಿಷಾದದ ನಗು ಮೂಡುತ್ತದೆ.

ಪಾಶ್ಚಾತ್ಯ ದೇಶಗಳಲ್ಲಿ ಒಬ್ಬರ ಮುಖ ನೋಡಿದಾಗ ಅಪರಿಚಿತರಾದರೂ ನಗುವ ಸತ್ಸಂಪ್ರದಾಯವಿದೆ. ಅದೊಂದು ಆಹ್ಲಾದಕರ ಅನುಭವ. ನಮ್ಮಲ್ಲಿ ಹಾಗೆ ನಕ್ಕರೆ ನಾವು ದುರುಗುಟ್ಟಿ ನೋಡುತ್ತೇವೆ. ಅದೇನೋ ಒಳಸಂಚಿರಬಹುದೆಂದು ಮುಖ ತಿರುಗಿಸಿಕೊಳ್ಳುತ್ತೇವೆ. ಆಭಾಸವಾಗುವ ಪ್ರಮೇಯಗಳೇ ಜಾಸ್ತಿ. ಪ್ರಸನ್ನ ಮುಖಗಳು ಸಂತಸ ಮೂಡಿಸಿದರೆ ಸಿಡುಕು ಮುಖಗಳು ಮನಸ್ಸನ್ನು ಮುದುಡುವಂತೆ ಮಾಡುತ್ತವೆ. ಉಚಿತವಾಗಿ ಖುಷಿಯನ್ನು ಹಂಚಬಹುದಾದ ಏಕೈಕ ಸಾಧನವೆಂದರೆ ನಗು. ಅದನ್ನೂ ಖರ್ಚು ಮಾಡದ ಜಿಪುಣರನ್ನು ಕಂಡಾಗ 'ನಗೆಯು ಬರುತಿದೆ ಎನಗೆ ನಗೆಯು ಬರುತಿದೆ' ಎನ್ನದೇ ಬೇರೆ ವಿಧಿಯಿಲ್ಲ. ■




**ಅದಕ್ಕೇ ಹೇಳೋದು, ಪೊಲೀಸರು ಮನೆ ಬರೋ ಮೊದಲೇ ಬಾಕಿ ದಂಡ ತುಂಬಿ ಬನ್ನಿ ತಿಳಿತಾ..!**

# ಕರ್ಮಾ ರಿಟರ್ನ್ಸ್

ಮಿಥುನ ಧಾರವಾಡ

ಸರಸೋ ಫೋನ್ ಅಂದರೆ ಟಚ್ ಸ್ಕ್ರೀನ್ ಫೋನ್ ನನ್ನ ಕೈಗೆ ಬಂದ ಮೇಲಷ್ಟೇ ನಾನು ಸಾಮಾಜಿಕ ಜಾಲತಾಣಕ್ಕೆ ತೆರೆದುಕೊಂಡಿದ್ದು. ವಾಟ್ಸ್‌ಆ್ಯಪ್, ಫೇಸ್‌ಬುಕ್ ಬಳಸುವುದು ಕಲಿತಿದ್ದೆ. ಈ ಜಾಲತಾಣವೆಂಬುದು ಅಂತಿಮ ತಾಣವಿಲ್ಲದ ಪಯಣದಂತೆ. ಈ ಪಯಣದಲ್ಲಿ ನನಗೆ ಇರುವ ಅಜ್ಞಾನದ ಮಿತಿ ನನಗೆ ತಿಳಿದಿರಲಿಲ್ಲ. ಜ್ಞಾನಕ್ಕೆ ಒಂದು ಮಿತಿ ಇದೆ. ಅಜ್ಞಾನಕ್ಕೆ ಉಹ್ಞೂಂ. ಅದು ಅಪರಂಪಾರ, ಅದಕ್ಕೆ ಮಿತಿಯೇ ಇಲ್ಲ. ಬೀಚಿ ಹೇಳತಾರೆ 'ಮನುಷ್ಯ ಎಷ್ಟು ವಿಚಿತ್ರ ಅಂದರೆ ಅವನಿಗೆ ಬುದ್ಧಿಯ ಅಹಂಕಾರವಿರುತ್ತದೆ. ಆದರೆ ಅಹಂಕಾರವಿದೆ ಅನ್ನುವ ಬುದ್ಧಿ ಇರುವುದಿಲ್ಲ'.

ಟಿ.ವಿ. ನ್ಯೂಜ್‌ನಲ್ಲಿ ಅದೇನೋ ಎಕ್ಸ್ ರೀಲ್ ಬಗ್ಗೆ ಹೇಳಿದರು. ಪ್ರಸಿದ್ಧ ನಟ–ನಟಿಯರು ಕೆಲ ದಿನಗಳ ಜೊತೆ ಜೊತೆ ತಿರುಗಾಟದ ನಂತರ ಗಂಡ ಹೆಂಡತಿಯರಾದರು. ಮುಂದೆ ಬೇರೆ ಬೇರೆಯೂ ಆದರು. ತನ್ನ ಎಕ್ಸ್ ಹೆಂಡತಿ ಅವಳ ಎಕ್ಸ್ ನಾಯಿಯೊಂದಿಗೆ ಇದ್ದದ್ದನ್ನು ಎಕ್ಸ್‌ನಲ್ಲಿ ಅವಳ ಎಕ್ಸ್ ಗಂಡ ಹಂಚಿಕೊಂಡಿದ್ದ. ಇಲ್ಲಿ ಎಷ್ಟು ಎಕ್ಸ್ ಬಂದವು ಅಂತ ಆಮೇಲೆ ಎಣಿಸಿ. ಎಕ್ಸ್ ಅಂದರೆ ಮಾಜಿ ಅಂತ ಗೊತ್ತು. ಈ ಎಕ್ಸ್‌ನಲ್ಲಿ ಹಂಚಿಕೊಂಡದ್ದು ಅಂದರೆ ಏನು ಅಂತ ನನಗೆ ಗೊತ್ತಿಲ್ಲ. ಎಕ್ಸ್ ಬಾಯ್‌ಫ್ರೆಂಡ್, ಎಕ್ಸ್ ಎಂಎಲ್‌ಎ, ಎಕ್ಸ್ ಎಂಪಿ ಗೊತ್ತು. ವಿಷಯ ಏನಪ್ಪಾಂದರೆ ನಾನು ನನ್ನ ಪ್ರೆಜೆಂಟ್ ಗಂಡನನ್ನು ಕರೆದುಕೊಂಡು ನನ್ನ ಗೆಳತಿಯ ಇಪ್ಪತ್ತೈದನೇ ವಿವಾಹ ವಾರ್ಷಿಕೋತ್ಸವಕ್ಕೆ ಹೋಗಿದ್ದೆ. ಅಲ್ಲಿ ನನ್ನ ಎಕ್ಸ್ ವರ ಕಾಣಬೇಕೇ?

ಮದುವೆಯಾಗಿ ಈ ಹೆಣ್ಣುಮಕ್ಕಳು ಸುಮ್ಮನಿರುವುದಿಲ್ಲ. ಮಕ್ಕಳಾಗತಾವು, ಮಕ್ಕಳ ಮದುವೆನೂ ಆಗತದೆ. ಆದರೂ ಅವರಿಗೆ ತಮ್ಮ ಭೂತ ಮದುವೆಯ ಅಂದರೆ ಭೂತಕಾಲದ ಮದುವೆಯ ಭೂತ ಅವರನ್ನು ಬಿಟ್ಟಿರುವುದಿಲ್ಲ. ಪ್ರತಿ ವರ್ಷ ಮದುವೆಯ ವಾರ್ಷಿಕೋತ್ಸವ, ಹತ್ತು ವರ್ಷದ್ದು ಅಂತ ಒಂದು ಸ್ಪೆಶಲ್ ಸತ್ಯನಾರಾಯಣ ಪೂಜೆ, ಓಣಿಯಲ್ಲಿ ಅರಿಷಿಣ ಕುಂಕುಮ. ಹದಿನೈದು ವರ್ಷಕ್ಕೆ ಅಣ್ಣ ತಮ್ಮಂದಿರಿಗೆ ಪ್ಯಾಂಟು ಶರ್ಟು, ಅಕ್ಕ ತಂಗಿಯರಿಗೆ ಸೀರೆ ಕುಬುಸ ಹಂಚುವ ಕಾರ್ಯಕ್ರಮ. ಇನ್ನು ಇಪ್ಪತ್ತೈದು ವರ್ಷ ಆದರಂತೂ ಮತ್ತೊಂದು ಮದುವೆಯಷ್ಟೇ ಖರ್ಚು. ವ್ಯತ್ಯಾಸ ಇಷ್ಟೇ, ಮೊದಲ ಮದುವೆ ಮಾವ ಖರ್ಚು ಮಾಡಿ ಮಾಡಿರುತ್ತಾನೆ ಈಗ ತನ್ನ ಮದುವೆಯ ಖರ್ಚು ತಾನೇ ಮಾಡಿಕೊಳ್ಳಬೇಕು. ಹೆಂಡತಿಗೆ ಸೀರೆ + ಬಂಗಾರ ಆಭರಣ ವಿಶೇಷ ರೀತಿಯದು. ಸಂಬಂಧಿಕರಿಗೆ ಬಟ್ಟೆ ಬರೆ ಇತ್ಯಾದಿ, ಮನಿ ಸಣ್ಣದು ಸಾಲದು ಎಂದು ದೊಡ್ಡ ಹಾಲ್, ಅದಕ್ಕೆ ಅಲಂಕಾರ ಹೀಗೆ ಒಂದಕ್ಕೊಂದು ಅಂತ ದೊಡ್ಡ ಖರ್ಚು ಬರುತ್ತದೆ ಅಂತ ಗಂಡಸರು ಗೊಣಗತಾರೆ.

ಆದರೆ ಸಂಭ್ರಮ ಬಿಡಲಿಕ್ಕೆ ಆಗತದೇನು? ನಮಗೆ ಅಂದರೆ ಹೆಣ್ಮಕ್ಕಳಿಗೆ ಅದೊಂದು ಸಂಭ್ರಮ. ಜೀವನ ಒಂದು ಜಾತ್ರೆ. ಹೆಣ್ಣು ಜಾತ್ರೆಯಲ್ಲಿ ಅಲಂಕೃತ ತೇರು. ಅದನ್ನು ಎಳೆಯುವವರು ಯಾರು ಅಂತ ನಿಮಗೆಲ್ಲ ಗೊತ್ತು ಇರಲಿ. ನನ್ನ ಗೆಳತಿಯ ಇಪ್ಪತ್ತೈದನೇ ವಿವಾಹ ವಾರ್ಷಿಕೋತ್ಸವ ನಿಮಿತ್ತ ನಾನು ನನ್ನ ಗಂಡ ಹೋಗಿದ್ದೆವು. ಹಾಲ್ ಗಿಜಿ ಗಿಜಿ. ಒಬ್ಬರಿಗೊಬ್ಬರೂ ಮಾತಾಡಿದರೂ ಕೇಳದಷ್ಟು

ಜೋರಾದ ಶಬ್ದ ಇರುವ ಸಿಂಧಿ/ಪಂಜಾಬಿ ಹಾಡು. ಸಮಾರಂಭ ಕನ್ನಡಿಗರದೇ! ಖಾಲಿ ಸ್ಥಳ ನೋಡಿ ಕುಳಿತೆವು.

ನನ್ನ ಮಗ್ಗಲು ಕುಳಿತಾಕೆ ನನ್ನ ಗೆಳತಿಯ ದೂರದ ಸಂಬಂಧಿ. ಮಾತು ಶುರುವಾಯಿತು. ಪರಿಚಯ ಆದ ಮೇಲೆ ಮಾತಾಡದ ಸುಮ್ಮನ ಹೆಂಗ ಕೂಡಲಿಕ್ಕಾಗತದ ಗಂಡಸರ್ಧಂಗ.

ನಿಮ್ಮ ತವರಮನಿ ಯಾವ್ದು? ಬೆಳಗಾವಿ, ಬೆಳಗಾವ್ಯಾಗ ಎಲ್ಲಿ ? ಅನಂತಶಯನ ಗಲ್ಲಿ, ಅಯ್ಯ! ನಮ್ಮ ಸೋದರಮಾವ ಕಟ್ಟಿ ಅವರೂ ಅನಂತಶಯನ ಗಲ್ಲಿಯೊಳಗ ಇರತಾರ, ನಮಗ ಅವರ ಪರಿಚಯ ಅದ, ಅವರು ನಮಗೂ ದೂರದ ಸಂಬಂಧ ಆಗಬೇಕು, ಹೀಗೆ ನಮ್ಮ ಮಾತಿನ ರೈಲು ಮಿರಜ ಸಾಂಗಲಿ ಹುಬ್ಬಳ್ಳಿ ಧಾರವಾಡ ಬಳ್ಳಾರಿ ಅಲ್ಲಲ್ಲಿ ನಿಲ್ಲುತ್ತಾ ಸಾಗಿತು. ಹಗಲ ಇರಲಿ ರಾತ್ರಿ ಇರಲಿ ರೈಲಿನ ಎಂಜಿನ್ ಎಚ್ಚರವಾಗೇ ಇದ್ದು ಓಡುತ್ತಲೇ ಇರುತ್ತೆ. ಆದರೆ ಬೋಗಿಗಳು ಹಾಗಲ್ಲ. ತೂಕಡಿಸುತ್ತಾ ಎಂಜಿನ್ ಹಿಂಬಾಲಿಸುತ್ತವೆ. ನನ್ನ ಜೊತೆ ಬಂದಿದ್ದ ನನ್ನ ಬೋಗಿ ಕುಳಿತಲ್ಲೆ ತೂಕಡಿಸುತ್ತಿತ್ತು.

ಅವಳ ಮಗ್ಗಲು ಆಚೆ ಕುಳಿತ ಅವನನ್ನು ನೋಡಿದೊಡನೇ ಎಲ್ಲೋ ನೋಡಿದಂತೆ ಅನ್ನಿಸಿತು. ಹ್ಞಾಂ! ಅದೇ ಮುಖ. ಕೌಶಿಕ ಮುನಿಯ ಸಿಡುಕು ಮುಖ ನೆನಪಾಯಿತು. ಅವನ ಹೆಸರು ಏನಿತ್ತೊ ಏನೋ, ಅವನ ಅಂದಿನ ನಡತೆ ಅವನಿಗೆ ಕೌಶಿಕ ಮುನಿ ಅನ್ನುವ ಹೆಸರು ತಂದಿತು. ಅದೇ ಹೆಸರು ಖಾಯಂ ಆಗಿ ನನ್ನ ನೆನಪಲ್ಲುಳಿಯಿತು. ಆ ಕೌಶಿಕ ಮುನಿಯ ಮನೆಗೆ ನಾನು ಕನ್ಯಾರತ್ನವಾಗಿ ಕನ್ಯಾ ಪರೀಕ್ಷೆಗೆ ಹೋಗಿದ್ದೆ. ಅದೇ ಡಿಗ್ರಿ ಮುಗಿಸಿ ರಿಜಲ್ಟಗೆ ಕಾಯುತ್ತಿದ್ದ ನನಗೆ ಮೊದಲ ವರ ಪರೀಕ್ಷೆಯಾಗಿತ್ತು.

'ನಮ್ಮ ಹುಡುಗ ಸರ್ಕಾರಿ ನೌಕರ. ಆಫೀಸಿನಿಂದ ಬರುವುದು ಸ್ವಲ್ಪ ತಡವಾದೀತು, ಇನ್ನೇನು ಬರುತ್ತಾನೆ ಕುಳಿತುಕೊಳ್ಳಿ'.

ಎಂದು ನಮ್ಮನ್ನೆಲ್ಲಾ ಕೂಡಿಸಿದರು. ಕೌಶಿಕ ಮುನಿಯ ತಾಯಿ ನನ್ನನ್ನು ನೋಡಿ 'ಇನ್ನೊಮ್ಮೆ ಫ್ರೆಶ್ ಆಗತಿದ್ದರೆ ಆಗು' ಎಂದು ಉಪಚಾರ ಮಾಡಿದರು. ಕೌಶಿಕ ಮುನಿಯ ಅಕ್ಕತಂಗಿಯರು ನನ್ನ ಹತ್ತಿರ ಬಂದು ಹರಟೆ ಹೊಡೆದರು. ಸ್ವಲ್ಪ ಹೊತ್ತಿಗೆ ಕೌಶಿಕ ಮುನಿಯ ಆಗಮನವಾಯಿತು. ಮನೇಲಿ ಎಲ್ಲರೂ ಗಪ್‌ಚುಪ್. ಅಬಾಬಾ, ದೊಡ್ಡ ಹವಾಪಾ ಇವಂದು, ಅನಿಸಿತು. ನಾನು ಬಂದಿರುವ ವಿಚಾರ ಗೊತ್ತಿತ್ತೋ ಇಲ್ಲವೋ, ಕಾಲು ಅಪ್ಪಳಿಸುತ್ತಲೇ ಮನೆಯಲ್ಲಾ ಅಡ್ಡಾಡಿದ ಕೌಶಿಕ ಮುನಿ ಕೈಕಾಲು ತೊಳೆದುಕೊಂಡು ಬಂದು ಏನೂ ಒಪ್ಪ ಓರಣ ಇಲ್ಲದೆ ನಮ್ಮ ಮುಂದೆ ಬಂದು ಕುಳಿತಿತು. ಏನೊಂದು ಮಾತನಾಡದೇ ನಮ್ಮಪ್ಪ ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಡದೇ ಮುಖ ಸಿಂಡರಿಸಿಯೇ ಇತ್ತು. ಅವರಪ್ಪ ಕೇಳಿದ ಪ್ರಶ್ನೆಗೆ ನಾನು ಮೇಲುದನಿಯಲ್ಲಿ ಮುನಿಯ ಕಡೆ ನೋಡುತ್ತ ಉತ್ತರ ನೀಡಿದೆ. ಮುಂದೆ ಕೆಲ ದಿನಗಳ ನಂತರ

'ನಮ್ಮ ಹುಡುಗ ಈಗ ಅನಕಾತ ಲಗ್ನಾ ಒಲ್ಲೆ ಅಂತಾನೆ'

ಅನ್ನುವ ಪತ್ರ ನಮ್ಮಪ್ಪನಿಗೆ ಬಂದಿತು. ಅಪ್ಪ ಅಮ್ಮನಿಗೆ ಸರ್ಕಾರಿ ನೌಕರಿ ಇರುವ ವರಾ ತಪ್ಪಿತು ಅನ್ನುವ ಹಳಹಳಿ. ಆದರೆ ನನಗೆ ಆ ಮುನಿಯನ್ನು

ಕಟ್ಟಿಕೊಳ್ಳುವದು ತಪ್ಪಿತು ಅನ್ನುವ ಸಮಾಧಾನ.

ಇದು ಕಲಿಯುಗ. ಮುಂದೆ ಕೇಳಿ. ಆ ನನ್ನ ಮಗ್ಗಲ ಕುಳಿತ ಗೆಳತಿಯ ಗೆಳತಿ ಮುನಿಯನ್ನು ತೋರಿಸುತ್ತ 'ಅವರು ನಮ್ಮ ಮನೆಯವರು' ಎಂದು ಪರಿಚಯಿಸಿದಳು. ಹರಟೆ ಚಾಲೂ ಇತ್ತು. ಅವಳು ತನ್ನ ಮಗನ ಗುಣಗಾನ ಮಾಡುತ್ತಾ ಅವನು ಬೆಂಗಳೂರಿನಲ್ಲಿ ಇರುವ ದೊಡ್ಡ ಕಂಪನಿ ಕೆಲಸ, ದೊಡ್ಡ ಸಂಬಳ, ದೊಡ್ಡ ಫ್ಲಾಟ್ ಕುರಿತು ಹೇಳಿದಳು. ನಾನು ನನ್ನ ಮಗಳು ಕೂಡಾ 'ಸೇಮ್ ಟು ಸೇಮ್' ಎಂದೆ. 'ಅಯ್ಯ, ಹಂಗಾದ್ರೆ ಛಲೋ ಆತಲ್ಲ. ಕುಂಡಲಿ ಕಳಿಸಿರಿ ಯೋಗಾಯೋಗ ಇದ್ದರೆ ಆಗಲಿ' ಅಂದಳು. ನಾನು ಈ ಕೌಶಿಕ ಮುನಿಯ ಮಗ ಇನ್ನೊಬ್ಬ ದೂರ್ವಾಸ ಮುನಿಯ ತರಹ ಇದ್ದರೆ ನನ್ನ ಮಗಳ ಗತಿಯೇನು? ಎಂದು ವಿಚಾರ ಮಾಡಿ,

'ನನ್ನ ಮಗಳು ಈಗ ಅನಕಾತ ಲಗ್ನಾ ಒಲ್ಲೆ ಅಂತಾಳ್ರಿ. ಅಕಿ ಆಫೀಸಿಂದು ಒಂದು ದೊಡ್ಡ ಪ್ರೊಜೆಕ್ಟ ನಡದದ. ಅದು ಮುಗಿದ ಮ್ಯಾಲೆ ಮದವಿ ಮಾಡತೀವಿ'

ಎಂದು ಹೇಳಿ ಇಪ್ಪತ್ತೈದು ವರ್ಷದ ಹಳೇ ದಂಪತಿಗಳಿಗೆ ವಿಶ್ ಮಾಡಲು ಎದ್ದೆ.

ಅದೇರಿ ಕರ್ಮಾ ರಿಟರ್ನ್ಸ್!

■




" ಎಲ್ಲಾ ಕೊಟ್ಟಿಡಿ ಮೇಡಮ್, ಜೂಮ್ ಗೆ ಬ್ಯಾಕ್‌ಗ್ರೌಂಡ್ ಚೆನ್ನಾಗಿರುತ್ತೆ !"

# ಅಣ್ಣನ ಅವಾಂತರ

✍ಪುಷ್ಪಲತಾ. ಟಿ.ಜಿ

ಬಾಲ್ಯದ ನೆನಪು ಎಂದಾಕ್ಷಣ ಏನೋ ಒಂದು ಸಂಭ್ರಮ. ಅಜ್ಜಿಮನೆ, ಪುಟ್ಟ ಪುಟ್ಟ ಹೆಜ್ಜೆಗೆ ಸರಿ ಹೊಂದುವ ಚಪ್ಪಲಿ, ಬಣ್ಣ ಬಣ್ಣದ ಉದ್ದನೆಯ ಛತ್ರಿ, ಚಿಟ್ಟೆ ಹಿಡಿವ ಸಾಹಸ, ಪೀಟಿ ಬಾಲಕ್ಕೆ ಕಟ್ಟುತ್ತಿದ್ದ ದಾರದ ಎಳೆ, ಅಣ್ಣನ ತರ್ಲೆ, ಟೀಚರ್ ಭಯ, ಮಳೆ ನೀರಿಗೆ ಬಿದ್ದ ಎಣ್ಣೆಯ ರಂಗಿನ ಅಚ್ಚರಿ, ಜಾತ್ರೆಯ ಬೊಂಬೆ, ಅಣ್ಣನ ರಿಮೋಟ್ ಕಾರು, ಬಣ್ಣದ ಫೋನು ಒಂದೇ ಎರಡೇ .......

ಅಣ್ಣನ ತರ್ಲೆಯಂತೂ ಹಾಗೆ ಒಂದರ ನಂತರ ಒಂದು ತೆರೆದಷ್ಟೂ ಬಿಚ್ಚಿಕೊಳ್ಳುತ್ತವೆ. ಶಾಲೆ ಎಂದರೆ ರಗಳೆ ಎಬ್ಬಿಸುತ್ತಿದ್ದ ಅವನ ಕೀಟಲೆ ಒಂದೆರಡಲ್ಲ.

ಹೊರಡುವಾಗ ಅಕ್ಕಂದಿರ ಜೊತೆಗೆ ಹೊರಡುತ್ತಿದ್ದ ನಿಜ, ಆದರೆ ಅವನ ಶಾಲೆ ತೋಟದ ಮನೆಯಲ್ಲಿ ನಡೆದದ್ದೇ ಹೆಚ್ಚು. ಹಾಗೂ ಹೀಗೂ ಶಾಲೆಯ ಗೇಟ್ ವರೆಗೂ ಕರೆದೊಯ್ದರು ಅಲ್ಲಿಂದ ತನ್ನ ಜೇಬಲ್ಲಿದ್ದ ಚಿಲ್ಲರೆ ಅಲ್ಲೇ ಬಿತ್ತು ಎಂದು ಅದನ್ನು ಹುಡುಕುವಂತೆ ನಟಿಸಿ ಅಲ್ಲಿಂದ ಪುನಃ ಕಾಲ್ಕೀಳುತಿದ್ದ ಅವನಿಗೆ ಆ ವಯಸ್ಸಿನಲ್ಲಿ ಅಂತಹ ಐಡಿಯಾಗಳು ಹೇಗಾದರೂ ಬರುತಿದ್ದವೋ ಏನೋ......

ಕೊನೆಗೂ ಒಂದು ದಿನ ತೋಟದಲ್ಲಿ ಅಡಗಿ ಕುಳಿತು ಅಪ್ಪಾಜಿ ಕೈಲಿ ಸಿಕ್ಕು ಒದೆ ತಿಂದದ್ದು ಆಯಿತು. ಅಂದಿನಿಂದ ಖುದ್ದು ಅಪ್ಪಾಜಿಯೇ ಶಾಲೆಯ ತರಗತಿಯವರೆಗೂ ಬಿಟ್ಟು ಬರುತ್ತಿದ್ದರು.

ಅಂದು ಮಧ್ಯಾಹ್ನದ ಬಿಸಿಲು ಜೋರಾಗಿತ್ತು. ಬಿಸಿಲ ಝಳಕ್ಕೆ ಬೆವರ ಸಾಲು ಒರೆಸಿಕೊಳ್ಳುತ್ತಾ ಅಪರೂಪಕ್ಕೆ ಬಂದಿದ್ದ ಮಾವ, ಅಪರೂಪಕ್ಕೆ ಶಾಲೆಗೆ ಹೋಗಿದ್ದ ಇವನನ್ನು ನೋಡಬೇಕೆಂದು ಶಾಲೆಯಿಂದ ಮಧ್ಯಾಹ್ನವೇ ಕರೆದುಕೊಂಡು ಬರಲು ಹೋಗಿದ್ದ. ಬರುವಾಗ ಗಿರಿ ಮನೆಯ ನಾಯಿ ಇಬ್ಬರನ್ನೂ ಎದ್ದು ಬಿದ್ದು ಓಡುವಂತೆ ಅಟ್ಟಿಸಿತು. ಅದರ ಪರಿಣಾಮವೇ ಬೆವರಿನ ಮಳೆಯಲ್ಲಿ ಮಿಂದು ಚಪ್ಪಲಿಯಲ್ಲಾ ಎಲ್ಲೋ ಉದುರಿಹೋಗಿ ಅವಸ್ಥೆಯಲ್ಲಿ ಮನೆ ಸೇರಿದ್ದರು. ಕೊನೆಗೆ ಇಲ್ಲಿನ ಸಹವಾಸವೇ ಬೇಡ. ನಮ್ಮೂರಿನಲ್ಲಿ ಶಾಲೆಗೆ ಸೇರಿಸುವ ಯೋಚನೆ ಹೇಳಿ ಅಂದೇ ಕರೆದೊಯ್ಯಲು ಮುಂದಾದ.

ಹೀಗೆ ಊರನ್ನೇ ಬಿಟ್ಟು ಅಣ್ಣ ಅಜ್ಜಿಮನೆಗೆ ಪರಾರಿಯಾದ. ಹೋದವನು ಅಲ್ಲಿಯೂ ಸುಮ್ಮನಿರದೆ ಒಂದೇ ಸಮನೆ ಹಠ ಮಾಡಿ ನನ್ನನ್ನು ಕರೆಸಿಕೊಂಡ. ನಾನು ಇವನ ಅವಾಂತರದಿಂದ 5 ವರ್ಷಕ್ಕೆ ಶಾಲೆಯಲ್ಲಿ ಕೂರುವಂತೆ ಆಯಿತು ಅದೂ ಅಮ್ಮನನ್ನು ಬಿಟ್ಟು ದೂರದ ಅಜ್ಜಿಮನೆಯಲ್ಲಿ.

ಅಲ್ಲಿಯೇನು ಅವನ ಅವಾಂತರಗಳು ಕಡಿಮೆಯಾಗಲಿಲ್ಲ. ಶಾಲೆ ಎಂದರೆ ಸೆರೆಮನೆ ಎಂದೇ ಭಾವಿಸಿದ್ದ ಆತ ಶಾಲೆಗೆ ಹೋಗುವ ಗೋಜಿಗೆ ಹೋಗದೆ ಸುಮ್ಮನಿರಲು ಬಯಸುತ್ತಿದ್ದ. ಅವನು ಬಿಟ್ಟರೂ ಶಾಲೆ ಅವನನ್ನು ಬಿಡಲು ಸಾಧ್ಯವೇ ಇರಲಿಲ್ಲ. ಮನೆ ಹತ್ತಿರದ ಶಾಲೆ ಆದ್ದರಿಂದ ಅವನನ್ನು ಕರೆದೊಯ್ಯಲು ಟೀಚರ್ ಗಳೆ ಬಂದರು ಆಶ್ಚರ್ಯವೇನು ಇರಲಿಲ್ಲ. ಹಾಗೆ ಬಂದದ್ದೂ ಇದೆ. ಹಾಗೆ ಬಂದಾಗಲಂತೂ ಅವರು ಹಿಟ್ಲರ್ ರೀತಿ ಕಾಣುತ್ತಿದ್ದರು. ಆದರೂ ಅವರಿಂದ

ಹೇಗೋ ತಪ್ಪಿಸಿಕೊಳ್ಳಲು ಶತ ಪ್ರಯತ್ನ ಮಾಡುತಿದ್ದ.

ಒಮ್ಮೆಯಂತೂ ಹೋಗದೆ ತಪ್ಪಿಸಿಕೊಳ್ಳಲು ರೂಂ ಬಾಗಿಲು ಹಾಕಿಕೊಂಡು ಕುಳಿತುಬಿಟ್ಟಿದ್ದ. ಪಕ್ಕದ ಮನೆಯ ರಾಮಯ್ಯ ಬಂದು ಹಂಚನ್ನು ತೆಗೆದು ಒಳ ಇಳಿಯುತ್ತೇನೆ ಎಂದೆಲ್ಲ ಹೆದರಿಸಿ ಬಾಗಿಲು ತೆಗೆಸಿದ್ದರು. ಹಾಗೂ ಹೀಗೂ ನಾಲ್ಕೈದನೆಯ ತರಗತಿಯ ಹೊತ್ತಿಗೆ ಸುಮಾರಿಗೆ ಶಾಲೆಯತ್ತ ಮುಖ ಮಾಡಿದ್ದ. ಓದುವುದರಲ್ಲಿ ಜೋರಾಗಿದ್ದ ಹಾಗೂ ಮುತ್ತು ಪೋಣಿಸಿದಂತೆ ಅಕ್ಷರ ಬರೆಯುತ್ತಿದ್ದ ಅವನನ್ನು ಬಿಡಲು ಸುತಾರಾಂ ಶಿಕ್ಷಕರು ಒಪ್ಪದೇ ಕಾಡಿದ್ದೇ ಅವನ ಶಾಲೆಯ ಪಯಣಕ್ಕೆ ಮೆಟ್ಟಿಲಾಯಿತು.

ಇಷ್ಟು ದಿನ ಅವನು ತಪ್ಪಿಸಿಕೊಂಡರೆ ಒಮ್ಮೆ ಹುಡುಗರೆಲ್ಲ ಸಾಮೂಹಿಕವಾಗಿ ತಪ್ಪಿಸಿಕೊಳ್ಳುವಂತೆ ಕಿತಾಪತಿ ಮಾಡಿದ್ದ.

ಆಗ ಅಣ್ಣ 5ನೇ ತರಗತಿಯಲ್ಲಿದ್ದ. ನಾನು ಅವನು ಒಟ್ಟಿಗೆ ಶಾಲೆಗೆ ಹೋದದ್ದು. ಹೋದ ಮೇಲೆ ಗಣಿತದ ನೋಟ್ಸ್ ತರಲೇ ಇಲ್ಲ ಎಂದು ನೆನಪಿಸಿಕೊಂಡು ಗೆಳೆಯನೊಬ್ಬನ ಜೊತೆ ಪುನಃ ಮನೆ ಕಡೆ ಹೊರಟಿದ್ದ. ಮನೆ ಹತ್ತಿರವಿದ್ದ ಕಾರಣ ಅದೇನು ಜಾಸ್ತಿ ಹೊತ್ತಿನ ಕೆಲಸವಾಗಿರಲಿಲ್ಲ.

ಹರಟುತ್ತಾ ಹೋಗುತ್ತಿದ್ದವರಿಗೆ ಶಾಲೆಗೆ ಬರುತಿದ್ದ ಮಕ್ಕಳ ದಂಡು ಸಿಕ್ಕಿದ್ದೇ ಅವರೊಂದಿಗೆ ಮಾತಿಗೆ ನಿಂತರು. ಯಾಕೆ ಹಿಂದೆ ಬರುತ್ತಿದ್ದೀರ.... ಎಂಬ ಮಕ್ಕಳ ಪ್ರಶ್ನೆಗೆ ಇವರು ಸುಮ್ಮನಿದ್ದರಾ...... ನಿಮಗೆ ಗೊತ್ತಿಲ್ಲವೆ..... ಇವತ್ತು ಗಾಂಧೀಜಿ ಸತ್ತು ಹೋಗಿದ್ದಾರೆ. ರಜೆ, ನಾವು ಹೋಗಿ ಸುಮ್ಮನೆ ಬರುತ್ತಿದ್ದೇವೆ, ಅಂದದ್ದೆ ಹೋ ಎಂದು ಕಿರುಚುತ್ತಾ ಮಕ್ಕಳಿಗೆ ಕುಶಿಯೋ ಕುಶಿ... ಆ ಮಕ್ಕಳು ದಾರಿಯಲ್ಲಿ ಸಿಕ್ಕ ಹುಡುಗರಿಗೆಲ್ಲ ರಜೆ ಎಂದು ಸಾರುತ್ತಾ ಮನೆ ಕಡೆ ಓಡಿದ್ದರು.

ಇದಾವ ಪರಿವೆ ಇಲ್ಲದೆ ಮನೆ ತಲುಪಿ ಪುನಃ ಶಾಲೆಗೆ ಮರಳಿದ್ದರು ಗೆಳೆಯರಿಬ್ಬರು. ಆಗಲೇ ತಿಳಿದದ್ದು ಅವರಿಗೆ ಮಕ್ಕಳು ತಮ್ಮ ಮಾತನ್ನು ನಂಬಿ ಹಿಂದೆ ಹೋಗಿದ್ದಾರೆ ಎಂದು. ತಮಾಷೆ ಹೋಗಿ ಅಮಾಸೆಯಾಗಿತ್ತು. ಭಯಕ್ಕೆ ಇಬ್ಬರ ಎದೆಬಡಿತ ಏರುಪೇರಾಗಿತ್ತು ಆದರೆ ಎನು ಮಾಡಿಯಾರು? ಗುಟ್ಟು ಬಿಡದೆ ಒಳಗೆ ಭಯದಿಂದ ಇಬ್ಬರು ಪಿಸುಗುಡುತ್ತ ಅಂದು ಕಳೆಯಿತು. ಮರುದಿನ ಅವರಿಗಾಗೇ ಕಾದಂತಿತ್ತು. ಸುಮಾರು ಹತ್ತೂವರೆ ಅಷ್ಟು ಹೊತ್ತಿಗೆ ಇಬ್ಬರೂ ಆಫೀಸ್ ರೂಂನಲ್ಲಿ ಹಾಜರು. ದಪ್ಪನೆಯ ರೋಲ್ ಹಿಡಿದು ನಿಂತ ಹೆಡ್ ಮೇಡಂ ಕೆಂಪನೆಯ ಮುಖ. ಇವರೇ ಟೀಚರ್ ನಮಗೆ ಕಳುಹಿಸಿದ್ದು. ನಿಂತ ಮಕ್ಕಳ ದೂರು. ಅನಂತರ ಪ್ರಶ್ನೆಯಿಲ್ಲ. ಹೊಡೆತದ ಉತ್ತರವಷ್ಟೆ ಇವನಷ್ಟು ರೋಧನೆ ನನ್ನದು ಇಲ್ಲವಾದರೂ ಅಮ್ಮ ಶಾಲೆಯ ಕಡೆ ಬಂದಾಗಲಂತೂ ಅಳು, ಹಠ ಜೋರಾಗಿರುತ್ತಿತ್ತು. ಒಮ್ಮೆಯಂತೂ ಬಿದ್ದು ಒದ್ದಾಡಿದರೂ ಬಿಡದೆ ಹಿಡಿದುಕೊಂಡ ಹೆಡ್ ಮೇಡಂ ಎದೆಗೆಲ್ಲ ಪುಟ್ಟ ಕಾಲ ಒದೆತ ತಾಗಿತ್ತು. ಆದರೂ ಬಿಡದ ಅವರು ಚಾಕ್ಲೇಟ್ ಪ್ಯಾಕೆಟ್‌ನ್ನೆ ತಂದು ಇಟ್ಟುಬಿಟ್ಟಿದ್ದರು ಹಠ ಮಾಡಿದಾಗೆಲ್ಲಾ ಚಾಕ್ಲೇಟ್ ಕೊಟ್ಟು ಸಂಭಾಳಿಸುತ್ತಿದ್ದರು. ಅವನ ಕಿತಾಪತಿ ಮುಂದೆ ನನ್ನೂ ಸಂಭಾಳಿಸುವುದು ಅಷ್ಟು ಹೊರೆಯಾಗಿ ಅವರಿಗೆ ಕಾಣುತ್ತಿರಲಿಲ್ಲವೇನೋ.....

ಅವ್ವನಿಗೆ ಮೊಮ್ಮಗ ಎಂದರೆ ಅಕ್ಕರೆ ಹೆಚ್ಚು ಹೀಗಾಗಿ ಹೇಗೋ ಅವ್ವನ ಕಣ್ಣಿಗೆ ಬೆಣ್ಣೆ ಸವರಿ ಶಾಲೆ ತಪ್ಪಿಸಿಕೊಳ್ಳುವುದನ್ನು ಚೆನ್ನಾಗಿ ಕಲಿತಿದ್ದ ಅಣ್ಣ ಪಕ್ಕ ಕಿಲಾಡಿ.

ಎಷ್ಟೋ ಬಾರಿ ಅವ್ವನ ಪ್ಲಾಸ್ಟಿಕ್ ಕೊಪ್ಪೆ ಮರೆಯಲ್ಲಿ ಅಡಗಿ ಶಾಲೆರಸ್ತೆಯನ್ನು ದಾಟಿ ಪೇಟೆ ಗದ್ದೆಗೂ ಹೋಗಿ ಬಿಡುತ್ತಿದ್ದ. ಗದ್ದೆಯಲ್ಲಿ ಹರಿಯುವ ಏಡಿ ಹಿಡಿಯುತ್ತಾ, ಪಕ್ಕದಲ್ಲೇ ಹೋಗುವ ರೈಲನ್ನು ನೋಡುತ್ತಾ, ಕುಷಿಯಲ್ಲಿ ಕುಣಿಯುತ್ತಾ ಬರುತ್ತಿದ್ದ. ಬರುವ ಹೊತ್ತಿಗೆ ಶಾಲೆಬೀಗ ಹಾಕಿದ್ದರಿಂದ ಅವನದು ರಾಜ ನಡಿಗೆ. ಹಾಗೂ ತಪ್ಪಿಸಿಕೊಳ್ಳಲು ಒಂದು ದಿನವೂ ಬಿಡದ ಟೀಚರ್ ಏಳನೆಯ ತರಗತಿಯ ಹುಡುಗರನ್ನು ಮನೆಗೆ ಕಳುಹಿಸಿ ಎತ್ತಿಕೊಂಡಾದಾರೂ ಸರಿ, ಕರೆ ತರಲು ಕಳುಹಿಸಿದಾಗ ಊರು ದಾಟಿ ಕಾಡಿನ ತುದಿವರೆಗೂ ಓಡಿದ್ದ. ಸದಾ ಕ್ರಿಯಾಶೀಲ ಯೋಜನೆಯಲ್ಲೆ ಇರುತ್ತಿದ್ದ ಇವನ ಯಾವುದೇ ಒಂದು ಪ್ರಯೋಗ ಯಶಸ್ವಿ ಆಗಿದ್ದರೂ ನೊಬೆಲ್ ಪ್ರಶಸ್ತಿ ಪಡೆಯುತ್ತಿದ್ದ ಎನ್ನಿಸುತ್ತದೆ. ಅದರಲ್ಲೂ ಪಟಾಕಿ ಪ್ರಯೋಗವಂತೂ ಹೇಳಲೇಬೇಕು.

ಅಂದು ಎಂದಿನಂತೆ ಶಾಲೆ ಮುಗಿಸಿ ಮನೆಗೆ ಬಂದವ ಮನೆಯಲ್ಲಿ ಯಾರೂ ಇಲ್ಲದನ್ನು ಸ್ಪಷ್ಟ ಪಡಿಸಿಕೊಂಡು ತನ್ನ ಕಾರ್ಯಾಚರಣೆಯಲ್ಲಿ ತೊಡಗಿದ್ದ. ಪಟಾಕಿ ಪ್ರಯೋಗ ನಡೆಸಿ ಇನ್ಯಾವ ಸಿಡಿಮದ್ದಿನ ಅನ್ವೇಷಣೆ ಗೆ ಹೋಗಿದ್ದನೋ ಏನೋ..... ಯಶಸ್ವಿ ಆಗಿದ್ದರೆ ಇಂದು ವಿಜ್ಞಾನಿಯ ಪಟ್ಟಿಯಲ್ಲಿ ಇರುತ್ತಿತ್ತು ಅವನ ಹೆಸರು.

ಅಂದು ಮನೆಯಲ್ಲಿ ಯಾರು ಇರಲಿಲ್ಲ. ಅದು ಸುಗ್ಗಿಯ ಒಕ್ಕಲಿನ ಸಮಯ ಎಲ್ಲರೂ ಗದ್ದೆಯಲ್ಲಿ ಇದ್ದ ಹೊತ್ತು. ದೇವಸ್ಥಾನದಲ್ಲಿ ಹೊಡೆದಿದ್ದ ಗರ್ನಲ್ ತಂದು ಕಿಟಕಿಯ ಮೇಲೆ ಅದು ಯಾವಾಗ ಜೋಡಿಸಿ ಇಟ್ಟಿದ್ದನೋ ಏನೋ... ಅಂದು ಅವ್ವ ತೆಗೆದಿಟ್ಟ ರೊಟ್ಟಿ ತಿಂದವ ದಡದಡನೆ ಹೊರ ಜಗುಲಿಗೆ ಬಂದ. ಅಜ್ಜಿಯ ಮನೆಯಲ್ಲಿ ಮರದ ಕಿಟಕಿ ಏಣಿ ಅಲಂಕಾರಿಕ ವಸ್ತುಗಳು ಹೆಚ್ಚು. ಕಿಟಕಿಯ ಸರಳು ಹಿಡಿದು ಮೇಲೆ ಮೇಲೆ ಹತ್ತಿದವ ಇಟ್ಟಿದ್ದ ಗರ್ನಲ್ ನ ಕೆಲ ಉಂಡೆಗಳಂತಹವುಗಳನ್ನು ಹೊರತೆಗೆದು ಅಲ್ಲಿಂದ ದಡ್ಡನೆ ಕೆಳಗೆ ಹಾರಿದ.

ಕಟಪಟ ಸದ್ದು ಮಾಡುತ್ತಾ ಅದನ್ನೆಲ್ಲ ಕಿತ್ತು ಕೊಡವಿ ಪೇಪರ್‌ನಲ್ಲಿ ತುಂಬಿದ. ಅದನ್ನು ಮಡಚಿ ತಿರುಗಿಸಿ ಕಟ್ಟಿ ಏನೇನೋ ರಿಪೇರಿ ಮಾಡುತ್ತಿದ್ದ. ಆನಂತರ ಕೈಲಿದ್ದ ಬೆಂಕಿ ಕಡ್ಡಿ ಗೀರಿ ಅದಕ್ಕಿಟ್ಟ ಇನ್ನೇನು ಇಟ್ಟು ಕೈ ತೆಗೆಯುವಷ್ಟರಲ್ಲಿ ಜಾಸ್ತಿ ಸದ್ದಿಲ್ಲದೆ ಭಸ್ ಭಸ್ಸೆಂದು......ಮುಖಕ್ಕೆ ಸಿಡಿಯಿತು. ಕೈ ಮುಖ ಎಲ್ಲಾ ಕ್ಷಣ ಮಾತ್ರದಲ್ಲಿ ಸುಟ್ಟುಹೋಗಿತ್ತು ಅದೇ ಹೊತ್ತಿಗೆ ಗದ್ದೆಯಿಂದ ಮರಳಿದ ಅತ್ತೆ ಅವನನ್ನು ನೋಡಿ ಕ್ಷಣ ಬೆಪ್ಪಾಗಿ ನಿಂತರು. ಕ್ಷಣ ಎಚ್ಚೆತ್ತವರಂತೆ ಒಳ ನುಗ್ಗಿ ಜೇನುತುಪ್ಪ ತಂದು ಗಾಯಕ್ಕೆ ಸುರಿದರು. ಬಸಳೆ ಸೊಪ್ಪನ್ನು ಅರೆದು ಹಚ್ಚಿದರು .ಅಷ್ಟು ಹೊತ್ತಿಗೆ ಅವ್ವ ಅಪ್ಪ ಇಬ್ಬರೂ ಮನೆಗೆ ಬಂದರು ಇವನ ಅವಸ್ಥೆ ಕಂಡು ಅವ್ವ ಮಹಾ ಮಂಗಳಾರತಿ ಮಾಡಿದ್ದರು. ಅಣ್ಣನಿಗೆ ಸುಟ್ಟ ನೋವಿಗಿಂತ ಎಲ್ಲರಿಂದ ಬೈಸಿಕೊಳ್ಳುವ ಭಯವೇ ತುಂಬಿಹೋಗಿತ್ತು. ಅವನಿಂದ ಅದು ನೆರವೇರಲು ಅವನ ಗಮನ ಪೂರ್ತಿಯಾಗಿ ಗಾಯದತ್ತ ಹೊರಳಿತು.


ಅವ್ವ ಅಣ್ಣನಿಗಿಂತ ಹೆಚ್ಚು ಅಪ್ಪನಿಗೆ ಪೂಜೆ ಮಾಡಿದ್ದರು..ಪಟಾಕಿ ತಂದು ಅಪ್ಪ ಇಟ್ಟಿದ್ದು ಎಂದು ಭಾವಿಸಿದ್ದ ಅವ್ವ ಅಪ್ಪನಿಗೆ ಆದಷ್ಟು ಬೈದರು.ವಿಷಯ ತಿಳಿದ ಪಪ್ಪಾ ರಾತ್ರಿ ಹೊತ್ತಿಗೆ ಬಂದವರು ಒಂದು ಪ್ಯಾಕೆಟ್‌ನಲ್ಲಿ ಎಮ್ಮೆ ಸಗಣಿ ತಂದಿದ್ದರು. ಅವರಿಗೆ ಯಾರು ಹೇಳಿದ್ದಾರೋ ಏನೋ ಎಮ್ಮೆ ಸಗಣಿ ಹಚ್ಚಿದರೆ ಸುಡುವುದಿಲ್ಲ ಹಾಗೂ ಕಲೆ ಉಳಿಯುವುದಿಲ್ಲ ಎಂದು ಕಣ್ಣು ಬಾಯಿ ಮೂಗಿನ ತುದಿ ಬಿಟ್ಟು ಉಳಿದೆಲ್ಲ ಕಡೆ ಮೆಹೆಂದಿ ಹಚ್ಚಿದಂತೆ ಅದನ್ನು ಬಡಿದರು. ದಪ್ಪನೆಯ ಸಗಣಿಯನ್ನು

ಮೆತ್ತಿಕೊಂಡು ಪಿಳಿಪಿಳಿ ಕಣ್ಣು ಬಿಡುತ್ತಿದ್ದ ತರ್ಲೆ ಅಣ್ಣನನ್ನು ಕಂಡು ಅಂದು ಪಾಪ ಎನ್ನಿಸಿತ್ತು. ಆರಬಾರದು ಎಂದು ಮೇಲೆ ಮೇಲೆ ಸಗಣಿ ಹಚ್ಚುತ್ತಿದ್ದ ಪಪ್ಪನನ್ನು ದೂರದಿಂದ ನೋಡುತ್ತಿದ್ದ ನನಗಂತೂ ಪಿಚ್ಚೆನಿಸಿತು.

ಒರಸೆಯಲ್ಲಿ ದೊಡ್ಡಪ್ಪನಾಗಬೇಕಿದ್ದ ಅಣ್ಣನಿಗೂ ಪಪ್ಪಾ ಆಗಿದ್ದರು ಮೊದಲು, ನಂತರ ನಾನು, ಆನಂತರ ಆಂಟಿಯ, ಮಕ್ಕಳು, ಕೊನೆಗೆ ಊರಿಗೆ ಪಪ್ಪಾನಾಗಿ ಹೋಗಿದ್ದರು ಅವರ ಸಗಣಿ ಐಡಿಯಾ ನೋಡಿ ತಲೆ ತಿರುಗುವಂತೆ ಆಗಿತ್ತು ಆದರೆ ಅದು ನಿಜಕ್ಕೂ ಯಶಸ್ವಿಯಾಗಿತ್ತು. ಹೇಗೋ ಸುಟ್ಟಿದ್ದ ಗಾಯವಾಗಲಿ, ಕಲೆಯಾಗಲಿ ಉಳಿಯಲಿಲ್ಲ. ಅದೇ ದಿನ ಪಕ್ಕದ ಮನೆಯ ಹುಡುಗ ಕದ್ದು ಬೀಡಿ ಸೇದುವ ಪ್ರಯೋಗ ಮಾಡಲು ಹೋಗಿ ಹುಲ್ಲಿನ ಗೋಣಬೆಯ ಹಿಂದೆ ನಿಂತು ಕಡ್ಡಿಗೀರಿ ಗೋಣಬೇಗೆ ಬೆಂಕಿ ಕೊಟ್ಟು ಅವಾಂತರ ಎಬ್ಬಿಸಿದ್ದ. ಪಪ್ಪಾ ಅದನ್ನು ಕೇಳಿ ಆಗಾಗ ಹಚ್ಚುತ್ತಿರುವಂತೆ ಅವ್ವನಿಗೆ ಹೇಳಿ ಲಗು ಬಗೆಯಿಂದ ಓಡಿದ್ದರು. ಅಲ್ಲಿ ಬೆಂಕಿ ಕೊಟ್ಟಿದ್ದ ಬಾಲು ಪಪ್ಪನ ಬಾಯಿಂದ ಬೆಂಕಿ ಬಾಲು ಎಂದೇ ಪ್ರಸಿದ್ಧನಾಗಿದ್ದ.

ಬಾಲ್ಯ ಎಂದರೆ ಮಂದಹಾಸ, ಈಗ ನಗುವ ಕ್ಷಣ ಅಂದು ಪಟ್ಟ ಪಾಡು ಮೈ ನವಿರೇಳುತ್ತದೆ. ಈಗ ಬಂದವರೆಲ್ಲ ನೀನು ಜೋರು, ಅವನಿಗೆ ತದ್ವಿರುದ್ಧ, ಅವನು ನೋಡು ಎಷ್ಟು ಸೈಲೆಂಟ್ ಹುಡುಗ. ಎಂದು ಅವನನ್ನು ಹೊಗಳುವಾಗಲೆಲ್ಲ ಅವನನ್ನು ಇಷ್ಟಗಲ ಕಣ್ಣು ಬಿಟ್ಟು ನೋಡಿ ನಕ್ಕುಬಿಡುತ್ತೇನೆ. ಹೇಳಿದವರು 'ನೀನು ಬಿಡು ದೊಡ್ಡ ತರ್ಲೆ; ಬದಲಾಗುವುದಿಲ್ಲ' ಎಂದಾಗ ಅವರ ಮಂಕುತನಕ್ಕೆ ಮರುಗಬೇಕೆನಿಸುತ್ತದೆ. ■

**ನೀರಿರುವ ಹೊಸ ಗ್ರಹ ಪತ್ತೆಹಚ್ಚಿದ ನಾಸಾ** ಸುದ್ದಿ



**ದಂನಆ**

- ✓ ನಿಮಗೆ ಘಾಸಿಯಾಗಿದ್ದನ್ನು ಮರೆತುಬಿಡಿ, ಆದರೆ ಅದು ಏನನ್ನು ಕಲಿಸಿತು ಎಂಬುದನ್ನು ಮರೆಯದಿರಿ.
- ✓ ನಿಮ್ಮೊಂದಿಗೆ ಯಾರಾದರೂ ಒರಟಾಗಿ ನಡೆದುಕೊಂಡಿದ್ದರೆ ಅದು ನಿಮ್ಮ ನಡವಳಿಕೆಯನ್ನು ತೋರಿಸುವುದಿಲ್ಲ, ಬದಲಿಗೆ ಅವರ ನಡವಳಿಕೆಯನ್ನು ತೋರಿಸುತ್ತದೆ.
- ✓ ಇನ್ ಸೈಡ್ ಎವೆರಿ ಸೂಟ್ ದೇರ್ ಈಸ್ ಎ ಗೈ ಇನ್ ಎ ಟೀ ಶರ್ಟ್ ವಾಂಟಿಂಗ್ ಟು ಗೆಟ್ ಔಟ್.
- ✓ ಕೊಂಬೆಯ ಮೇಲೆ ಕುಳಿತ ಪಕ್ಷಿಗೆ ಅದು ಮುರಿಯುವ ಬಗ್ಗೆ ಹೆದರಿಕೆ ಇರದು. ಏಕೆಂದರೆ ಅದು ಕೊಂಬೆಗಿಂತ ತನ್ನ ರೆಕ್ಕೆಗಳ ಮೇಲೆ ಹೆಚ್ಚು ವಿಶ್ವಾಸ ಇರಿಸಿಕೊಂಡಿರುತ್ತದೆ.
- ✓ ಹ್ಯಾಪಿನೆಸ್ ಈಸ್ ಎ ಮಿಸ್ಟೀರಿಯಸ್ ಥಿಂಗ್ ಫೌಂಡ್ ಬಿಟ್ವೀನ್ ಟೂ ಲಿಟಲ್ ಅಂಡ್ ಟೂ ಮಚ್.
- ✓ ನೀವು ಮಾಡಬೇಕಾಗಿರುವ ಕೆಲಸವನ್ನು ಅದನ್ನು ಮಾಡಲು ಇಷ್ಟಪಡುತ್ತಿರುವವನಿಂದ ಮಾಡಿಸುವುದೇ ನಾಯಕತ್ವದ ಲಕ್ಷಣ.
- ✓ ಯು ಕೆನ್ ಬಿ ಎ ಗುಡ್ ನೈಬರ್ ಓನ್ಲಿ ಇಫ್ ಯು ಹ್ಯಾವ್ ಗುಡ್ ನೈಬರ್ಸ್.
- ✓ ನಿಮಗೆ ಕಾಲಕಾಲಕ್ಕೆ ಊಟ ಸಿಗುತ್ತಿದ್ದರೆ ನೀವು ಅದೃಷ್ಟವಂತರು, ಅದನ್ನು ಅರಗಿಸಿಕೊಳ್ಳಲು ಸಾಧ್ಯವಾಗುತ್ತಿದ್ದರೆ ಇನ್ನಷ್ಟು ಅದೃಷ್ಟವಂತರು.
- ✓ ಅಸ್ ಫಾರ್ ಬೀಯಿಂಗ್ ಸೌಂಡ್ ಅಸ್ಲೀಪ್ ಐ ವಿಶ್ ಐ ಕುಡ್ ಸ್ವಿಚ್ ಯುವರ್ ಸೌಂಡ್ ಆಫ್..
- ✓ ರಸ್ತೆಗಳಿಗೆ ವೇಗಮಿತಿ ಇರುತ್ತದೆ, ಬ್ಯಾಂಕ್‌ಗಳಲ್ಲಿ ನಗದುಮಿತಿ ಇರುತ್ತದೆ, ಪರೀಕ್ಷೆಗಳಲ್ಲಿ ಸಮಯದ ಮಿತಿ ಇರುತ್ತದೆ. ಆದರೆ ಯೋಚಿಸಲು ಯಾವುದೇ ಮಿತಿ ಇಲ್ಲ. ಆದುದರಿಂದ ಗಹನವಾಗಿ ಯೋಚಿಸಿ ದೊಡ್ಡದನ್ನು ಸಾಧಿಸಿ.
- ✓ ದಿ ಬ್ಯುಸಿನೆಸ್ ಆಫ್ ಬೀಯಿಂಗ್ ಫನ್ನಿ ಈಸ್ ನೊ ಲಾಫಿಂಗ್ ಮ್ಯಾಟರ್.
- ✓ ನಾವು ಪುಸ್ತಕಗಳಂತೆ. ಬಹುಮಂದಿ ರಕ್ಷಾಪುಟವನ್ನು ಮಾತ್ರ ನೋಡುತ್ತಾರೆ, ಕೆಲವರು ಪರಿಚಯವನ್ನಷ್ಟೇ ಓದುತ್ತಾರೆ, ಇನ್ನು ಕೆಲವರು ವಿಮರ್ಶೆಯನ್ನು ನಂಬುತ್ತಾರೆ. ಒಳ ಅಂಶಗಳನ್ನು ಓದುವವರು ವಿರಳ.
- ✓ ಬಿ ದಿ ಒನ್ ರ್‍ಯಾದರ್ ದ್ಯಾನ್ ಜಸ್ಟ್ ಎನಿಒನ್.
- ✓ ಮನುಷ್ಯನ ಸ್ವಭಾವವೇ ಹಾಗೆ ತಪ್ಪು ತಮ್ಮದಾದರೆ ವಕೀಲರಾಗುತ್ತಾರೆ. ಬೇರೆಯವರದಾದರೆ ನ್ಯಾಯಾಧೀಶರಾಗುತ್ತಾರೆ.
- ✓ ಎಷ್ಟು ಓದಿದರೆ ಏನು? ರಸ್ತೆಯಲ್ಲಿ ಎಮ್ಮೆ ಅಡ್ಡಬಂದರೆ 'ಹೇಯ್ ಹೇಯ್' ಅನ್ನಬೇಕೇ ಹೊರತು 'ಎಕ್ಸ್‌ಕ್ಯೂಸ್ ಮಿ' ಎಂದರೆ ಅದು ದಾರಿ ಬಿಡದು. ■

# ಪವಮಾನ ಪಂಡಿತರ ಪ್ರಣಯ ಪ್ರಸಂಗ

ಪಾಲಹಳ್ಳಿ ವಿಶ್ವನಾಥ್

ನಮ್ಮ ಇಂಗ್ಲಿಷ್ ಟೀಚರ್ ಸುಕುಮಾರ ಅವರ ಸೋದರ ಮಾವ ಪವಮಾನ ಪಂಡಿತರು ತಯಾರಿಸಿದ್ದ ಸಂಜೀವಿನಿಯನ್ನು ಕುಡಿದು ತನ್ನ ಜೀವನವನ್ನೇ ಬದಲಾಯಿಸಿಕೊಂಡಿದ್ದು ನಿಮಗೆ ತಿಳಿದಿರಬಹುದು (ಇಲ್ಲದಿದ್ದಲ್ಲಿ ಅಪರಂಜಿ ಜುಲೈ 2017ರ ಸಂಚಿಕೆಯನ್ನು ಓದಿ– ಸುಕುಮಾರನ ಸಂಜೀವಿನಿ), ಈಗೇನೋ ಪವಮಾನ ಪಂಡಿತರು ಊರಿನ ಖ್ಯಾತ ಆಯುರ್ವೇದ ವೈದ್ಯರು. ನಾಡಿನ ಗಣ್ಯ ವ್ಯಕ್ತಿಗಳಲ್ಲಿ ಬಹಳಷ್ಟು ಮಂದಿ ಅವರ ಬಳಿ ಬಂದು ಹೋಗುತ್ತಿದ್ದರು. ಆದರೂ ಒಂದು ಕಾಲದಲ್ಲಿ ಅವರೂ ಚಿಕ್ಕವರಾಗಿದ್ದರಲ್ಲವೆ? ಅವರಿಗೂ ಪ್ರೇಮ ಪ್ರಸಂಗಗಳು ಇದ್ದವು ಎಂದರೆ ಸುಕುಮಾರನಂತಹ ಇಂದಿನ ಯುವಕರು ನಂಬುವುದಿಲ್ಲ. ಆದರೆ ಅದು ನಿಜವಾಗಿತ್ತು!

ಪವಮಾನನ (ಅವರ ಯೌವನದ ಬಗ್ಗೆ ಬರೆಯುತ್ತಿರುವುದರಿಂದ ಬಹುವಚನ ಬೇಕಿಲ್ಲ ಅಲ್ಲವೆ) ರಕ್ತದಲ್ಲಿ ತಂದೆಯ ಕಡೆಯಿಂದ ವೈದ್ಯಕೀಯ ಆಸಕ್ತಿ ಮತ್ತು ತಾಯಿಯ ಕಡೆಯಿಂದ ರಸಾಯನ ವಿಜ್ಞಾನದ ಆಸಕ್ತಿ ಸೇರಿತ್ತು. ಕಾಲೇಜಿನಲ್ಲಿ ಅವನ ಕೆಮಿಸ್ಟ್ರಿ ಪ್ರೊಫೆಸರು ದೇಶಿಕಾಚಾರ್ಯರು ಅವನನ್ನು 'ನೀನು ಆಧುನಿಕ ಆಲ್ಕೆಮಿಸ್ಟ್ ಕಣೋ' ಎಂದು ಮೆಚ್ಚುಗೆ ಸೂಸಿದ್ದರು. ಇವನಂಥವರು ಆಗ ಇದ್ದಿದ್ದರೆ ಆಗಲೇ ಸೀಸವನ್ನು ಚಿನ್ನಕ್ಕೆ ಪರಿವರ್ತಿಸುತ್ತಿದ್ದರೋ ಏನೋ ಎಂದು ಅವನ ಬೆನ್ನು ತಟ್ಟುತ್ತಿದ್ದರು. ಯಾವಾಗಲೂ ಆಮ್ಲಜನಕ, ಜಲಜನಕ, ಸಾರಜನಕ ಎಂದು ಅವನು ಮಾತಾಡುತ್ತಿದ್ದರಿಂದ ಅವನ ಜೊತೆಯ ಹುಡುಗರು ಅವನನ್ನು ಜನಕ ಎಂದು ಕರೆಯುತ್ತಿದ್ದು ಅದೇ ಹೆಸರು ಅವನಿಗೆ ಅಂಟುಕೊಂಡುಬಿಟಿತ್ತು. ಅವನು ಕೆಮಿಸ್ಟ್ರಿಯಲ್ಲೇ ಮುಂದುವರೆದಿದ್ದರೆ ನೊಬೆಲ್ ಪ್ರಶಸ್ತಿಗಳಿಸುತ್ತಿದ್ದ ಎಂದು ಅವನ ಜೊತೆಯ ಗೆಳೆಯರು ಈಗಲೂ ನೆನೆಸಿಕೊಳ್ಳುತ್ತಾರೆ.

ಬುದ್ಧಿವಂತ ಹುಡುಗನಾಗಿದ್ದರಿಂದ ಅನೇಕರು ಪವಮಾನನ ಬಳಿ ಬಂದು ಅನೇಕ ವಿಷಯಗಳ ಬಗ್ಗೆ ಅವರ ಅನುಮಾನಗಳನ್ನೆಲ್ಲಾ ಪರಿಹರಿಸಿಕೊಳ್ಳುತ್ತಿದ್ದರು. ಅನುಮಾನಗಳು ಇದ್ದವರಲ್ಲಿ ಸಾಕಷ್ಟು ಹುಡುಗಿಯರೂ ಇದ್ದರು. ಅಂತೂ ಪವಮಾನ ಕಾಲೇಜಿನಲ್ಲಿ ಬಹಳ ಜನಪ್ರಿಯನಾಗಿದ್ದ ಯುವಕ. ಒಂದು ದಿನ ಅದೇ ತರಗತಿಯಲ್ಲಿದ್ದ ಒಬ್ಬ ಹುಡುಗಿ ಬಂದು "ರೀ ಜನಕ ! ನನಗೆ ಈ ಮಿಥೇನಿಗೂ, ಆ ಎಥಿಲೇನಿಗೂ ವ್ಯತ್ಯಾಸ ಗೊತ್ತಾಗ್ತಿಲ್ಲ. ಹೆಲ್ಪ್‌ಮಾಡ್ತೀರ" ಎಂದು ಕೇಳಿದಳು. ಸರಿ ಎಂದ ಪವಮಾನ ಅವಳ ಹೆಸರು ಗೊತ್ತಿದ್ದರೂ 'ನಿಮ್ಮ ಹೆಸರೇನು' ಎಂದು ಕೇಳಿದ. ಆಕೆ 'ಕಮಲ' ಎಂದು ಹೇಳಿದಳು. ಒಂದು ವಾರದ ನಂತರ ಇಥೇನಿಗೂ ಎಥಿಲೇನಿಗೂ ವ್ಯತ್ಯಾಸ ಹೇಳಿಕೊಟ್ಟನು. ಹೀಗೇ ಅವಳ ಅನುಮಾನಗಳನ್ನೆಲ್ಲ ಬಗೆ ಹರಿಸುತ್ತ ಬಂದು ಇಥೇನ್, ಮಿಥೇನ್, ಬೇನಜೀನ್‌ಗಳ ಮಧ್ಯೆ ಅವರ ಪ್ರೇಮವೂ ಪ್ರಾರಂಭವಾಯಿತು.

ಕಾಲೇಜಿನ ನಂತರ ಮನೆತನದ ವೃತ್ತಿಯನ್ನೇ ಆರಿಸಿಕೊಂಡು ಪವಮಾನ ಆಯುರ್ವೇದ ವೈದ್ಯನಾದ. ಆದರೆ ಬರೇ ಹಳೆಯ ಔಷಧಿಗಳಿಗೆ ಸೀಮಿತನಾಗದೆ ತನ್ನ ರಸಾಯನ ಶಾಸ್ತ್ರದ ಜ್ಞಾನವನ್ನೂ ಬಳಸಿಕೊಂಡು ಹೊಸ ಹೊಸ ಔಷಧಿಗಳನ್ನು ಕಂಡುಹಿಡಿಯಲೂ ಶುರು ಮಾಡಿದ. ಅವನ ಮತ್ತು ಕಮಲರ ಪ್ರೇಮ ಮುಂದುವರೆಯುತ್ತಲೇ ಇತ್ತು. ಕಮಲ ಶ್ರೀಮಂತರ ಮನೆಯ ತಂದೆ ತಾಯಿ

ಇಲ್ಲದ ಹುಡುಗಿ. ಹಣದ ವಹಿವಾಟೆಲ್ಲವನ್ನು ಅವಳ ಚಿಕ್ಕಪ್ಪ ಭೀಮರಾಯರು ನೋಡಿಕೊಳ್ಳುತ್ತಿದ್ದರು. ಅವರ ಹೆಸರಿನ ತರಹವೇ ಭೀಮರಾಯರಿಗೆ ದೊಡ್ಡ ದೇಹ. ಬಹಳ ಆಹಾರಪ್ರಿಯರು ಕೂಡ. ಅದರಿಂದಲೇ ಏನೋ ದೊಡ್ಡ ಹೊಟ್ಟೆಯನ್ನೂ ಗಳಿಸಿದ್ದರು. ನಮ್ಮ ಮಹಾಭಾರತದ ಭೀಮನಿಗೇ ಅಷ್ಟು ದೊಡ್ಡ ಉದರವಿದ್ದಿದ್ದರೆ ಗದಾಯುದ್ಧದ ಪರಿಣಾಮ ಹೇಗಾಗುತ್ತಿತ್ತೋ ಏನೊ! ಅದಿರಲಿ, ಕಮಲ ಪವಮಾನನ ಜೊತೆ ಓಡಾಡುತ್ತಿರುವುದನ್ನು ಭೀಮರಾಯರು ಗಮನಿಸಿದ್ದು ಅವಳಿಗೆ ಎಚ್ಚರಿಕೆಯನ್ನೂ ಕೊಟ್ಟಿದ್ದರು: "ನೋಡಮ್ಮ, ನಿನ್ನ ಹತ್ತಿರ ಹಣ ಇದೆ ಅಂತ ಹುಡುಗರು ಹಿಂದೆ ಬರ್ತಾರೆ. ಹುಷಾರಾಗಿರಬೇಕು . ಅದೂ ಆ ಅಳಲೇಕಾಯಿ ಪಂಡಿತನ ಹತ್ತಿರ ಇನ್ನೂ ಜೋಪಾನ". ಭೀಮರಾಯರ ಈ ಧೋರಣೆಯಿಂದ ಜೀವನದಲ್ಲಿ ಕಮಲ ಮತ್ತು ಪವಮಾನರ ಪಥಗಳು ಒಟ್ಟಿಗೆ ಸೇರುವುದು ಅಸಾಧ್ಯವಿದ್ದ ಹಾಗೆ ತೋರುತಿತ್ತು.

ಒಂದು ದಿನ ಕಮಲ ಪವಮಾನನಿಗೆ 'ಏ ಜನಕ! ನನಗೆ ತಲೆಕೂದಲೇ ಸರಿಯಾಗಿ ಬೆಳೆಯುತ್ತಿಲ್ಲವಲ್ಲೋ' ಎಂದು ಬೇಸರದಿಂದ ಹೇಳಿದಳು. "ನೀನು ಮೊದಲೇ ಹೇಳಬೇಕಾಗಿತ್ತು. 5–6 ತಿಂಗಳುಗಳ ಹಿಂದೆ ನಾನು ಒಂದು ಔಷಧೀನ ಕಂಡುಹಿಡಿದಿದ್ದೀನಿ, ಅದನ್ನು ಹಾಕಿಕೊಂಡರೆ ಕೂದಲು ಸೊಂಪಾಗಿ ಬೆಳೆಯುತ್ತೆ. ನಮ್ಮ ಕಾಲೇಜಿನಲ್ಲಿ ಒಬ್ಬರು ಮೇಷ್ಟ್ರು ಇದ್ದರು. ರಂಗಯ್ಯ ಅಂತ.. ನೆನಪಿದೆಯಲ್ಲ. ಅವರತಲೆ ಬೋಡಲ್ವಾ? ಅವರನ್ನ ಕೇಳಿದೆ. ಸಾರ್, ನಿಮ್ಮ ಮೇಲೆ ಒಂದು ಪ್ರಯೋಗ ಮಾಡಬಹುದಾಂತ. ಅವರು ಒಪ್ಪಿದರು. ಈ ಹೊಸ ಔಷಧಿ ಒಂದು ಬಾಟಲು ಕೊಟ್ಟೆ ! ಒಂದು ತಿಂಗಳಾದ ಮೇಲೆ ಯಾರೋ ಬೆಳಿಗ್ಗೆ ಬೆಳಿಗ್ಗೇನೆ ಮನೆಗೆ ಬಂದರು. ತಕ್ಷಣ ಗೊತ್ತಾಗಲಿಲ್ಲ. ಅವರೇ 'ನಾನು ಕಣೋ ಜನಕ! ರಂಗಯ್ಯ' ನೋಡಿದರೆ ತಲೇಲೆ ಸೊಂಪಾದ ಕೂದಲು! ಅದೂ ಕರಿ ಕೂದಲು. ಅವರಿಗೆ ಖುಷಿಯೇ ಖುಷಿ. ನನಗೂ ಪ್ರಯೋಗ ಸಫಲವಾಯ್ತಲ್ಲಾ ಅಂತ ಸಂತೋಷ" ಎಂದ. ಅದಕ್ಕೆ ಕಮಲ'ಹೌದು, ನನಗೂ ಸಿಕ್ಕಿದ್ದರು. ಗುರುತೇ ಸಿಗಲಿಲ್ಲ ಎಲ್ಲ ಆ ಜನಕನ ಪ್ರಭಾವ ಮಗೂ 'ಎಂದರು. 'ಹಾಗಾದರೆ ಅದನ್ನ ನಿನಗೆ ಕೊಡಲೇ'ಎಂದು ಕಮಲಳನ್ನು ಜನಕ ಕೇಳಿದ. 'ಕೊಡು, ಕೊಡು' ಎಂದು ಎರಡು ಬಾಟಲು ತೆಗೆದುಕೊಂಡಳು;

ಪ್ರಮುಖ ಆಯುರ್ವೇದ ಕೇಂದ್ರಗಳನ್ನೆಲ್ಲ ನೋಡಿಕೊಂಡು ಬರಲು ದೇಶದ ಹಲವಾರು ಊರುಗಳಿಗೆ ಭೇಟಿ ಕೊಟ್ಟ ಪವಮಾನ ಒಂದು ತಿಂಗಳ ನಂತರ ವಾಪಸ್ಸು ಊರಿಗೆ ಬಂದ ದಿನವೇ ಕಮಲಳ ಮನೆಗೆ ಹೋದ. ಭೀಮರಾಯರು ವರಾಂಡಾದಲ್ಲಿಯೇ ಕುಳಿತಿದ್ದರು. ಅವನನ್ನು 'ಏನು ಅಳಲೇಕಾಯಿ ಪಂಡಿತರು ಬಂದಿರುವುದೇ' ಎಂದು ಕೋಪದಲ್ಲೇ ಕೇಳಿದರು.

"ಸಾರ್! ಅಳಲೇಕಾಯಿ ಪಂಡಿತ ಎಂದು ಮೂದಲಿಸಬೇಡಿ. ನೀವು ಚರಕ, ಶುಶ್ರುತರ ಹೆಸರು ಕೇಳಿದ್ದೀರಾ? ಆಯುರ್ವೇದಕ್ಕೆ ನಮ್ಮ ದೇಶದಲ್ಲಿ ಅಮೋಘ ಚರಿತ್ರೆಯೇ ಇದೆ. ಅದಿರಲಿ, ಕೆಲಸದ ಮೇಲೆ ಹೋಗಿದ್ದೆ. ಊರಲ್ಲಿರಲಿಲ್ಲ. ನಿಮ್ಮನ್ನೆಲ್ಲಾ ನೋಡಿಕೊಂಡು ಹೋಗೋಣ ಅಂತ ಬಂದೇ ಎಂದ.

'ನೋಡಿ ಆಯಿತಲ್ಲವೇ? ಹೋಗಿಬನ್ನಿ'

'ಅವರಿಗೆ ನನ್ನನ್ನು ಕಂಡರೆ ಮೊದಲಿಂದಲೂ ಆಗುವುದಿಲ್ಲ. ಆದರೆ ಏಕೆ

ಇಷ್ಟು ವ್ಯಂಗ್ಯ 'ಎಂದುಕೊಂಡ ಪವಮಾನ' ಕಮಲನ್ನು ನೋಡಬೇಕಲ್ಲ' ಎಂದು ನಿಜ ಕಾರಣವನ್ನು ಹೇಳಿದ. ತಕ್ಷಣವೇ ಭೀಮರಾಯರು ಎದ್ದು ಅವನ ಮುಂದೆ ಬಂದು ನಿಂತರು, ಪವಮಾನನೂ ದೃಢಕಾಯನೇ ಆದರೂ ಅವರಿಗೆ ಸರಿಸಮನಿರಲಿಲ್ಲ. ಅದಲ್ಲದೆ ಅವರು ನಿಂತ ಭಂಗಿ ಅವನನ್ನು ಸ್ವಲ್ಪ ಹೆದರಿಸಿತು. 'ಕಮಲಳಿಗೆ ಯಾರನ್ನು ನೋಡಲೂ ಇಷ್ಟವಿಲ್ಲ. ನಿನ್ನನ್ನಂತೂ ಇಲ್ಲವೇ ಇಲ್ಲ. ನಿನಗೆ ಒಂದು ಚೀಟಿ ಕೊಡಲು ಹೇಳಿದ್ದಳು, ತೊಗೊ' 'ಎಂದು ಅವನನ್ನು ಹೊರ ತಳ್ಳಿದರು.' 'ನಮ್ಮಿಬ್ಬರ ಸ್ನೇಹ ಮುಗಿಯಿತು. ನನ್ನನ್ನು ನೋಡಲು ಪ್ರಯತ್ನ ಮಾಡಬೇಡ' ಎಂದು ಬರೆದಿತ್ತು ಆ ಚೀಟಿಯಲ್ಲಿ!

ಕಮಲಳಿಗೆ ಏನಾಯಿತು ಎಂದು ಪವಮಾನನಿಗೆ ತಿಳಿಯಲಿಲ್ಲ. ಅಷ್ಟು ವರ್ಷಗಳ ಸಂಬಂಧ ಹೀಗೆ ಕೊನೆಗಾಣುವುದು ಅವನಿಗೆ ತಡೆಯಲಾಗಲಿಲ್ಲ. ಇಂತಹ ಸಂದರ್ಭದಲ್ಲಿ ಇತಿಹಾಸದ ಖ್ಯಾತ ಪ್ರೇಮಿಗಳು ಏನು ಮಾಡಿದರು ಎಂದು ಅವನು ಯೋಚಿಸಿದ. ರೋಮಿಯೊ-ಜೂಲಿಯಟ್? ಇಲ್ಲ, ಆ ತರಹ ಅಗಲು ಬಿಡುವುದಿಲ್ಲ ಎಂದುಕೊಂಡ. ಲೈಲಾಮಜನು ಹೆಸರು ಕೇಳಿದ್ದನೇ ಹೊರತು ಅವರ ಬಗ್ಗೆ ಬೇರೆ ಏನೂ ಗೊತ್ತಿರಲಿಲ್ಲ. ದೇವದಾಸ-ಪಾರ್ವತಿ? ವೈದ್ಯನಾಗಿದ್ದುಕೊಂಡು ನಾನು ಅವನ ತರಹ ಮದ್ಯದ ಮೊರೆ ಹೋಗುವುದೇ? ಇಲ್ಲ, ಇಲ್ಲ ಎಂದುಕೊಂಡ. ನಮ್ಮ ಪ್ರೇಮ ಆ ರೀತಿ ಕೊನೆಯಾಗಲು ಬಿಡುವುದಿಲ್ಲ ಎಂದು ನಿರ್ಧರಿಸಿ ಮತ್ತೆ ಕಮಲಳ ಮನೆಯ ಕಡೆ ಹೋದ ಹಲವಾರು ಬಾರಿ ಹೋದರೂ ಮನೆಯ ಮುಂದೆಯೇ ಭೀಮರಾಯರು ಕುರ್ಚಿ ಹಾಕಿಕೊಂಡು ಕುಳಿತಿರುತ್ತಿದ್ದುದನ್ನು ನೋಡಿ ವಾಪಸ್ಸು ಬರುತ್ತಿದ್ದ. ಆದರೆ ಒಂದು ದಿನ ಅವರಿರಲಿಲ್ಲ; ಒಳಗೆ ಹೋದಾಗ ಕೆಲಸದವನೊಬ್ಬ ಅವರು ಕೆಂಗೇರಿಯ ತೋಟದ ಮನೆಗೆ ಹೋಗಿದ್ದಾರೆಂದು ಹೇಳಿದ.

ಬಹಳ ಹಿಂದೆಯೇ ಕಮಲಳ ತಂದೆ ತಾಯಿ ಊರಿನಿಂದ ಹೊರಗಿರಲಿ ಎಂದು ಕೆಂಗೇರಿಯಲ್ಲಿ ಒಂದು ತೋಟದ ಮನೆ ಮಾಡಿದ್ದು ಕಮಲ ಅವನನ್ನು ಒಂದು ಸಲ ಅಲ್ಲಿಗೆ ಕರೆದುಕೊಂಡು ಹೋಗಿದ್ದಳು ಕೂಡ. ಈಗ ಅದು ಊರಿನೊಳಗೇ ಸೇರಿಹೊಗಿತ್ತು. ಭೀಮರಾಯರಿಗೆ ತಿಳಿಯಬಾರದೆಂದು ಅವರು ಇರದ ದಿನವನ್ನು ಪತ್ತೆ ಹಚ್ಚಿ ಕೆಂಗೇರಿಗೆ ಹೋದ. ಮಾವಿನ ತೋಪಿನ ದೊಡ್ಡ ಮನೆ, ಹಲವಾರು ಕೋಣೆಗಳು. ಬಹಳ ಮರಗಳಿದ್ದು ಕೆಲವು ಕೋಣೆಗಳಲ್ಲಿ ಬೆಳಕೇ ಇರಲಿಲ್ಲ. ಕಮಲ ಎಂದು ಕೂಗಲು ಶುರು ಮಾಡಿದ.. ಆಗ ಒಂದು ಕೋಣೆಯಿಂದ 'ಜನಕಾ. ಇಲ್ಲಿ ಏಕೆ ಬಂದೆ? ಬೇಡಎಂದು ಹೇಳಿರಲಿಲ್ಲವೇ?' ಎಂದು ಕೇಳಿಸಿತು.

'ಅಂತಹ ತಪ್ಪು ನಾನು ಏನು ಮಾಡಿದೆ' ಎಂದು ಪವಮಾನ ಕೇಳಿದ್ದಕ್ಕೆ

'ನಿನ್ನ ಆ ಔಷಧಿ ನನ್ನನ್ನು ಹಾಳುಮಾಡಿದೆ.'

'ಏಕೆ? ಕೂದಲು ಸೊಂಪಾಗಿ ಬೆಳೆಯಲಿಲ್ಲವೇ?'

'ಚೆನ್ನಾಗಿಯೇ ಬೆಳೆಯಿತು. ಎಲ್ಲೆಲ್ಲೂ! ನನ್ನ ತಲೆಯ ಮೇಲೆ ಮಾತ್ರವಲ್ಲ, ದೇಹದಲ್ಲಿ ಎಲ್ಲೆಲ್ಲೂ. ಕೂದಲು. ಮುಖದ ಮೇಲೆಲ್ಲಾ ಕೂದಲು.'

'ಒಳಬಂದು ನೋಡಲಾ?'

'ಇಲ್ಲ, ಕರಡಿಯ ತರಹ ಆಗಿಬಿಟ್ಟಿದ್ದೇನೆ'

ಅದನ್ನು ಕೇಳಿ ಪವಮಾನ 'ಎಲ್ಲೋ ಎಡವಟ್ಟಾಗಿದೆ. ನೀನು ಬರೇ ತಲೆಗೆ

ಹಚ್ಚಿಕೊಳ್ಳಬೇಕಿತ್ತು.'

'ಎಣ್ಣೆ ಅಲ್ಲಿ ಇಲ್ಲಿ ತಾಕಿರಬೇಕು.'

'ಹೇಗೋ ಆಯಿತು ! ಈಗ ಏನು ಮಾಡ್ತೀಯ ಹೇಳು.'

'ಅಷ್ಟು ಯೋಚನೆ ಮಾಡಬೇಡ. ನಮ್ಮ ಸಂಶೋಧನೆಗಳಲ್ಲಿ ನಾವು ಜಾಗರೂಕರಾಗಿರುತ್ತೇವೆ. ಕೂದಲು ಬೆಳೆಯಲು ಔಷಧಿ ಮಾಡುವವರು ಕೂದಲು ಉದುರಲೂ ಔಷಧಿ ಮಾಡಿರುತ್ತೇವೆ.'

'ಅಂದರೆ ನಾನು ಜೀವನ ಪೂರ್ತಿ ಹೀಗಿರಬೇಕಿಲ್ಲ ಅಲ್ಲವೇ' ಎಂದು ಕಮಲ ಕೇಳಿದಳು.

'ಇಲ್ಲವೇ ಇಲ್ಲ. ನಾನು ಮನೆಗೆ ಹೋಗಿ ಆ ಇನ್ನೊಂದು ಔಷಧಿಯನ್ನು ಕಳಿಸುತ್ತೇನೆ. ಒಂದೇ ವಾರದಲ್ಲಿ ನೀನು ಸರಿಯಾಗಿಹೋಗುತ್ತೀಯ'. ಹೀಗೆ ಹೇಳಿ ಪವಮಾನ ಹೊರಗೆ ಬರುವ ಹೊತ್ತಿಗ ಬೀಮರಾಯರು ಒಳಗೆ ಬರುತ್ತಿದ್ದರು. ಅವನನ್ನು ನೋಡಿ ಬಹಳ ಕೋಪ ಬಂದಿತು. ಆಗ ಪವಮಾನ ಎಲ್ಲವನ್ನೂ ವಿವರಿಸಿದ. ಅದರಿಂದ ತೃಪ್ತಿಯಾಗದ ಭೀಮರಾಯರು 'ಸರಿ ! ನಿನ್ನ ಔಷಧಿಗಳ ಪರಿಣಾಮ ನೋಡೋಣ. ನನ್ನ ಈ ಬೊಜ್ಜನ್ನು (ಭೀಮರಾಯರು ಸ್ವಲ್ಪ ಕಷ್ಟಪಟ್ಟೇ ಆ ಬೊಜ್ಜು ಎಂಬ ಪದವನ್ನು ಉಚ್ಚರಿಸಿದ್ದರು) ಹೋಗಿಸ್ತೀಯ?' ಏನೂ ಯೋಚನೆ ಮಾಡಬೇಡಿ ಸಾರ್, ನಿಮಗೂ ಒಂದು ಔಷಧ ಕಳಿಸಿಕೊಡ್ತೀನಿ. ಒಂದು ತಿಂಗಳು ತೊಗೊಳ್ಳಿ. ನೋಡಿ ಹೇಗೆ ಆಗಿರ್ತೀರ' ಎಂದು ಹೇಳಿದ ಪವಮಾನ. "ಇದು ಪರೀಕ್ಷೆನಯ್ಯಾ ನಿನಗೆ ! ಕಮಲ ಮತ್ತು ನಾನು ವಾಪಸ್ಸು ಸರಿಯಾಗಿ ಆಗಿಬಿಟ್ಟರೆ ನಿಮ್ಮಿಬ್ಬರ ಮದುವೆಗೆ ನನ್ನ ಅಭ್ಯಂತರ ಏನೂ ಇಲ್ಲ."

ಭರತ ಮುನಿಗಳು ನಾಟಕಗಳು ದುಃಖಾಂತವಿರಬಾರದು ಎಂಬ ನಿಯಮ ಮಾಡಿದ್ದರಂತೆ. ಹಾಗೆಯೇ ಈ ಪ್ರಸಂಗಗಳು ಕೂಡ! ಎಂದೂ ದುಃಖಾಂತ–ವಾಗುವುದಿಲ್ಲ ಎಂದು ನಿಮಗೂ ಗೊತ್ತು. ಹೌದು, ಭೀಮರಾಯರ ಬೊಜ್ಜು ಕರಗಿತು, ಕಮಲಳ ಕರಡಿತನ ಹೋಯಿತು, ಮತ್ತು ಅವಳ ವಿವಾಹ ಪವಮಾನ ಪಂಡಿತರೊಡನೆ ನಡೆದೇಹೋಯಿತು ಎಂದು ಲೇಖಕರೇನೂ ಹೇಳಬೇಕಿಲ್ಲ ಅಲ್ಲವೆ? ಮತ್ತೊಂದು ವಿಷಯ; ಪಂಡಿತರ ಬಳಿ ಏನಾದರೂ ಔಷಧಕ್ಕೆ ಹೋದರೆ, ಬಾಯಿ ತಪ್ಪಿ ಕೂಡ ಜನಕ ಎಂದು ಹೇಳಬೇಡಿ. ಆ ಸ್ವಾತಂತ್ರ್ಯ ಇರುವುದು ಅವರ ಪತ್ನಿ ಕಮಲರಿಗೆ ಮಾತ್ರ.

(ಪಿ.ಜಿ.ವುಡ್ ಹೌಸರ ಮಲಿನರ್ ಕಥೆಯೊಂದರ ರೂಪಾಂತರ)

■

ಪುಟ್ಟು ಕೃಷ್ಣ: ತಾತ, ನಮಗೆ ಮೈಸೂರು ಹತ್ತಿರಾನೋ ಅಥವಾ ಸೂರ್ಯ ಹತ್ತಿರಾನೋ...

ತಾತ: ಯಾಕೋ ಪುಟ್ಟ, ಮೈಸೂರಲ್ವೇನೊ ಹತ್ತಿರ, ಸೂರ್ಯ ಕೋಟ್ಯಾಂತರ ಮೈಲು ದೂರದಲ್ಲಿದ್ದಾನೆ.

ಪುಟ್ಟು ಕೃಷ್ಣ : ಆದರೆ, ನಮಗೆ ಹತ್ತಿರದ ಮೈಸೂರು ಕಾಣೋದಿಲ್ಲ, ಆದರೆ, ದೂರದಲ್ಲಿರುವ ಸೂರ್ಯ ಕಾಣಿಸುವುದಲ್ಲ ಎಂದಾಗ.....

ತಾತ: ನಿರುತ್ತರ......! –ವಿ.ವಿ.ರಾವ್

# ದೈವೀಕವೂ, ಅರಸೊತ್ತಿಗೆಯೂ, .ಆದರೆ ಹಾರಲಾರವು

ಎಸ್. ನರೇಂದ್ರ

ಕಳೆದ ವರ್ಷವಷ್ಟೇ ಮದುವೆಯಾದ ನನ್ನ ಮಗ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ನೆಲೆಸಿದ್ದಾನೆ. ಹಬ್ಬಗಳ ಸಮಯ ಶುರುವಾಗಿದೆ, ನಾಗರಪಂಚಮಿಯಿಂದ ಮೊದಲ್ಗೊಂಡು, ಆಗಸ್ಟ್ ತಿಂಗಳಿನಲ್ಲಿ ಮಂಗಳಗೌರಿ, ವರಮಹಾಲಕ್ಷ್ಮಿ ನಂತರ, ಹಬ್ಬಗಳ ಭರಾಟೆ ಮತ್ತಷ್ಟು ಹೆಚ್ಚುತ್ತಾ ಹಲವಾರು ದೊಡ್ಡ ಹಬ್ಬಗಳಾದ ಕೃಷ್ಣ ಜನ್ಮಾಷ್ಟಮಿ, ಗೌರಿಗಣೇಶ, ದಸರಾ ದೀಪಾವಳಿ ಆದಮೇಲೆ ವರ್ಷಾಂತ್ಯದ ಕ್ರಿಸ್‌ಮಸ್ ತನಕ ಸಾಗುತ್ತದೆ.

ವಿದೇಶದಲ್ಲಿ ನೆಲೆಯೂರಿದ ಎಲ್ಲ ನವಜೋಡಿಗಳ ಹಾಗೆ ಮಗ ಸೊಸೆಗೂ ಹಬ್ಬ ಹರಿದಿನಗಳನ್ನು ಭಕ್ತಿ, ವಿಜೃಂಭಣೆಯಿಂದ ಆಚರಿಸಬೇಕೆಂಬ ಆಸೆಯಾಯ್ತು. ಪೂಜಾ ದಿನಗಳು ಮತ್ತು ಪೂಜಾವಿಧಿಗಳ ಬಗ್ಗೆ ಅತ್ತೆ ಸೊಸೆ ಹಲವಾರು ವೀಡಿಯೋ ಕಾಲ್‌ಗಳಲ್ಲಿ ಮಾತುಕತೆ ನಡೆಸಿದ ನಂತರ ಬೇಕಾದ ಪೂಜಾ ಸಾಮಗ್ರಿಗಳ ದೊಡ್ಡ ಪಟ್ಟಿಯೇ ಸಿದ್ಧವಾಯ್ತು.(ಜೊತೆಗೆ ಇದಕ್ಕಿಂತ ದೊಡ್ಡದಾದ ತಿಂಡಿ ತಿನಿಸುಗಳ ಪಟ್ಟಿಯೂ ತಯಾರಾಯ್ತೆನ್ನಿ). ನನ್ನ ಜವಾಬ್ದಾರಿಯೇನಿದ್ರೂ ಪೂಜಾಸಾಮಗ್ರಿಗಳ ಜೊತೆ ಮತ್ತಷ್ಟು ದೊಡ್ಡ ಪಟ್ಟಿಯಲ್ಲಿದ್ದ ತಿಂಡಿ ತಿನಿಸುಗಳೆಲ್ಲವನ್ನೂ ಖರೀದಿಸಿ ಅಮೆರಿಕಕ್ಕೆ ಕೊರಿಯರ್ ಮಾಡುವುದು.

ಒಬ್ಬ ನಿಷ್ಠಾವಂತ ಗಂಡನಾಗಿ, ಒಳ್ಳೆಯ ತಂದೆಯೂ ಆದ ನಾನು ಅಷ್ಟೇ ದಕ್ಷ ಖರೀದಿದಾರನೂ ಹೌದು. ಗಾಂಧಿಬಜಾರಿನ ಸತೀಶ್ ಸ್ಟೋರ್ಸ್‌ಗೆ ಇತ್ತ ಒಂದೇ ಭೇಟಿಯಲ್ಲಿ ಪಟ್ಟಿಯಲ್ಲಿದ್ದ ಎಲ್ಲಾ ಪೂಜಾಸಾಮಗ್ರಿಗಳನ್ನೂ ಕೊಂಡಾಯ್ತು. ಇನ್ನು ಕಾಂಗ್ರೆಸ್ ಕಡಲೆಬೀಜ, ಚಕ್ಕುಲಿ, ಮುರುಕು, ಮಿಕ್ಸ್ಚರು, ಸಿಹಿ ತಿಂಡಿಗಳಿಗೆ ಶ್ರೀನಿವಾಸ ಬೇಕರಿ, ಐಯ್ಯಂಗಾರ್ ಬೇಕರಿಗಳಿಗೊಂದು ಭೇಟಿಯಾದರೆ, ಶೇಂಗಾ ಚಟ್ನಿಪುಡಿಗೆ ಶ್ರೀರಾಮ ಟ್ರೇಡರ್ಸ್‌ನಂತೂ ಮರೆಯೋಹಾಗಿಲ್ಲ.

ಇನ್ನು ನನ್ನ ಮನೆಯಾಕೆ ಎಲ್ಲಾ ಸಾಮಾನುಗಳ ತೂಕ, ಗುಣಮಟ್ಟ ಪರೀಕ್ಷಿಸಿ ಅಸ್ತು ಎಂದಮೇಲೆ ಎಲ್ಲವನ್ನೂ ಜೋಪಾನವಾಗಿ ಬಬ್ಬಲ್ ರ‍್ಯಾಪರಿನಿಂದ ಪ್ಯಾಕು ಮಾಡಿ ಅಂತರಾಷ್ಟ್ರೀಯ ಕೊರಿಯರ್ ಔಟ್‌ಲೆಟ್ಟಿಗೆ ಒಯ್ದದ್ದಾಯ್ತು.

ನಿಜವಾದ ಫಜೀತಿ ಶುರುವಾಗಿದ್ದು ಇಲ್ಲಿಂದಲೇ.

ಕೊರಿಯರ್ ಸರ್ವೀಸಿನ ಉಸ್ತುವಾರಿ ವಹಿಸಿದ್ದವ, ನನ್ನ ಮತ್ತು ನನ್ನ ಮನೆಯಾಕೆಯನ್ನ ಯಾರೋ ಮಾದಕವಸ್ತುಗಳ ಕಳ್ಳಸಾಗಣೆ ಮಾಡುವವರನ್ನ ಪರಿಶೀಲಿಸುವ ಹಾಗೆ ಕೂಲಂಕಷವಾಗಿ ಪರಿಶೀಲಿಸಿದ! ನನಗೆ ಸಾಮಗ್ರಿಗಳ ಡಬ್ಬವನ್ನು ತೆರೆಯಲು ಹೇಳಿ ತನ್ನ ಸಿಸ್ಟಮಿನ ಮುಂದೆ ಕೂತು ನಿಷೇಧಿತ ವಸ್ತುಗಳ ಪಟ್ಟಿಯನ್ನು ಪರಿಶೀಲಿಸತೊಡಗಿದ.

"ದೇವರಿಗೇ" ಮೊದಲ ಆಘಾತ ಕಾದಿತ್ತು ! ಗಣಪತಿ ಹಾಗು ಸರಸ್ವತಿಯ ಚಿಕ್ಕ ಬೆಳ್ಳಿ ವಿಗ್ರಹಗಳನ್ನು ನಾಜೂಕಾಗಿ, ಭಕ್ತಿಭಾವದಿಂದ ಡಬ್ಬಿಯಿಂದ ತೆಗೆದು "ಹಾರಲಾರದವು" ಎಂದು ಪಕ್ಕಕ್ಕಿಡಲಾಯ್ತು. ನಂತರ ಪರಿಶೀಲನೆಗೆ ಬಂದವು ಪಟ್ಟದ ಗೊಂಬೆಗಳು. ಯಾವ ಮರದಿಂದ ತಯಾರಿಸಲ್ಪಟ್ಟಿವೆ? ಧೂಮೀಕರಿಸಲ್ಪಟ್ಟಿವೆಯೇ ? ಗೊಂಬೆಗಳು ಹೊಸತೊ ಇಲ್ಲ ಹಳೆಯದೋ? ಕೊಂಡ ರಸೀದಿಗಳೆಲ್ಲಿ ?


ಈ ಪಟ್ಟದ ಗೊಂಬೆಗಳು ತಲೆತಲಾಂತರದಿಂದ ಅಂದರೆ, ನಮ್ಮ ಮುತ್ತಜ್ಜಿಯಿಂದ, ಪೀಳಿಗೆಯಿಂದ ಪೀಳಿಗೆಗೆ ಹಸ್ತಾಂತರಗೊಂಡು, ಈಗ ನಮ್ಮಲ್ಲುಳಿದಿರುವ ಅತ್ಯಮೂಲ್ಯ ವಸ್ತುಗಳು. ಹಾಗಾಗಿ ದುರದೃಷ್ಟವಶಾತ್ ಇವು ನಮಗೆ ದಕ್ಕಿದ್ದರ ಪುರಾವೆಯಾಗಿ ಯಾವ ಕಾಗದ ಪತ್ರಗಳೂ ಇಲ್ಲವಷ್ಟೆ. ಕೊನೆಗೆ ಪಟ್ಟದ ಗೊಂಬೆಗಳೂ ಬೆಳ್ಳಿ ವಿಗ್ರಹಗಳ ಪಕ್ಕಕ್ಕೆ ಸ್ಥಳಾಂತರಗೊಂಡವು. ಅಂತೂ ಸೂಕ್ಷ್ಮ ಪರಿಶೀಲನೆಯಲ್ಲಿ ದೈವತ್ವದ ಜೊತೆಗೆ ಅರಸೊತ್ತಿಗೆಯೂ ಸೋತಿತು ! ನನ್ನ ಹೃದಯ ಭಾರವಾಯ್ತು. ನಾನು ಯೋಚಿಸಿದೆ, "ಅಲ್ಲಾ, ದೇವರೇ ನಪಾಸಾದ ಮೇಲೆ, ಇನ್ನು ಪೂಜಾಸಾಮಗ್ರಿ, ತಿಂಡಿ ತಿನಿಸುಗಳ ಗತಿಯೇನು? ಸಾಕಷ್ಟು ವಸ್ತುಗಳು, ಅಂದ್ರೆ, ಹೂಬತ್ತಿಗಳು, ಕರ್ಪೂರ, ವೀಳ್ಯದೆಲೆ, ಕೊಬ್ಬರಿ, ಕುಂಕುಮ, ಅವಧಿ ಮುಗಿಯೋಕ್ಕೆ ಬಂದ ಪ್ರೋಟೀನು ಪೌಡರು, ಕೆಲಿಡೋಸ್ಕೋಪು ಎಂದು ತಪ್ಪಾಗಿ ತಿಳಿದ ಚಾಕಲೇಟು ಡಬ್ಬ, ಕನ್ನಡಕ ಎಲ್ಲವೂ ತಿರಸ್ಕೃತಗೊಂಡವು.

ಹೇಗೋ ತಿಂಡಿ ತಿನಿಸುಗಳು ಹಾರಲು ಪಾಸಾಗಿಬಿಟ್ಟವು. ಕರಾಚಿ ಬಿಸ್ಕತ್ತುಗಳು, ಗುರು ಸ್ವೀಟ್ ಮಾರ್ಟಿನ ಮೈಸೂರುಪಾಕು, ಕಡಲೆಬೀಜ, ಚಟ್ನಿಪುಡಿ, ಮನೆಯಲ್ಲಿ ಮಾಡಿದ ಸಿಹಿತಿಂಡಿಗಳು ಮತ್ತು ಖಾರ ಶಂಕರಪೋಳಿ !

ಅಂತೂ ನಮ್ಮ 15 ಕೆ.ಜಿಯ ಪೂಜಾಸಾಮಗ್ರಿ– ತಿಂಡಿಗಳ ಸಾಗಣೆ, 5 ಕೆ.ಜಿ ಡಬ್ಬಕ್ಕಿಳಿಸಲ್ಪಟ್ಟಿತು ! ಕೊನೆಗೆ ತೆಪ್ಪಗೆ ನಾವೇ ಸ್ಯಾನ್ ಫ್ರ್ಯಾನ್ಸಿಸ್ಕೋಗೆ ಟಿಕೆಟ್ಟು ಕಾಯ್ದಿರಿಸಲು ನಮ್ಮ ಟ್ರ್ಯಾವಲ್ ಏಜೆನ್ಸಿಯ ದಾರಿ ಹಿಡಿದೆವು. ನಾವೇ ಖುದ್ದಾಗಿ ತಲುಪಿಸುವುದರ ಮುಂದೆ ಬೇರೇನಿದೆ? ಕೊನೆಪಕ್ಷ ಹಬ್ಬಕ್ಕೆ ಮುಂಚೆ ನಾವಾದರೂ ತಲುಪಬಹುದಲ್ವೆ?

ಕನ್ನಡಕ್ಕೆ : ನಳಿನಿಸೂರ್ಯಪ್ರಕಾಶ್ ಸೌಜನ್ಯ : ಡೆಕ್ಕನ್ ಹೆರಾಲ್ಡ್ ■

ನಮ್ ಜಾತಿ ಮರಗಳು ಇಲ್ಲಿ
ಅಲ್ಪಸಂಖ್ಯಾತರು...ನಾವೂ ಮೀಸಲಾತಿಗೆ
ಹೋರಾಡೋಣ, ನಡೀರ್ರೋ...



# ಪುಟ್ಟೂರಾಯನ ಪಥ್ಯ

ಬೀರಣ್ಣ

ಬ್ರಹ್ಮೇಂದ್ರ ಭವನದ ಮೂರನೆ ಮಹಡಿಯ ವಾತಾವರಣವು ಸ್ವಲ್ಪ ಬಿಗಡಾಯಿಸಿತು. ಸಾಧಾರಣವಾಗಿ ಸೇರುವವರೆಲ್ಲರೂ ಕೇವಲ ಶಾಂತಪ್ರಿಯರಾದರೂ ಭಿನ್ನಾಭಿಪ್ರಾಯಗಳು ಬಂದಾಗ ಮಾತುಗಳ ಬಿಸಿ ಸ್ವಲ್ಪ ಏರುವುದೆಂದೇ ಹೇಳಬೇಕು.

ಭೀಮಣ್ಣನು ಇನ್ನೂ ಬಂದಿರಲಿಲ್ಲ. ಖಾರಾಬೂಂದಿಯ ಕುಳ್ಳಪ್ಪನಿಗೂ ಮೂರನೆಯ ಮಹಡಿಯವರೆಗೂ ತಪ್ಪಿ ಬಂದುಬಿಟ್ಟಿದ್ದ ಒಬ್ಬ ಹೊಸಬರಿಗೂ ಆರಂಭವಾಯಿತು ವಾಗ್ಯುದ್ಧ. ಬರೀ ಜಿಲೇಬಿ ಜಾಮೂನುಗಳನ್ನೇ ಇರಿಸಿದ್ದ ಹೊಸಬರು ಸುಮ್ಮನಿರಲಾರದೆ ಕುಳ್ಳಪ್ಪನನ್ನು ನೋಡಿ, "ಖಾರ ಮೈಗೆ ಕೆಟ್ಟದ್ದು" ಎಂದರು.

ನಾವೆಲ್ಲ ತಲೆಯೆತ್ತಿ ನೋಡಿದೆವು – ಮಾತನಾಡಿಸಲ್ಪಡದೆ ಮಾತನಾಡುವುದು ನಮ್ಮ ಪದ್ಧತಿಗೇ ವಿರೋಧ. ಆ ಸ್ವಾತಂತ್ರ್ಯವು ಭೀಮಣ್ಣನಿಗೊಬ್ಬನಿಗೇ ಇದ್ದದ್ದು. ಸ್ವಲ್ಪ ಹೊತ್ತು ಯಾರೂ ಬಾಯಿ ಬಿಡಲಿಲ್ಲ. ಕುಳ್ಳಪ್ಪನು ಬೂಂದಿ ಆಗಿಯುವುದು ಮಾತ್ರ ಕೇಳಿಸುತ್ತಿತ್ತು. ಹೊಸಬರು ಮತ್ತೆ "ಖಾರದಿಂದ ದೇಹಕ್ಕೆ ಆಗುವ ಕೇಡು ಅಷ್ಟಿಷ್ಟಲ್ಲ. ಅಲ್ಲದೇ ಅದು ತಾಮಸಾಹಾರ ಎಂದರು."

ಕುಳ್ಳಪ್ಪನು ಅಗಿಯುವುದನ್ನು ನಿಲ್ಲಿಸಿ, "ಜಾಮೂನು, ಜಿಲೇಬಿಗಳೇನು ಸಾತ್ವಿಕಾಹಾರವೋ?" ಎಂದನು.

"ಹೌದು, ಅದಕ್ಕೇ ನಾನು ಚಟ್ಣಿ ಕೂಡ ತಿನ್ನುವುದಿಲ್ಲವಲ್ಲ!" ಎಂದರು ಹೊಸಬರು.

ಇದು ನಮಗೆಲ್ಲಾ ಸ್ವಲ್ಪ ತಾಕಿತು. ಬ್ರಹ್ಮೇಂದ್ರಭವನದ ಚಟ್ಣಿ ಎಂದರೆ ಅದೇ ಒಂದು ವಿಶೇಷ, ಏನು ತಿನ್ನದಿದ್ದರೂ ನಾವೆಲ್ಲಾ ಸ್ವಲ್ಪ ಚಟ್ಣಿಯನ್ನಾದರೂ ನಾಲಿಗೆಗೆ ಸವರಿಕೊಂಡು ಚಪ್ಪರಿಸುವುದು ಅಭ್ಯಾಸ.

"ನೀವು ತಿನ್ನದಿದ್ದರೆ, ಮಣಗಟ್ಟಿ ಚಟ್ಣಿ ತಿಂದಿರುವ, ಈಗ ತಿನ್ನುತ್ತಿರುವ, ಮತ್ತು ಮುಂದೆಯೂ ಖಂಡಿತವಾಗಿಯೂ ತಿನ್ನುವ ನಾವೆಲ್ಲ ಏನಾಗಿದ್ದೇವೆ? ನಾವೆಲ್ಲಾ ಅಸಾತ್ವಿಕರೇನು?" ಎಂದು ಒಬ್ಬರು ಅಂದರು.

"ಚಟ್ಣಿ ತಿನ್ನದಮೇಲೆ ಏಕೆ ಬದುಕಿರಬೇಕೋ ನಾನು ಕಾಣೆ" ಎಂದು ಮತ್ತೊಬ್ಬರಂದರು.

"ಅದೂ ಇಡ್ಲಿಯೊಂದಿಗೆ!" ಎಂದು ಇನ್ನೊಬ್ಬರು ಸೇರಿಸಿದರು.

"ನಿಮ್ಮದು ಯಾವ ಊರೋ?" ಎಂದು ಮಗದೊಬ್ಬರು ಕೇಳಿದರು.

ಹೊಸಬರಿಗೆ ತಬ್ಬಿಬ್ಬಾಯಿತು. "ಅದೆಲ್ಲಾ ಕಟ್ಟಿಕೊಂಡು ನಿಮಗೇನು?" ಅಂದರು.

ಸರಿ, ಹತ್ತಿಕೊಂಡಿತು ಜಗಳ, ಮಾತುಗಳು ಎಲ್ಲೆ ಮೀರತೊಡಗಿದವು. ಅಷ್ಟು ಹೊತ್ತಿಗೆ ಸರಿಯಾಗಿ ಕೇಳಿ ಬಂತು–"ಎರಡಿಡ್ಲಿ, ಮೂರು ಬೆಣ್ಣೆ, ಚಟ್ಣಿ ಬೇರೆ ತಟ್ಟೆಯಲ್ಲಿ...... ಬೇಗ !" ಭೀಮಣ್ಣನ ಕೂಗು ! ಯಥಾ ಪ್ರಕಾರ, ಅದರ ಹಿಂದೆ ಭೀಮಣ್ಣ ! ಬಂದು ಕುಳಿತವನೇ ಪರಿಸ್ಥಿತಿಯನ್ನು ಒಂದು ಕ್ಷಣದಲ್ಲಿ ಗ್ರಹಿಸಿಬಿಟ್ಟನು. ಒಳ್ಳೆ ಜೇನುತುಪ್ಪದಂಥ ಮಾತಿನಲ್ಲಿ ಹೊಸಬರನ್ನು "ಸ್ವಾಮಿ, ದಯಮಾಡಿ ಸ್ವಲ್ಪ ನಿಧಾನಿಸಿ..... ಕೋಪಿಸಬೇಡಿ" ಎಂದರು.

ಹೊಸಬರು "ನೋಡಿ, ಏನೋ ಮೈಗೆ ಖಾರ ಕೆಟ್ಟದ್ದು ಎಂದು ಹೇಳಿದೆ.

ಅದಕ್ಕೆ ಎಲ್ಲರೂ ನನ್ನ ಮೇಲೆ ಬೀಳೋಣವೇ ! ನಾನು ಹೇಳಿದುದೇನು ತಪ್ಪೆ ? ಬೇಕಾದರೆ ಪುಸ್ತಕಗಳಲ್ಲಿ ತೋರಿಸುತ್ತೇನೆ–ಖಾರದಿಂದಾಗುವ ಕೇಡು ಎಷ್ಟು ಎಂಬುದನ್ನು" ಎಂದರು.

ಭೀಮಣ್ಣನು ಬೆಣ್ಣೆ ಚಟ್ಣಿಯನ್ನು ಹುಷಾರಾಗಿ ಇಡ್ಲಿಗೆ ಸವರಿ, ಕಷ್ಟದಲ್ಲಿ ಸಿಕ್ಕಿರುವ ಯಾವುದಾದರೂ ಒಂದು ವಿಚಿತ್ರ ಹುಳುವನ್ನು ನೋಡುವಂತೆ ಕನಿಕರ ದೃಷ್ಟಿಯಿಂದ ಹೊಸಬರನ್ನು ನೋಡುತ್ತಾ "ಓಹೋ, ಪುಸ್ತಕಗಳಲ್ಲಿ ಓದಿದ್ದೀರೊ?"

"ಹೌದು, ಓದಿದ್ದೇನೆ."

"ಅದರಿಂದಲೇನೋ ನೀವು ಖಾರ ಕೆಟ್ಟದ್ದು ಎಂದು ಹೇಳುವುದು ?"

"ಅಹುದು."

"ಅಲ್ಲ, ಈ ವಿಚಾರಗಳಿಗಾಗಿ ಪುಸ್ತಕಗಳನ್ನು ನೋಡದೇ ಇರುವುದಕ್ಕೆ ನೀವು ಯಾವಾಗಲಾದರೂ ಪ್ರಯತ್ನ ಪಟ್ಟಿದ್ದೀರಾ ?"

ಹೊಸಬರು ಅರ್ಧ ಬಾಯಿ ತೆರೆದು ಹಾಗೆಯೇ ಮಾತಿಲ್ಲದವರಾದರು. ಯಾವುದಕ್ಕಾಗಲಿ ಪುಸ್ತಕಗಳನ್ನು ನೋಡುವ ಪದ್ಧತಿ ಅವರದು ಎಂದು ತೋರುತ್ತೆ. ಪುಸ್ತಕಗಳನ್ನು ನೋಡದೆ ಇದ್ದರೆ ಇದು ಕೂಡದು, ಅದು ಕೆಟ್ಟದ್ದು ಎಂಬ ಮಾತೇ ಇಲ್ಲ ! ಯಥಾ ಪ್ರಕಾರ ಒಂದೇ ಒಂದು ಪ್ರಶ್ನೆಯಿಂದ ಭೀಮಣ್ಣನು ವಾಗ್ವಾದದಲ್ಲಿ ಜಯಭೇರಿ ಹೊಡೆದುಬಿಟ್ಟನು !

"ಈ ರೀತಿಯೆಲ್ಲಾ ತಪ್ಪು ಭಾವನೆಗಳನ್ನಿಟ್ಟುಕೊಳ್ಳಬೇಡಿ ! ಅದರಿಂದಾಗುವ ಅನಿಷ್ಟವು ಹೇಳುವುದಕ್ಕಾಗುವುದಿಲ್ಲ. ಇದು ನಾನು ಅನುಭವದಿಂದ ಹೇಳುವ ಮಾತು."

"ನಿನ್ನ ಅನುಭವವೆ?" ಎಂದು ಕೇಳಿದೆ.

"ನನ್ನದಲ್ಲದಿದ್ದರೂ ನಮ್ಮ ಪುಟ್ಟೂರಾಯನದು." (ಸುತ್ತಲೂ ಎಲ್ಲರನ್ನೂ ನೋಡುತ್ತಾ) "ಗೊತ್ತಿರಬಹುದು ನಿಮಗೆಲ್ಲಾ ಪುಟ್ಟೂರಾಯ........"

"ಯಾರದು?" ಇಲ್ಲವಲ್ಲ.

"ಪುಟ್ಟೂರಾಯ ಕೇವಲ ನನ್ನ ದೊಡ್ಡಪ್ಪನ ಮಗ, (ಎಂದು ಶುರು ಮಾಡಿದ ಭೀಮಣ್ಣ.) ನನ್ನ ಮನೆಯವರೆಲ್ಲರಂತೆಯೇ ಅವನಿಗೂ ಪುಸ್ತಕಗಳನ್ನು ಓದಬೇಕೆಂದರೆ ಅತ್ಯಂತ ಆಸಕ್ತಿ. ಯಾವ ಪುಸ್ತಕ ಸಿಕ್ಕಿದರೂ ಅದನ್ನು ಮೊದಲಿಂದ ಕೊನೆಯವರೆಗೂ ತಿರುವಿಹಾಕದೆ ಬಿಡುತ್ತಿರಲಿಲ್ಲ. ಈ ರೀತಿಯಾಗಿ ಅವನು ಗಳಿಸಿದ್ದ ಜ್ಞಾನ ಇಷ್ಟು ಎಂದು ಅಳೆಯುವುದಕ್ಕೆ ಆಗುತ್ತಿರಲಿಲ್ಲ. ಅರ್ಜೆಂಟೈನಾದಲ್ಲಿ ಆರಡಿ ಮನುಷ್ಯರು ಎಷ್ಟು ಜನ, ಆಂಡಿಸ್ ಪರ್ವತದಲ್ಲಿ ಅಡುಗಳಿವೆಯೆ, ಓರಿನೋಕೋ ಎಂಬುದು ಏನು, ಏಕೆ ಮತ್ತು ಎಲ್ಲಿದೆ, 1888 ನೇ ಇಸ್ವಿಯಲ್ಲಿ ಇಂಗ್ಲೆಂಡಿನ ಡಾರ್ಬಿ ಜೂಜಿನಲ್ಲಿ ಗೆದ್ದ ಕುದುರೆ ಯಾವುದು ಮತ್ತು ಅದಕ್ಕೆ ಎಷ್ಟು ಮರಿಗಳಾದವು, ಲಿಲಿ ಡ್ಯಾಮಿಟ ಎಂಬ ಸಿನಿಮಾ ನಟಿಯು ಇಲಿ ಕಪಟಗಳನ್ನೇಕೆ ದ್ವೇಷಿಸುವಳು, ಇವೇ ಮುಂತಾದ ಗಹನ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ಕೊಡುವುದರಲ್ಲಿ ಎತ್ತಿದ ಕೈ. ಗಂಗಾಮೂಲ ಎಲ್ಲಿದೆ ಎಂದು ಯಾರೋ ಮಾತನಾಡುತ್ತಿದ್ದಾಗ, ಪುಟ್ಟುವು ಒಡನೇಯೇ "ಆಪ್ಲಿಂಗಿನ ಗಂಗಾರ್ದಿ ಎಂಬ ಪದ್ಯದಲ್ಲಿ" ಎಂದು ಹೇಳಿ ಎಲ್ಲರನ್ನೂ ಅಚ್ಚರಿಗೊಳಿಸಿಬಿಟ್ಟಿದ್ದನು!!

ಅಥವಾ ಅವನಿಗೆ ಗೊತ್ತಿಲ್ಲದ ವಿಚಾರ ಯಾವುದನ್ನಾದರೂ ಕೇಳಿದರೆ, ಅನ್ನ, ನೀರು, ಕಾಫಿ ಸಹಿತ ಬಿಟ್ಟು ಪುಸ್ತಕಗಳನ್ನೆಲ್ಲಾ ಶೋಧಿಸಿ ಉತ್ತರವನ್ನು ತಂದುಬಿಡುತ್ತಿದ್ದನು.

ಅವನು ಒಂದೇ ಒಂದು ಸಲ ಕೇಳಿದ ಪ್ರಶ್ನೆಗೆ ಉತ್ತರ ಕೊಡಲಾರದೆ ಹೋದದ್ದು; ಅವನ ತಂಗಿ ತುಂಟು ಹುಡುಗಿ ಎಂದರೆ ಅವಳನ್ನು ಬಿಟ್ಟರೆ ಇಲ್ಲ– ಅವನನ್ನು "ಪುಟ್ಟಣ್ಣ, ಪುಟ್ಟಣ್ಣ, ಇರುವೆಗೆ ಆರು ಕಾಲಾದರೆ ಮಂಚಕ್ಕೆಷ್ಟು?" ಎಂದು ಕೇಳಿದಳು, ಪುಟ್ಟುವು ಅದಕ್ಕೆ ಎಷ್ಟೆಷ್ಟೋ ಯೋಚನೆ ಮಾಡಿದನು. ಗಣಿತದಲ್ಲಿ ತ್ರೈರಾಶಿಯ ಭಾಗವನ್ನೆಲ್ಲಾ ನೋಡಿದನು. ಪ್ರಾಣಿಶಾಸ್ತ್ರದ ಪುಸ್ತಕಗಳನ್ನೆಲ್ಲಾ ಒಂದು ಹಾಳೆ ಬಿಡದೆ ಓದಿದನು. ಎಲ್ಲಿಯೂ ಬಗೆಹರಿಯಲಿಲ್ಲ. ಕೊನೆಗೆ ಸೋತನೆಂದು ಒಪ್ಪಿಕೊಳ್ಳಬೇಕಾಯಿತು. ಅವನ ತಂಗಿಯು "ಅಯ್ಯೋ, ಇಷ್ಟೇನೆ ಅಣ್ಣ ! ನಾನು ಹೇಳಲೆ ? ಮೂರು ಮತ್ತೊಂದು !" ಎಂದು ಹೇಳಿದಾಗ ಪುಟ್ಟುವು ಪುಸ್ತಕದಲ್ಲಿಲ್ಲವಾದ್ದರಿಂದ ಒಪ್ಪಿಕೊಳ್ಳುವುದೇ ಕಷ್ಟವಾಯಿತು !

ಹೀಗೆ ಪುಸ್ತಕದಲ್ಲಿಲ್ಲದುದನ್ನು ಹೇಗೆ ನಂಬುತ್ತಿರಲಿಲ್ಲವೋ, ಹಾಗೆಯೇ ಅಚ್ಚಿನಲ್ಲಿದ್ದುದೆಲ್ಲಾ ಅವನಿಗೆ ವೇದವಾಕ್ಯ. "ಈ ವರ್ಷ ಒಂದೇ ದಿವಸದಲ್ಲಿ ಹದಿನೆಂಟಂಗುಲ ಮಳೆ ಬಿದ್ದು ಜಲಪ್ರಳಯವಾಗುವುದು" ಎಂದು ಒಬ್ಬ ವಿಜ್ಞಾನ ಶಾಸ್ತ್ರಜ್ಞರು ಹೇಳಿದ್ದಾರೆಂದು ವಾರಪತ್ರಿಕೆಯೊಂದರಲ್ಲಿ ಓದಿಬಿಟ್ಟು, ಬೇರೆ ಎತ್ತರವಾದ ಪ್ರದೇಶ ಯಾವುದೂ ಸಿಕ್ಕದೆ, ಮನೆ ಅಂಗಳದಲ್ಲಿ ಬೆಳೆದಿದ್ದ ಅರವತ್ತು ಅಡಿ ಅಡಿಕೆ ಮರದ ಮೇಲೆ ಮೂರು ದಿವಸ ಕೂತಿದ್ದಂಥಾ ಆಸಾಮಿ ಅವನು ! "ಅಮರ ಕಾಯ ಮೇಷಧ್ವಜ" ಎಂಬ ಸಿದ್ಧೌಷಧಿಯು ಯಾವ ಕೆಲಸವನ್ನಾದರೂ ಮಾಡಬಲ್ಲುದು ಎಂಬ ಜಾಹಿರಾತನ್ನೂ, ಪ್ರಸಿದ್ಧ ರಾಜಾ ಜಮಿನ್‌ದಾರರು ಕೊಟ್ಟಿದ್ದ ಹೊಗಳಿಕೆಯ ಪತ್ರಗಳನ್ನೂ ನೋಡಿ, ಐವತ್ತು ರೂಪಾಯಿಗೆ ಎರಡು ಸೀಸೆ ತರಿಸಿ ತನ್ನ ಎತ್ತರ (ಅವನು ಇರುವುದು ಆರು ಅಡಿ, ಮೂರೂವರೆ ಅಂಗುಲ, ಎದೆ ಸುತ್ತಳತೆ ಹದಿನೇಳಂಗುಲ !) ಕಡಿಮೆಯಾಗುವುದಕ್ಕೆಂದು ಇಪ್ಪತ್ತೊಂದು ದಿವಸ ಸೇವಿಸಿ, ಎತ್ತರದಲ್ಲಿ ಏಳು ಅಂಗುಲ ಕಡಿಮೆಯಾಗಿದ್ದೇನೆಂದು ನಂಬಿ, ಹಾಗಿಲ್ಲವೆಂದು ಹೇಳಿದವರನ್ನೆಲ್ಲಾ ಹೊಡೆಯುವುದಕ್ಕೆ ಹೋಗಿ, ಅಳತೆ ಪಟ್ಟಿಯನ್ನು ತಪ್ಪು ಎಂದು ಹರಿದುಹಾಕಿ, ಕೊನೆಗೆ ಬಚ್ಚಲುಮನೆ ಬಾಗಿಲಿನಲ್ಲಿ ತಲೆ ತಗ್ಗಿಸದೇ ಹೋದಾಗ ಬುರುಡೆ ಬೋರೆಯಾದದ್ದರಿಂದ ಒಪ್ಪಿಕೊಂಡ ಶೂರ !

ಒಂದು ಸಲ, ಅವನು ನಮ್ಮ ದೇಶದ ಸುಪ್ರಸಿದ್ಧ ನಾಯಕರೊಬ್ಬರು ಬರೆದಿರುವ ಆರೋಗ್ಯ ಸೂತ್ರದಲ್ಲಿ ದೇಹಕ್ಕೆ ಖಾರವು ಹಾನಿಕರವಾದದ್ದು ಎಂದು ಓದಿ ಮಾರನೆ ದಿನದಿಂದ ಖಾರ ತಿನ್ನುವುದನ್ನು ಬಿಟ್ಟುಬಿಡಬೇಕೆಂದು ಸಂಕಲ್ಪ ಮಾಡಿಕೊಂಡನು. ನಮ್ಮ ಮನೆಯಲ್ಲಿಯೋ ಖಾರ ಎಂದರೆ ಸ್ವಲ್ಪ ಇಷ್ಟ ಎಂದೇ ಹೇಳಬೇಕು. ನಮ್ಮ ಮುತ್ತಾತಂದಿರು ಮೂರನೆಯ ಮದುವೆಗೆ ಆಂಧ್ರದೇಶದ ಹುಡುಗಿಯನ್ನು ತಂದುಕೊಂಡಾಗ, ಆಕೆ ಬಳುವಳಿಯಾಗಿ ಮೂಟೆಗಟ್ಲೆ ಮೆಣಸಿನಕಾಯಿ ತಂದಿದ್ದಳು! ಪುಟ್ಟೂರಾಯನು ಖಾರ ತಿನ್ನುವುದರಲ್ಲಿ, ತಾತಮುತ್ತಾತಂದಿರನ್ನ ಒಂದು ಕೈ ಮೀರಿಸಿದ್ದನು. ಇಂಥವನು ಪ್ರಸ್ತುಕದಲ್ಲಿ ಬರೆದಿದೆ ಎಂದು ಖಾರವನ್ನೇ ಬಿಟ್ಟುಬಿಟ್ಟನು ಎಂದರೆ ಎಷ್ಟರ ಮಟ್ಟಿನ ಮನಸ್ಥೈರ್ಯ ಎಂಬುದನ್ನು ನೀವೇ ಯೋಚಿಸಬಹುದು. ಮನೆಯವರೆಲ್ಲರಿಗೂ ಆಶ್ಚರ್ಯ. ಒಂದು ದಿವಸವಾಯಿತು, ಎರಡು ದಿವಸವಾಯಿತು, ಮೂರು ದಿವಸಗಳಾದವು. ಆದರೂ ಪುಟ್ಟುವು ಸಿಹಿಸಾರು, ಖಾರ ಸೋಕದ ಸೊಪ್ಪಿನ ಪಲ್ಯ, ನೀರುಮಜ್ಜಿಗೆ ಇವುಗಳನ್ನು ಬಿಟ್ಟು ಬೇರೆ ಕೇಳಲಿಲ್ಲ. ಕೇಳುವುದು ಹಾಗಿರಲಿ, ಮೆಣಸಿನಕಾಯಿ ತೂಗಿದ್ದ ತಕ್ಕಡಿಯಲ್ಲಿ ತೂಗಿಸಿ ತಂದದ್ದೆಂದು ಗೆಣಸನ್ನು ಸಹಾ ಗೊಬ್ಬರಕ್ಕೆ ಒಗೆದುಬಿಟ್ಟ, ಮನುಷ್ಯ !

ಈ ಪಥ್ಯದಿಂದ ಮೊದಲು ಒಳ್ಳೆಯದೇ ಆಯಿತೆಂದು ಹೇಳಬೇಕು. ನಮ್ಮ ಪುಟ್ಟೂರಾಯನಿಗೆ ಕೋಪ ಎಂದರೆ ಮೊದಲಿಂದಲೂ ಮೂಗಿನ ಮೇಲೆಯೇ, ಖಾರ ಬಿಟ್ಟ ದಿನದಿಂದ ಅವನ ಸ್ವಭಾವದಲ್ಲಿಯೇ ಬದಲಾವಣೆ ಕಂಡುಬಂದಿತು. ಸಿಕ್ಕಿದವರ ಮೇಲೆ ಹಾರಾಡುವುದು ಕಡಿಮೆಯಾಗಿ ಹೋಯಿತು––ಏಕೆ ನಿಂತೇ ಹೋಯಿತು. ಮೊದಲು, ಮಹಡಿಯ ಮೇಲೆ ಅವನ ಕೊಠಡಿಗೆ ಯಾರಾದರೂ ಹೋಗಿ ಅವನ ಸಾಮಾನುಗಳನ್ನು ಮುಟ್ಟಿದರೆಂದರೆ ಆಯಿತು ಅವರ ಅವಸ್ಥೆ, ಅವತ್ತೆ ! ಈಗಲಾದರೆ, ಕೊಠಡಿ ಬಾಗಿಲ ಹತ್ತಿರ ಯಾರಾದರೂ ಸುಳಿದರು ಅಂದರೆ ಅವರನ್ನು ಒಳಕ್ಕೆ ಕರೆದು, ಏನು ಬೇಕೆಂದು ವಿಚಾರಿಸಿ, ಏನೂ ಬೇಡವೆಂದರೂ, ಏನಾದರೂ ಒಂದು ಪದಾರ್ಥವನ್ನು ಕೊಟ್ಟು ಕಳುಹುವನು. ತಂಗಿಗೆ ಪೆಪ್ಪರುಮಿಂಟು, ಚಾಕೊಲೇಟುಗಳೂ, ತಮ್ಮನಿಗೆ ಬಿಸ್ಕತ್ತು, ಬಣ್ಣದ ಪೆನ್ಸಿಲ್ಲುಗಳೂ, ಅಪ್ಪ ಅಮ್ಮನಿಗೆ ಹಣ್ಣು ಹಂಪಲು, ಹೆಂಡತಿಗೆ ಹೂವುಹಾರ ಪ್ರತಿ ದಿನವೂ ಸಿಕ್ಕಹತ್ತಿದವು. ಕಂಡರೂ ಮಾತಾಡಿಸದೇ ಇದ್ದವನು, ಹೆಂಡತಿಯ ತಮ್ಮನನ್ನೂ, ನಾದಿನಿಯ ಗಂಡನನ್ನೂ ಹುಡುಕಿಕೊಂಡು ಹೋಗಿ ಸಲಿಗೆ ವಿಶ್ವಾಸಗಳಿಂದ ವಿಚಾರಿಸತೊಡಗಿದನು. ಹೆಚ್ಚೇಕೆ, ಸಾತ್ವಿಕತೆಯೂ, ಸರ್ವತ್ರ ಪ್ರೀತಿ ವಿಶ್ವಾಸಗಳೂ ತುಂಬಿ ತುಳುಕಿ, ಪ್ರತಿ ರೋಮ–ಕೂಪದಿಂದಲೂ ಜಿನುಗಹತ್ತಿತ್ತೆಂದು ಹೇಳಿದರೆ ಇದೇನೂ ಅತಿಶಯೋಕ್ತಿಯಾಗಲಾರದು. ಈ ಮಾರ್ಪಾಡನ್ನು ಕೇಳಿ ಅವನ ಅತ್ತೆ ಮಾವಂದಿರು, ಅವನ ಮದುವೆಯಾದ ಮೇಲೆ ಹತ್ತಿರ ಬರುವುದಕ್ಕೆ ಹೆದರುತ್ತಿದ್ದವರು, ಒಂದು ಭಾನುವಾರ ಬಂದು ಅಳಿಯನನ್ನು ಕಂಡು ಮಾತನಾಡಿ ಸಂತೋಷಪಡಬೇಕೆಂದು ಹವಣಿಸಿಕೊಂಡರು.

ಹೀಗೆ ಹತ್ತು ಹನ್ನೆರಡು ದಿನಗಳು ಕಳೆದವು. ಹದಿಮೂರನೆಯ ದಿವಸ, ಪುಟ್ಟುವಿಗೆ ಮೈ ಏನೋ ಸ್ವಲ್ಪ ಇರಸುಮುರಿಸಾಗಿ ಕಂಡುಬಂದಿತು. ಮನಸ್ಸಿಗೆ ಹರ್ಷವಿಲ್ಲದಂತೆ ತೋರಿತು. ಕಾರಣವೇನೂ ತಿಳಿಯಲಿಲ್ಲ. ಮಾರನೆಯ ದಿನ ಈ ಚಿಹ್ನೆಗಳೆಲ್ಲಾ ಹೆಚ್ಚಿದವು. ಅವನ ಸ್ನೇಹಿತರೂ ಸಹ "ಏಕಯ್ಯಾ, ಪುಟ್ಟೂರಾಯ, ಮೊದಲಿನ ಲವಲವಿಕೆಯೇ ನಿನ್ನಲ್ಲಿ ಕಾಣುವುದಿಲ್ಲವಲ್ಲ. ಈ ಬಗೆ ನಮ್ಮ ಹತ್ತಿರ ಜಗಳ ಮಾಡುವುದನ್ನು ಕೂಡ ನಿಲ್ಲಿಸಿಬಿಟ್ಟಿದ್ದೀಯೆ?" ಅಂದರು. ಒಬ್ಬನು "ಆಯ್ಯಾ, ನೀನು ಖಾರ ಬಿಟ್ಟಿರುವುದು ಆಶ್ಚರ್ಯ. ನನಗಂತೂ ಖಂಡಿತ ಸಾಧ್ಯವಿಲ್ಲ–ಜ್ವರ ಬಂದ ಬಾಯಿಗೂ ಸಹ ಸ್ವಲ್ಪ ಉಪ್ಪಿನಕಾಯಿ ರಸ ಸೋರಿಸದಿದ್ದರೆ ಬದುಕುವುದಕ್ಕೆ ಆಗುವುದಿಲ್ಲ" ಎಂದನು.

ಇನ್ನೊಬ್ಬನು "ನೋಡು ಪುಟ್ಟೂ, ಇವತ್ತು ನಮ್ಮ ಮನೆಯಲ್ಲಿ ಬೆಳದಿಂಗಳೂಟ ಬಿಸಿ–ಬೇಳೆ ಹುಳಿಯನ್ನ ಇತ್ಯಾದಿ ! ನಿನಗೆ ಗೊತ್ತೇ ಇದೆ, ನಮ್ಮಜ್ಜಿ ಬಿಸಿ ಬೇಳೆ ಹುಳಿಯನ್ನವನ್ನು ಎಷ್ಟು ಚೆನ್ನಾಗಿ ಮಾಡುತ್ತಾಳೆಂಬುದು. ಹೋದ ವರ್ಷದಂತೆಯೇ ಈ ಸಲವೂ ನಿನ್ನನ್ನು ಕರೆಯೋಣ ಎಂದು ನೋಡಿದೆ. ಆದರೆ, ಈ ನಿನ್ನ ಖಾರ ಬಿಟ್ಟಿರುವ ವ್ರತಕ್ಕೆ ಭಂಗ ತರಬಾರದೆಂದು ಸುಮ್ಮನಿದ್ದುಬಿಟ್ಟೆ" ಎಂದನು.

ಪುಟ್ಟುವಿಗೆ ಅವರ ಮನೆಯ ಹಿಂದಿನ ವರ್ಷದ ಬಿಸಿಬೇಳೆ ಹುಳಿಯನ್ನವು ಚೆನ್ನಾಗಿಯೂ ಜ್ಞಾಪಕವಿದ್ದಿತು–ಪಂಥ ಕಟ್ಟಿ ಐದನೇ ಸಲ ಹಾಕಿಸಿಕೊಂಡಿದ್ದ. ಅದನ್ನು ಯೋಚಿಸುತ್ತಿರುವ ಹಾಗೆಯೇ ಬಾಯಲ್ಲಿ ನೀರೂರಿತು. ಆಲೋಚಿಸಿದನು–ಆದೀತೆ ಇನ್ನು ಮೇಲೆ ಬಿಸಿಬೇಳೆ ಹುಳಿಯನ್ನವನ್ನು ತಿನ್ನುವ ಹಾಗೇ ಇಲ್ಲ ! ಬಿಸಿಬೇಳೆ ಹಾಗಿರಲಿ, ಬರೀ ಹುಳಿಯನ್ನವನ್ನು ಸಹ ಮುಟ್ಟುವಂತಿಲ್ಲ ! ಇನ್ನೊಬ್ಬ ಸ್ನೇಹಿತನು ಹೇಳಿದ ಉಪ್ಪಿನಕಾಯಿ ರಸವೂ ಅಷ್ಟೆ........ ಪುಟ್ಟುವಿಗಾದರೋ ಉಪ್ಪಿನಕಾಯಿ

ಎಂದರೆ ಪ್ರಾಣ. ಅದರಲ್ಲಿಯೂ ನೆಲ್ಲೀಕಾಯಿ ಉಪ್ಪಿನಕಾಯಿನ ರಸ ಎಂದರೆ ಪ್ರಾಣ ಪ್ರಾಣ–ಬೇರೆ ಏನಿಲ್ಲದಿದ್ದರೂ, ಬರೀ ರಸದಲ್ಲಿಯೇ ಅನ್ನ ಕಲಿಸಿ, ಸ್ವಲ್ಪ ಎಣ್ಣೆ ಹಾಕಿಕೊಂಡು ಇಡೀ ಊಟವನ್ನೇ ಮಾಡಿಬಿಡುವನು. ಇನ್ನು ಅದೆಲ್ಲಾ ಸ್ವಪ್ನ ಪ್ರಾಯ! ಹಾಗೆಯೇ ನೋಡಿದರೆ, ಚಟ್ಣಿಯೂ ಅಷ್ಟೆ ! ಚೆನ್ನಾಗಿ ಖಾರ ಹಾಕಿ ಅರೆದ ಕಾಯಿಚಟ್ಣಿ ಅಂದರೆ ಅಮೃತವಲ್ಲವೆ ! ಅದಕ್ಕೆ ಪುದೀನ ಸೊಪ್ಪು ಸೇರಿಸಿ ಅರೆದರಂತೂ ಇನ್ನೂ ಸೊಗಸು! ಆ ಮೇಲೆ........ ಛೇ, ಹೀಗೆ ಬಿಟ್ಟುಬಿಟ್ಟ ಪದಾರ್ಥಗಳ ಮೇಲೆ ಮನಸ್ಸನ್ನೋಡಿಸುವುದು ಯುಕ್ತವಲ್ಲ; ಮನಸ್ಸನ್ನು ಅಧೀನದಲ್ಲಿಟ್ಟುಕೊಳ್ಳಬೇಕು........ಆಗಲೇ ಎರಡು ವಾರ ಕಳೆಯಲಿಲ್ಲವೇ? ಹೀಗೆಯೇ ಅಭ್ಯಾಸವಾಗಿಬಿಡುತ್ತೆ, ಎಂದಂದುಕೊಂಡು ಮನಸ್ಸನ್ನು ಬೇರೆ ಕಡೆ ತಿರುಗಿಸಿ, ಮನಸ್ಥೈರ್ಯ, ಸಾತ್ವಿಕತೆ, ಅದರಿಂದುಂಟಾಗುವ ತೇಜಸ್ಸು, ಓಜಸ್ಸು ಇತ್ಯಾದಿಗಳನ್ನು ಮನನ ಮಾಡುತ್ತಾ ಮನೆ ಸೇರಿದನು.

ಕೈ ಕಾಲು ತೊಳೆದುಕೊಂಡು ಊಟಕ್ಕಿದ್ದಾಗ "ಅಮ್ಮ, ಏನಡಿಗೆ ?" ಎಂದನು.

ತಾಯಿಯು "ಏನು ಮಾಡಲೋ, ಪುಟ್ಟು? ಯಥಾಪ್ರಕಾರ ಅನ್ನ, ಸಿಹಿ ಸಾರು, ಖಾರ ಹಾಕದ ಬದನೇಕಾಯಿ ಪಲ್ಯ–ಮತ್ತೇನು ಮಾಡಲಿ ? ಎಲ್ಲರಿಗೂ ಮೊನ್ನೆ ಬಂದಿದ್ದ ಈರನಗೆರೆ ಬದನೆಕಾಯಿ ಎಣ್ಣೆಗಾಯಿ ಮಾಡಿದ್ದೆ. ಖಾರವಾಗಿ ಹೋಗಿದೆ ಅಂತೀಯ–ಎಲ್ಲರೂ ಚಪ್ಪರಿಸಿಕೊಂಡು ಮೇಲೆಮೇಲೆ ಹಾಕಿಸಿಕೊಂಡು ತಿಂದರು. ಮಾಡಿದವಳಿಗೆ ನನಗೇ ಉಳಿದಂತಿಲ್ಲ! – ಆದರೆ ಅದನ್ನೆಲ್ಲಾ ನಿನಗೆ ಹೇಳಿ ಏನು ಪ್ರಯೋಜನ ?–ನೀನಂತೂ ಖಾರ ಬಿಟ್ಟುಬಿಟ್ಟಿದ್ದೀಯಲ್ಲಾ ಹಠ ಎಂದರೆ ಹೀಗಪ್ಪ !" ಎಂದಳು.

ಬದನೇಕಾಯಿ ಎಣ್ಣೆಗಾಯಿ ! ಪುಟ್ಟುವಿಗೆ ಅಷ್ಟು ಗಟ್ಟಿ ಮನಸ್ಸಿದ್ದರೂ ತಡೆಯುವುದು ಕಷ್ಟವಾಯಿತು. ಬಡಿಸಿದ್ದರಲ್ಲಿ ಅರ್ಧವನ್ನೆಲ್ಲಾ ಬಿಸಾಡಿ, ಏನೋ ಊಟದ ಶಾಸ್ತ್ರವನ್ನು ಮುಗಿಸಿದನು. ಊಟ ಮಾಡಿದ ಬಾಯಿಗೆ ಎಂದು ಎಲ್ಲರೂ ಹುರಿಗಾಳನ್ನು ತಿನ್ನುತ್ತಿದ್ದರು. ಅವನ ತಂಗಿಯು "ಪುಟ್ಟಣ್ಣ, ಈ ಸಲ ಹುರಿಗಾಳು ಎಷ್ಟು ಚೆನ್ನಾಗಿದೇಂತ ! ಹಿಂದೆ ಯಾವಾಗಲೂ ಅಮ್ಮ ಇಷ್ಟು ಹದವಾಗಿ ಮಾಡಿರಲಿಲ್ಲ. ನೀನು ಖಾರ ಬಿಡದೇ ಇದ್ದರೆ ಅದನ್ನು ಎಷ್ಟು ಹೊಗಳುತ್ತಿದ್ದೆಯೋ !" ಎಂದಳು. ಪುಟ್ಟುವು ಮಾತನಾಡದೆ ತನ್ನ ಕೊಠಡಿಗೆ ಹೊರಟುಹೋದನು.

ರಾತ್ರಿ ಚೆನ್ನಾಗಿ ನಿದ್ದೆಯೇ ಬರಲಿಲ್ಲ. ಏನೇನೋ ಸ್ವಪ್ನಗಳು; ಎಲ್ಲಾ ಊಟದ್ದೇ! ಬಿಸಿಬೇಳೆ ಹುಳಿಯನ್ನ, ಬದನೇಕಾಯಿ ಎಣ್ಣೆಗಾಯಿ, ನೆಲ್ಲಿಕಾಯಿ ಉಪ್ಪಿನಕಾಯಿ, ತೆಂಗಿನಕಾಯಿ ಚಟ್ಣಿ, ಖಾರದ ಹುರಿಗಾಳು ಒಂದರೊಂದಿಗೊಂದು ಕಣ್ಣುಮುಚ್ಚಾಲೆ ಆಡುವಂತೆ ತೋರಿತು. ಒಂದು ಸಲ ಉಪ್ಪಿನಕಾಯಿ ಸಿಕ್ಕಿಹಾಕಿಕೊಳ್ಳುವುದು, ಇನ್ನೊಂದು ಸಲ ಎಣ್ಣೆಗಾಯಿ; ಮತ್ತೊಂದು ಸಲ ಬಿಸಿಬೇಳೆ ಹುಳಿಯನ್ನ! ಇವುಗಳ ಜತೆಗೆ ಖಾರದ ಹುರುಳಿ ಹಪ್ಪಳ, ಹುಣಸೇತೊಕ್ಕು ಹೇಗೋ ಬಂದು ಸೇರಿಕೊಂಡುಬಿಟ್ಟವು ! ತೊಕ್ಕು ಎಲ್ಲವನ್ನೂ ಅಟ್ಟಿಸಿಕೊಂಡು ಹೋಗಲಾರಂಭಿಸಿತು. ಆದರೆ ಇದ್ದಕ್ಕಿದ್ದ ಹಾಗೆಯೇ ಕಾಯಿಚಟ್ಣಿಯನ್ನು ಯಾರೂ ಹಿಡಿಯುವುದಕ್ಕೆ ಆಗಲಿಲ್ಲ. ಎಲ್ಲಿ ನೋಡಿದರೂ ಚಟ್ಣಿಯೇ–ಆದರೆ ಕೈಗೆ ಮಾತ್ರ ಸಿಕ್ಕುವುದಿಲ್ಲ ! ತಪ್ಪಿಸಿಕೊಂಡು ಓಡುತ್ತಾ ಕಿಲಕಿಲ ಎಂದು ನಗುವುದು. ಇದನ್ನು ಕಂಡು ಉಪ್ಪಿನಕಾಯಿ ಅಣಕಿಸುವುದು ಒಂದು ಕಡೆ ಚಟ್ಣಿ, ಒಂದು ಕಡೆ ಉಪ್ಪಿನಕಾಯಿ.......ಚಟ್ಣಿ, ಉಪ್ಪಿನಕಾಯಿ.......ಯಾರೂ ಇದನ್ನು ಹಿಡಿಯುವ ಹಾಗೆಯೇ ಇಲ್ಲವೆ ? ಪುಟ್ಟುವು ಇದೇನು ಕಷ್ಟ ಎಂದು ಹಿಡಿಯಹೋಗುವನು. ಚಟ್ಣಿಯನ್ನು ಹಿಡಿಯಹೋದರೆ, ಉಪ್ಪಿನಕಾಯಿ ಅಣಕಿಸುವುದು,

ಉಪ್ಪಿನಕಾಯನ್ನು ಅಟ್ಟಿಸಿಕೊಂಡು ಹೋದರೆ ಚಟ್ಣಿ ಅಣಕಿಸಿ ನಗುವುದು. ಚಟ್ಣಿ, ಉಪ್ಪಿನಕಾಯಿ........ ಉಪ್ಪಿನಕಾಯಿ, ಚಟ್ಣಿ–...ಚಟ್ಣಿ, ಉಪ್ಪಿನ– "ಏನೂಂದ್ರೆ, ಇದೇನು ಹೀಗೆ ಕನವರಿಸುತ್ತಿದ್ದೀರಿ ? ಕೆಟ್ಟ ಸ್ವಪ್ನವಾದರೆ ಸ್ವಲ್ಪ ಎಚ್ಚರ ಮಾಡಿಕೊಳ್ಳಿ" ಎಂದಳು ಪುಟ್ಟುವಿನ ಹೆಂಡತಿ.

ಪುಟ್ಟುವು ಎಚ್ಚೆತ್ತು "ಏಕೆ, ಏನು ಮಾತಾಡಿದೆ ?"

"ಏನೋ ಚಟ್ಣಿ, ಚಟ್ಣಿ, ಎಂದು ಹಲ್ಲು ಕಡಿಯುತ್ತಾ ಅನ್ನುತ್ತಿದ್ದಿರಿ. ಯಾರನ್ನು ಚಟ್ಣಿ ಮಾಡಿರುವಿರಿ ?" ಎಂದಳು.

ಪುಟ್ಟುವು "ಯಾವುದೋ ಕೆಟ್ಟ ಸ್ವಪ್ನ" ಎಂದು ಹೇಳಿ, ಗೆಡ್ಡೆಗೆಣಸುಗಳನ್ನು ತಿಂದು ಪರಮ ಸಾತ್ವಿಕರಾಗಿ ಆಚಂದ್ರಾರ್ಕ ಕೀರ್ತಿ ಗಳಿಸಿದ ವಸಿಷ್ಠ, ವಿಶ್ವಾಮಿತ್ರ, ಸನಕ ಇತ್ಯಾದಿ ಮಹರ್ಷಿಗಳನ್ನು ಧ್ಯಾನಮಾಡುತ್ತಾ ಮಲಗಿಕೊಂಡನು.

ರಾತ್ರಿಯು ಹೇಗೋ ಕಳೆದು ಬೆಳಗಾಯಿತು. ಭಾನುವಾರ, ರಜ ದಿವಸವಾದುದರಿಂದ ಮನೆಯಲ್ಲಿ ಊಟ ಹೊತ್ತು ; ಆದ್ದರಿಂದ ಬೆಳಿಗ್ಗೆ ಸ್ವಲ್ಪ ಭಾರಿಯಾಗಿಯೇ ತಿಂಡಿ, ಆ ದಿನ, ಬಹಳ ದಿವಸಗಳ ಮೇಲೆ ಮಸಾಲೆ ದೋಸೆಯನ್ನು ಮಾಡಿದ್ದರು. ಬಿಸಿಬಿಸಿ ದೋಸೆ, ಒಳ್ಳೆ ಮಸಾಲೆ ಹಾಕಿದ ಈರುಳ್ಳಿ ಆಲೂಗಡ್ಡೆ ಪಲ್ಯ, ಕೇಳಬೇಕೆ ಅದರ ಸ್ವಾರಸ್ಯ ! ಎಲ್ಲರೂ ಹಿ ಹಿ! ಎಂದು ಹಾಕರಿಸುತ್ತಾ ಬಾಯಿ ಚಪ್ಪರಿಸುತ್ತಾ, ನಾಲ್ಕು–ಐದು ಮಸಾಲೆ ದೋಸೆಗಳನ್ನು ಹೊಡೆಯುತ್ತಿದ್ದರು, ಪುಟ್ಟುವಿನ ತಾಯಿಯು "ಮಗೂ, ನಿನಗೋಸ್ಕರ ಎರಡು ಖಾಲಿ ದೋಸೆ ಹಾಕಿಟ್ಟಿದೇನೆ. ಸ್ವಲ್ಪ ಸಕ್ಕರೆ ಹಾಕಿಕೊಡಲೆ?" ಎಂದಳು.

ಎರಡು ವಾರಗಳಿಂದ ಸಪ್ಪೆ ತುತ್ತು ಸಿಹಿ ತಿಂದು ಪುಟ್ಟುವಿಗೆ ನಾಲಿಗೆಯೆಲ್ಲಾ ಕೆಟ್ಟುಹೋಯಿತು. ಸಕ್ಕರೆ ಹಾಕಿದ ಖಾಲಿ ದೋಸೆಗಳನ್ನು ನೋಡಿದೊಡನೆಯೇ ವಾಂತಿ ಬರುವ ಹಾಗಾಯಿತು. "ನನಗೇನೂ ಬೇಡ, ಮೈಯಲ್ಲಿ ಸರಿಯಿಲ್ಲ" ಎಂದು ಹೇಳಿ ಬರೀ ಕಾಫಿ ಕುಡಿದು ಕೊಠಡಿಗೆ ಹೊರಟುಹೋದನು.

ತುಂಬಾ ಬೇಸರ. ಏನೋ ಜುಗುಪ್ಸೆ, ಓದೋಣವೆಂದು ಕೂತನು. ಪುಸ್ತಕವು ಬೇಜಾರಾಗಿ ಅದನ್ನು ಒಂದು ಮೂಲೆಗೆ ಎಸೆದನು–ಹಾಳೆ ತೆಗೆದ ತಕ್ಷಣ "ಭಾನುವಾರ" ಎಂಬ ಪದವೇ ಕಣ್ಣಿಗೆ ಬೀಳಬೇಕೆ ? ಊರಿಗೆ ಹೆಸರಿಟ್ಟರೂ, ಹಾಗೆಯೇ ಹೆಸರಿಡುವುದು? ಬರಿಯೋಣವೆಂದು ನೋಡಿದನು. ಮಸಿಕುಡಿಕೆಯಲ್ಲಿ ಮಸಿಯೇ ಆಗಿಹೋಗಿದ್ದಿತು. ಕುಡಿಕೆಯನ್ನು ಎತ್ತಿ ಕುಕ್ಕಿದನು– ಎರಡು ಹೋಳಾಯಿತು. ಲೇಖನಿಯನ್ನು ಕುಕ್ಕಿದನು– ಮುಳ್ಳು ಮುರಿಯಿತು. ಇದರಲ್ಲಿ ಏನೋ ಒಂದು ಬಗೆಯ ಸಮಾಧಾನವು ಕಂಡುಬಂದಿತು. ಮೇಜಿನ ಮೇಲಿದ್ದ ಪದಾರ್ಥಗಳನ್ನೆಲ್ಲಾ ಒಂದೊಂದನ್ನಾಗಿ ಎತ್ತಿ ಒಗೆಯತೊಡಗಿದನು. ಗಾಜಿನ ಪೇಪರ್ ವೇಟ್, ಗಾಜಿನ ಬಟ್ಟಲು, ಗಾಜಿನ ದೀಪ, ಎಲ್ಲವನ್ನೂ ನೆಲದ ಮೇಲೆ ಬಡಿದನು. ಅವು ಪುಡಿಯಾಗುವುದನ್ನು ನೋಡಿ ವಿಕಟವಾಗಿ ನಕ್ಕನು. ರಾತ್ರಿ ಚಟ್ಣಿ, ಉಪ್ಪಿನಕಾಯಿ ಕನಸಿನಲ್ಲಿ ಕಿಲಕಿಲ ನಕ್ಕದ್ದು ಜ್ಞಾಪಕಕ್ಕೆ ಬಂದಿತು, ತಾನೂ ಹಾಗೆಯೇ ನಗುವುದಕ್ಕೆ ಶುರು ಮಾಡಿದನು. ಮೇಜಿನ ಮೇಲಿದ್ದ ಸಾಮಾನೆಲ್ಲಾ ಮುಗಿಯಿತು. ಪುಸ್ತಕಗಳನ್ನು ತೆಗೆಯತೊಡಗಿದನು........

ಅಷ್ಟು ಹೊತ್ತಿಗೆ ಸರಿಯಾಗಿ ಯಾರೋ ಒಬ್ಬರು ಒಳಗೆ ಬಂದರು–ಅವನ ಭಾವಮೈದ, ಮತ್ತು ನಾದಿನಿಯ ಗಂಡ. ಮೈದುನನು "ಭಾವಯ್ಯಾ, ಅಪ್ಪ, ಅಮ್ಮ, ಊರಿಂದ ನಿಮ್ಮನ್ನು ನೋಡುವುದಕ್ಕೆ ಬಂದಿದ್ದಾರೆ. ಕೆಳಗೆ ನಿಮ್ಮ ತಾಯಿಯ ಹತ್ತಿರ

ಮಾತಾಡುತ್ತಿದಾರೆ........ಅಲ್ಲ, ನಿನ್ನೆ ನೀವು ತಂದು ಕೊಡುತ್ತೇನೆಂದು ಹೇಳಿದ ಫೌಂಟನ್‌ಪೆನ್ ತಂದಿರಾ?" ಎಂದನು.

ನಾದಿನಿಯ ಗಂಡ "ಏನು ಪುಟ್ಟೂರಾವ್, ಇವತ್ತು ಮ್ಯಾಟಿನಿ ಸಿನಿಮಾಗೆ ಕರೆದುಕೊಂಡು ಹೋಗುತ್ತೇನೆಂದು ಹೇಳಿದ್ದಿರಲ್ಲಾ, ಎಷ್ಟು ಹೊತ್ತಿಗೆ ಹೊರಡೋಣ?" ಎಂದನು.

ಪುಟ್ಟೂರಾಯನು "ಫೌಂಟನ್ ಪೆನ್ ! ಸಿನಿಮಾ ! ಸಿನಿಮಾ, ಫೌಂಟನ್ ಪೆನ್! ಹಹ್ಹಹ್ಹ!....ತೆಗೆದುಕೊ ಫೌಂಟನ್ ಪೆನ್!" ಎಂದು ಒಂದು ದಪ್ಪ ಪುಸ್ತಕವನ್ನು ತೆಗೆದು ಎಸೆದನು. ಅದು ಗುರಿಯಾಗಿ ಬಂದು ಮೈದುನನ ಮೂಗನ್ನು ಅಪ್ಪಿತು. ಮತ್ತೊಂದು ಪುಸ್ತಕವು ನಾದಿನಿಯ ಗಂಡನ ಎದೆಯನ್ನು ತಾಕಿತು. ಇಬ್ಬರೂ ಬೆಪ್ಪಾದರು. ಮತ್ತೆರಡು ಪುಸ್ತಕಗಳು ಬಂದವು, ಅವುಗಳ ಹಿಂದೆ ಪುಟ್ಟೂರಾಯನೂ ಹಾರಿಬಂದನು. ನಾದಿನಿಯ ಗಂಡನು ತಪ್ಪಿಸಿಕೊಂಡು ಬಂದು ಸೋಫಾದ ಹಿಂದೆ ಔತುಕೊಂಡನು. ಮೈದುನ ಸಿಕ್ಕಿಹಾಕಿಕೊಂಡನು. ಪುಟ್ಟುವು ಅವನನ್ನು ಗಿರಗಿರ ತಿರುಗಿಸಿ ನೆಲಕ್ಕೆ ಅಪ್ಪಳಿಸಿ, ಹೊಸ್ತಿಲ ಮೇಲಕ್ಕೆ ಎಳೆದು, ಒಂದು ಒದೆತ ಕೊಟ್ಟನು– ಮೈದುನನು ಮಿಂಚಿನ ವೇಗದಿಂದ ಮೆಟ್ಟಿಲುಗಳ ಕೆಳಗೆ ಉರುಳಿದನು ! ಪುಟ್ಟುವು ನಾದಿನಿಯ ಗಂಡನ ಕಡೆಗೆ ತಿರುಗಿದನು. ಪೈಲ್ವಾನನು ಪಟ್ಟಿಗೆ ಹೊಂಚುಹಾಕುವಂತೆ ಇಬ್ಬರೂ ಸೋಫಾ ಸುತ್ತಲೂ ಸುತ್ತುತ್ತಾ ಹೊಂಚು ಹಾಕತೊಡಗಿದರು. ಇದ್ದಕ್ಕಿದ್ದ ಹಾಗೆ ಪುಟ್ಟೂರಾಯನಿಗೆ ಚಿಕ್ಕಂದಿನಲ್ಲಿ ಆಡುತ್ತಿದ್ದ "ಗುಡುಗುಡು" ಆಟವು ಜ್ಞಾಪಕಕ್ಕೆ ಬಂದಿತು. ಅದರಲ್ಲಿಯೂ ಹೀಗೆಯೇ ಗೀರಿನ ಹತ್ತಿರ ಹೊಂಚುಹಾಕುವುದು ! ಒಡನೆಯೇ ಬಾಯಲ್ಲಿ "ಭಲ್, ಗುಡು ಗುಡು ಗುಡು" ಎಂದು ಗುಡುಗುತ್ತಾ, ಸಮಯ ನೋಡಿ ತಟಕ್ಕನೆ ಹಾರಿದನು.....

ಕೆಳಗೆ, ಪುಟ್ಟೂರಾಯನ ಅತ್ತೆ ಮಾವಂದಿರು ಅಳಿಯನನ್ನು ನೋಡೋಣವೆಂದು ಊರಿನಿಂದ ಬಂದವರು ಬೀಗಿತ್ತಿಯ ಸಂಗಡ ಸ್ವಲ್ಪ ಮಾತನಾಡಿ, ಮೊದಲು ಅಳಿಯನನ್ನು ನೋಡಿ ಆಮೇಲೆ ಸಾವಕಾಶವಾಗಿ ಮಾತಾಡೋಣವೆಂದು ಹೇಳಿ ಮಹಡಿ ಮೆಟ್ಟಿಲು ಹತ್ತತೊಡಗಿದರು. ಎರಡು ಮೆಟ್ಟಿಲು ಹತ್ತುವುದರಲ್ಲಿಯೇ, ಯಾವುದೋ ಒಂದು ಉಂಡೆಯಾದ ಪದಾರ್ಥವು "ಸುಯ್" ಎಂದು ಕವಣೆಯಿಂದ ಬೀಸಿದ ಕಲ್ಲಿನಂತೆ ಬಂದು ಅವರಿಗೆ ತಗಲಿ, ನೆಲದಮೇಲೆ ಮೂರು ಮಾರು ದರದಲ್ಲಿ ಹೋಗಿ ಬಿದ್ದಿತು. ಏನಿರಬಹುದೆಂದು ನೋಡಿದರೆ, ತಮ್ಮ ಮಗ ರಾಮು! ಮೂಗಿನಿಂದ ಧಾರಾಕಾರವಾಗಿ ರಕ್ತ ತಲೆಯಲ್ಲಿ ದೊಡ್ಡ ಗಾಯ. "ಅಯ್ಯೋ, ಇದೇನೋ ರಾಮು!" ಎಂದು ಓಡಿಹೋಗಿ ಅವನಿಗೆ ಶೈತ್ಯೋಪಚಾರ ಮಾಡಲಾರಂಭಿಸಿದರು.

ರಾಮುವಿಗೆ ಮಾತನಾಡುವುದಕ್ಕೆ ಚೈತನ್ಯವಿರಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ "ಅಮ್ಮಾ......ಮೇಲೆ.......ಭಾವಯ್ಯ !.... ಹುಚ್ಚು !" ಎಂದನು ಅದಕ್ಕೆ ಸರಿಯಾಗಿ ಮಹಡಿಯಲ್ಲಿ ದೊಡ್ಡ ಗಡಿಬಿಡಿ ಕೇಳಿಸಿತು ಕುರ್ಚಿಗಳು, ಮೇಜುಗಳು ಉರುಳಿಬಿದ್ದ ಶಬ್ದ, ಎಲ್ಲರೂ ಮೇಲಕ್ಕೆ ಓಡಿದರು. ಪುಟ್ಟುವಿನ ಕೊಠಡಿಗೆ ನುಗ್ಗಿದರು. ಸಾಮಾನುಗಳೆಲ್ಲಾ ಚೆಲ್ಲಾಪಿಲ್ಲಿ.......ಕೊಠಡಿ ಮಧ್ಯದಲ್ಲಿ ಪುಟ್ಟೂರಾಯನು ನಾದಿನಿಯ ಗಂಡನನ್ನು ಕೆಳಗೆ ಹಾಕಿ ಅದುಮಿಕೊಂಡು ಎದೆಯ ಮೇಲೆ ಕೂತು "ಭಲ್, ಗುಡುಗುಡು" ಹೇಳುತ್ತಿದ್ದಾನೆ!

ಸರಿ, ದೊಡ್ಡ ಕೋಲಾಹಲ, ಎಲ್ಲರೂ ಸಾಹಸ ಮಾಡಿ ಅರ್ಧ ಉಸಿರು ಹೋಗಿದ್ದ ನಾದಿನಿಯ ಗಂಡನನ್ನು ಬಿಡಿಸಿಕೊಂಡರು. ಪುಟ್ಟುವು ವಿಕಾರವಾಗಿ ನಗುತ್ತಾ ಕುಣಿಯತೊಡಗಿದನು. ಎಲ್ಲರೂ ಸೇರಿ ಅವನನ್ನು ಹಿಡಿದು ಒಂದು

ಕುರ್ಚಿಗೆ ಹಗ್ಗ ಹಾಕಿ ಬಿಗಿದು ಕಟ್ಟಿದರು. ರಾಮುವನ್ನು ಆಸ್ಪತ್ರೆಗೆ ಸಾಗಿಸಿದರು. ಸದ್ಯಕ್ಕೆ ಜೀವಕ್ಕೇನೂ ಅಪಾಯವಿರಲಿಲ್ಲ. ಸಿನಿಮಾಗೆಂದು ಬಂದ ನಾದಿನಿಯ ಗಂಡನಿಗೆ ಮೈಯೆಲ್ಲಾ ಬಾಸುಂಡೆಯಾಗಿ ಬರೀ ಭಯದಲ್ಲಿಯೇ ಅರ್ಧ ಜೀವ ಹೋಗಿತ್ತಲ್ಲದೆ ಮತ್ತೇನೂ ಆಗಿರಲಿಲ್ಲ. ಪುಟ್ಟುವಿಗಾದರೋ, ಬುದ್ಧಿ ಭ್ರಮಣೆಯಾಗಿಬಿಟ್ಟಿದೆ ಎಂದು ಮಂತ್ರವಾದಿಗಳು, ವೈದ್ಯರು, ಹಕೀಮರು ಎಲ್ಲರನ್ನೂ ಕರೆಸಿದರು. ಮಂತ್ರವಾದಿಯು ಬಂದು ನೋಡಿ ಇವನಿಗೆ "ಮೋಹಿನಿ ಹಿಡಿದಿದೆ, ಬಿಡಿಸಬೇಕು" ಎಂದನು. ಪಂಡಿತರು "ಪಿತ್ತ ವಿಕಾರವಾಗಿದೆ, ಈಗಲೇ ಕಷಾಯ ಕೊಡುತ್ತೇ ಎಂದರು. ಶಾಸ್ತ್ರಿಗಳು ನಂಜುಂಡೇಶ್ವರನಿಗೆ ಮುಡುಪು ಕಟ್ಟಿಡಿ ; ಒಂದು ಯಂತ್ರ ಕಟ್ಟುತ್ತೇವೆ, ವಾಸಿಯಾಗುತ್ತೆ" ಎಂದರು. ಒಬ್ಬ ದೊಡ್ಡ ಡಾಕ್ಟರು ಬಂದು "ಇವನಿಗೆ ಹುಚ್ಚು– ಒಡನೆಯೇ ಇಂಜಕ್ಷನ್ ಕೊಡಬೇಕು. ಬೆಲೆ ಮೂವತ್ತು ರೂಪಾಯಿ" ಎಂದು ದುಡ್ಡಿಸುಕೊಂಡು "ನಾಳೆ ಆಸ್ಪತ್ರೆಗೆ ಕಳುಹಿಸಿಬಿಡಿ" ಎಂದು ಹೇಳಿ ಹೊರಟುಹೋದರು.

ದಿನವೆಲ್ಲಾ ಪುಟ್ಟೂರಾಯನನ್ನು ಕುರ್ಚಿಯಲೇ ಕಟ್ಟಿ, ಕೊಠಡಿಗೆ ಬೀಗ ಹಾಕಿದ್ದರು. ಮನೆಯಲ್ಲಿ ಒಬ್ಬರಿಗಾದರೂ ಹರ್ಷವಿಲ್ಲ. ಎಂದೂ ಇಲ್ಲದ ಅಳಿಯನನ್ನು ನೋಡುವುದಕ್ಕೆಂದು ಬಂದರೆ ಹೀಗಾಗಬಹುದೆ ಎಂದು ಅವನ ಅತ್ತೆ ಮಾವಂದಿರಿಗೆ ಸಂಕಟ, ಸಾಲದ್ದಕ್ಕೆ ತಮ್ಮ ಮಗನಿಗೂ ಇನ್ನೊಬ್ಬ ಅಳಿಯನಿಗೂ ಆಗಿರುವ ವಿಪತ್ತು ಬೇರೆ, ಹಾಳು ಯಾವ ಹೊತ್ತಿನಲ್ಲಿ ಈ ಬೀಗರು ಬಂದರೋ ಎಂದು ಪುಟ್ಟುವಿನ ತಾಯಿಗಳಿಗೆ.....

ರಾತ್ರಿಯಾಯಿತು. ಪುಟ್ಟುವಿನ ಉದ್ವೇಗವು ಸ್ವಲ್ಪ ಕಡಿಮೆಯಾದಂತಿತ್ತು ಕೊನೆಗೆ ಅವನನ್ನು ಬಿಚ್ಚಿ ಮಂಚದ ಮೇಲೆ ಮಲಗಿಸಿ ಕೈ ಕಾಲುಗಳನ್ನು ಕಟ್ಟಿಹಾಕಿದರು. ಅವನ ಹೆಂಡತಿಯು "ರಾತ್ರಿ ನಾನು ನೋಡಿಕೊಳ್ಳುತ್ತೇನೆ ನನಗೇನೂ ಭಯವಿಲ್ಲ" ಎಂದು ರಾತ್ರಿಯೆಲ್ಲಾ ಅವನ ಪಕ್ಕದಲ್ಲಿಯೇ ಕೂತಳು. ಅರ್ಧರಾತ್ರಿ ಸಮಯ. ಸ್ವಲ್ಪ ಜೂಕರಿಸುತ್ತಿದ್ದ ಪುಟ್ಟುವಿಗೆ ಎಚ್ಚರವಾಯಿತು ಬೆಳಗ್ಗೆಯಿಂದ ಏನೂ ತಿಂದಿರಲಿಲ್ಲ. ಬಹಳ ಹಸಿವಾಯಿತು. ನಿಟ್ಟುಸಿರು ಬಿಟ್ಟನು. ಅವನ ಹೆಂಡತಿಯು ದುಃಖದಿಂದ "ಅಲ್ಲ, ಏನೇನೋ ಹಾಳು ಪುಸ್ತಕಗಳನ್ನು ಓದಿ ಇಲ್ಲದ ಪಥ್ಯವನ್ನೆಲ್ಲಾ ಮಾಡುತ್ತೀರಿ, ಅದರಿಂದಲೇ ಹೀಗಾಗಿದೆ ಎಂದು ಖಂಡಿತ ನನ್ನ ನಂಬಿಕೆ. ದಮ್ಮಯ್ಯ, ಈ ಪಥ್ಯವನ್ನು ಸಾಕು ಮಾಡಿ" ಎಂದು ಬೇಡಿದಳು. ಪುಟ್ಟುವಿಗೆ ಹೊಟ್ಟೆಯಲ್ಲಿ ಹಸಿವು, ಹೆಂಡತಿಯ ಈ ದೈನ್ಯ ಬೇಡಿಕೆ. "ಏನು ಬುದ್ಧಿ ಇಲ್ಲದ ಕೆಲಸ ಮಾಡಿಕೊಂಡೆ" ಎಂದಂದುಕೊಂಡು "ಆಗಲಿ, ಈ ಪಥ್ಯವನ್ನು ಇಲ್ಲಿಗೇ ನಿಲ್ಲಿಸುತ್ತೇನೆ. ಸಾವಿರ ಕಾಲಕ್ಕೂ ಬೇಡ, ನನಗೆ ಈ ಸಾತ್ವಿಕಾಹಾರ ಎಂದನು.

ಇದನ್ನು ಕೇಳಿ ಆಕೆಗೆ ಅತ್ಯಂತ ಸಂತೋಷವಾಯಿತು. ಒಡನೆಯೇ ಗಂಡನ ಕಟ್ಟುಗಳನ್ನೆಲ್ಲಾ ಬಿಚ್ಚಿದಳು. ಪುಟ್ಟೂರಾಯನು "ಹಸಿವಾಗುತ್ತಿದೆ" ಎಂದನು. ಇಬ್ಬರೂ ಎದ್ದು ಮೆಲ್ಲಗೆ ಹೆಜ್ಜೆಯ ಮೇಲೆ ಹೆಜ್ಜೆ ಹಾಕುತ್ತಾ ಅಡಿಗೆಮನೆಗೆ ಹೋದರು. ಏನೂ ಸಿಕ್ಕಲಿಲ್ಲ. ರಾತ್ರಿ ಮಿಕ್ಕಿದ್ದ ಅನ್ನವನ್ನು ಕಲಗಚ್ಚಿಗೆಂದು ಒಂದುಕಡೆ ತೆಗೆದಿಟ್ಟಿದ್ದರು. ಆ ಅನ್ನವನ್ನೇ ತೆಗೆದುಕೊಂಡು ಸ್ವಲ್ಪ ಸಾರಿನ ಪುಡಿ, ಉಪ್ಪು, ತುಪ್ಪ ಹಾಕಿ ಕಲಸಿಕೊಂಡು ತಿಂದನು. ಖಾರವನ್ನು ತಿಂದು ಎಷ್ಟೋ ದಿವಸಗಳಾಗಿದ್ದ ಪುಟ್ಟುವಿಗೆ ಅದು ಅಮೃತದಂತಿತ್ತು. "ಖಾರ ಬಿಡುವುದಕ್ಕೆ ನಿಜವಾಗಿಯೂ ನನಗೆ ಹುಚ್ಚೇ ಹಿಡಿದಿತ್ತು" ಎಂದುಕೊಂಡನು. ಅದನ್ನು ಮುಗಿಸಿ, ಒಂದು ಬಟ್ಟಲು ಮಜ್ಜಿಗೆ ಕುಡಿದು ಮತ್ತೆ ಮೆಲ್ಲಗೆ ಕೊಠಡಿಗೆ ಬಂದನು.

ಹೆಂಡತಿಯು "ನನ್ನಾಣೆ, ಖಂಡಿತ ಇನ್ನು ಮೇಲೆ ಈ ರೀತಿ ಪಥ್ಯ ಮಾಡುವುದಿಲ್ಲವೆಂದು ಮಾತು ಕೊಡಿ" ಎಂದಳು.

ಪುಟ್ಟುವು "ಆ ಪುಸ್ತಕಗಳನ್ನೆಲ್ಲ ನಾಳೆಯೇ ಸುಟ್ಟುಬಿಡುತ್ತೇನೆ. ಇನ್ನು ಮೇಲೆ ಹೀಗೆ ಮಾಡುವುದಿಲ್ಲ" ಎಂದು ಭಾಷೆ ಕೊಟ್ಟನು.

ಹಾಗೆಯೇ ಆಲೋಚಿಸುತ್ತಾ, "ಆ ಸಾರಿನ ಪುಡಿ ಎಷ್ಟು ಚೆನ್ನಾಗಿತ್ತು!" ಎಂದನು.

"ಅಯ್ಯೋ ಅದಕ್ಕೇನು, ನಾಳೆ ಇನ್ನೂ ತಿಂದರಾಯಿತು ಅಂದ್ರೆ...."

"ಉಪ್ಪಿನಕಾಯಿ ಬೇಕು...."

"ಉಪ್ಪಿನಕಾಯಿ ಬೇಕಾದ ಹಾಗೆ ಇದ್ದೇ ಇದೆಯಲ್ಲಾ–ನಿಂಬೇಕಾಯಿ, ನೆಲ್ಲಿಕಾಯಿ, ಹೇರಳೇಕಾಯಿ ಎಲ್ಲಾ ಇದೆ. ಎಷ್ಟು ಬೇಕಾದರೂ ಹಾಕಿಸಿಕೊಳ್ಳಿ"

"ಉಂಡು ಮಾವಿನಕಾಯನ್ನೂ ಹಾಕಬೇಕು.........ಹಾಗೇ ಸ್ವಲ್ಪ ಚಟ್ನಿಯನ್ನೂ ಮಾಡಿಸು, ನಾಳೆ."

"ಅಗತ್ಯವಾಗಿ ಆಗಲಿ, ಸ್ವಲ್ಪ ಖಾರಾಸೇವೆಯನ್ನೂ ಮಾಡಿಸಲೆ?"

"ಖಾರಾಬೂಂದಿ?"

"ಅದೂ; ಸ್ವಲ್ಪ ಖಾರದವಲಕ್ಕಿಯೂ...."

"ಆಗಲಿ, ಖಾರದ ಕೋಡುಬಳೆ, ಖಾರದ ಚಕ್ಕುಲಿ ಎಲ್ಲವನ್ನೂ ಮಾಡಿಸುತ್ತೇನೆ!"

ಈ ಸರಸಸಲ್ಲಾಪಗಳಲ್ಲೇ ರಾತ್ರಿಯೆಲ್ಲಾ ಕಳೆಯಿತು. ಮಾರನೆ ದಿನದಿಂದ ಪುಟ್ಟೂರಾಯನು ಬೇರೆ ಮನುಷ್ಯನಾದ ಅನ್ನಿ, ಅಂತೂ ಯಾಕೆ ಹೇಳಿದೆ ಅಂದರೆ– ಎಂದು ಹೇಳುತ್ತಾ ಭೀಮಣ್ಣನು ಸುತ್ತಲೂ ನೋಡುವುದರಲ್ಲಿ, ನಮ್ಮ ಹೊಸ ಸ್ನೇಹಿತರು ಮಾಯವಾಗಿದ್ದರು !

■

ಯುವಕನೊಬ್ಬ ಕೋರ್ಟ್ ಕಟಕಟೆ ಯಲ್ಲಿ ಆಪಾದಿತನಾಗಿ ನಿಂತಿದ್ದ. ಅನೇಕ ರೀತಿಯ ಆಲ್ಕೋಹಾಲ್ ಡ್ರಿಂಕ್ಸ್ ಗಳನ್ನು ಮಾರುತ್ತಿದ್ದ ಅಂಗಡಿ ಯಲ್ಲಿ ನುಗ್ಗಿ" ನೀರಾ "ಕುಡಿದು, ಬಹಳಷ್ಟು ನೀರಾ ಬಾಟಲ್ ಗಳನ್ನು ಕದ್ದಿದ್ದ ಆಪಾದನೆ ಇತ್ತು.

ಜಡ್ಜ್ ಆಶ್ಚರ್ಯ ಚಕಿತರಾಗಿ ಕೇಳಿ ದರು, ಅಲ್ಲಯ್ಯಾ, ಅಂಗಡಿಯಲ್ಲಿ ಬೇರೆ ಅನೇಕ ರೀತಿಯ

ಡ್ರಿಂಕ್ಸ್ ಗಳಿದ್ದರೂ..ನೀನು ನೀರಾ ವನ್ನೇ ಕುಡಿದು, ಕದ್ದೆ ಯಾಕೆ??

ಆಪಾದಿತ ಅಂದ, ಏನು ಮಾಡೋದು ಜಡ್ಜ್ ಸಾಹೇಬರೇ,

"ಉಪ್ಪಾ ತಿಂದಾ ಮ್ಯಾಲೇ ನೀರಾ ಕುಡಿಯಲೇ ಬೇಕು" ಅಂತ ಗಾದೆ ಮಾತು ಇದ್ಯಲ್ಲಾ , ಸಿನಿಮಾ ಹಾಡು ಕೂಡಾ ಇದ್ಯಲ್ಲ..ಅದು ನಿಜವೆಂದು ಪ್ರೂವ್ ಮಾಡಬೇಕು..ಅನಿಸಿ..

ನಾನು ಉಪ್ಪು ತಿಂದಿದ್ದೆ, ತಕ್ಷಣ" ನೀರಾ" ಕುಡಿಯಲೇ ಬೇಕು ಅಂತ ಅದನ್ನೇ ಸೆಲೆಕ್ಟ್ ಮಾಡ್ಕೊಂಡೆ ಅಂದಾಗ

ಜಡ್ಜ್ ಆದಿಯಾಗಿ ಕೋರ್ಟ್ ನಲ್ಲಿದ್ದವ್ರೆಲ್ಲಾ ಹೊಟ್ಟೆ ಹುಣ್ಣಾಗುವಂತೆ ನಕ್ಕರು.

–ಸುಮನಾ

**STATEMENT OF OWNERSHIP OF APARANJI**
**(KANNADA MONTHLY)**
**(SEE RULES AND FORM IV)**

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | V.R. Bharath |
| | Nationality | : | Indian |
| | Address | : | Ravi Graphics<br>49, 4th Cross, SSI Area<br>Rajajinagar<br>Bangalore - 560010 |
| 4. | Publisher's Name | : | Koravanji Aparanji Trust |
| | Address | : | No 36, 6th Main Road<br>Malleswaram<br>Bangalore - 560003 |
| 5. | Editor's Name | : | M. ShivaKumar |
| | Nationality | : | Indian |
| | Address | : | 36, 6th Main Road<br>Malleswaram<br>Bangalore - 560003 |
| 6. | Name and address of Individuals who own the Paper | : | Koravanji Aparanji Trust<br>36, 6th Main Road<br>Malleswaram<br>Bangalore - 560003 |

I M. Shivakumar hereby declare that the particulars given above are true to the best of my knowledge and belief.

1-3-2024
Bangalore

**M. ShivaKumar**
(Signature of the Publisher)